ಮಂಗಳವಾರ, ಸೆಪ್ಟೆಂಬರ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 263 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: ಗುಜರಾತ್ ಬಿಜೆಪಿಯ ಜಾತಿ ಪ್ರೀತಿ

ಇನ್ನೊಂದು ದಿನ ಇದ್ದಿದ್ದರೆ 3 ಜೀವಗಳು ಉಳಿಯುತ್ತಿದ್ದವು 6

ಕ್ಯಾಂಪಸ್‌ನಲ್ಲಿ ಗುಂಡಿನ ದಾಳಿ: ಎಂಟು ಸಾವು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,490	17,397	₹47,800 (ಬೆಂಗಳೂರು)	₹61,700 (ಬೆಂಗಳೂರು)	73.74

ಧಾರ್ಮಿಕ ಕಟ್ಟಡಗಳ ರಕ್ಷಣೆ

ಈಗಿರುವ ಅನಧಿಕೃತ ಧಾರ್ಮಿಕ ಸ್ಥಳಗಳನ್ನು ರಕ್ಷಿಸಲು ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂಜನಗೂಡು ತಾಲ್ಲೂಕಿನ ದೇವಸ್ಥಾನವೊಂದನ್ನು ಕೆಡವಿದ ಘಟನೆಯ ಬಗ್ಗೆ ವ್ಯಾಪಕ ವಿರೋಧ ವ್ಯಕ್ತವಾಗಿರುವ ಬೆನ್ನಲ್ಲೇ, ಸರ್ಕಾರದ ನಿಯಮಕ್ಕೆ ಒಳಪಟ್ಟ ಎಲ್ಲ ಅನಧಿಕೃತ 'ಧಾರ್ಮಿಕ ಕಟ್ಟಡ'ಗಳನ್ನು ಉಳಿಸಿಕೊಳ್ಳಲು ಮುಂದಾಗಿರುವ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಸೋಮವಾರ ಮಸೂದೆಯನ್ನು ಮಂಡಿಸಿದೆ.

ನಂಜನಗೂಡು ತಾಲ್ಲೂಕಿನ ಮಹದೇವಮ್ಮ ದೇವಸ್ಥಾನ ಕೆಡವಿದ ವಿಷಯ ಸಂಘ ಪರಿವಾರ, ಬಿಜೆಪಿ ಶಾಸಕರು ಮತ್ತು ಸಂಸದರ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರೂ ದೇವಸ್ಥಾನ ಕೆಡವಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ದಾವಣಗೆರೆಯಲ್ಲಿ ನಡೆದ ಬಿಜೆಪಿಯ ಕಾರ್ಯಕಾರಿಣಿ ಸಭೆಯಲ್ಲೂ ಈ ವಿಷಯದ ಮೇಲೆ ವಿಸ್ತೃತವಾಗಿ ಚರ್ಚೆ ನಡೆದಿತ್ತು.

ಈ ಪ್ರಕರಣವನ್ನು ಸೌಹಾರ್ದವಾಗಿ ಇತ್ಯರ್ಥಪಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿಯ ಹಿರಿಯ ನಾಯಕರು ಸಭೆ ನಡೆಸಿದ್ದರು. ಇದರ ಬೆನ್ನಲ್ಲೇ ಸೋಮವಾರ ಬೆಳಿಗ್ಗೆ ಸಚಿವ ಸಂಪುಟ ಸಭೆ ನಡೆಸಿ, 'ಧಾರ್ಮಿಕ ಕಟ್ಟಡ'ಗಳನ್ನು ರಕ್ಷಿಸಲು ಮಸೂದೆ ಮಂಡನೆಗೆ ತೀರ್ಮಾನಿಸಲಾಯಿತು. ಇದರ ಮೇಲೆ ಉಭಯ ಸದನಗಳಲ್ಲೂ ಚರ್ಚೆ ನಡೆಯಬೇಕಾಗಿದೆ.

ನಂಜನಗೂಡಿನ ದೇಗುಲ ಮರುನಿರ್ಮಾಣಕ್ಕೆ ಅನುದಾನ?

ನಂಜನಗೂಡಿನ ಮಹದೇವಮ್ಮ ದೇವಸ್ಥಾನದ ಮರು ನಿರ್ಮಾಣಕ್ಕೆ ₹20 ಲಕ್ಷ ಅನುದಾನ ನೀಡುವಂತೆ ನಂಜನಗೂಡು ಶಾಸಕ ಹರ್ಷವರ್ಧನ್, ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ. ಕಡತವನ್ನು ಮಂಡಿಸಿ ಮುಂದಿನ ಕ್ರಮ ಕೈಗೊಳ್ಳಲು ಮನವಿ ಪತ್ರದ ಮೇಲೆ ಬೊಮ್ಮಾಯಿ ಟಿಪ್ಪಣಿ ಬರೆದಿದ್ದಾರೆ. ಗ್ರಾಮಸ್ಥರು ನೀಡಿರುವ ಜಾಗದಲ್ಲಿ ದೇವಸ್ಥಾನ ಮರು ನಿರ್ಮಾಣ ಮಾಡಲು ಈ ಅನುದಾನ ನೀಡುವಂತೆ ಹರ್ಷವರ್ಧನ್ ಕೋರಿದ್ದಾರೆ.



ಸುಪ್ರೀಂಕೋರ್ಟ್ 2009 ರಲ್ಲಿ ನೀಡಿರುವ ಆದೇಶದಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಬೇಕು, ಇಲ್ಲವೇ ಸ್ಥಳಾಂತರಿಸಬೇಕು ಎಂದು ತಿಳಿಸಿತ್ತು.

ಮಸೂದೆ ಮಂಡನೆ: 'ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ಮಸೂದೆ 2021' ಅನ್ನು ವಿಧಾನಸಭೆಯಲ್ಲಿ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಮಂಡಿಸಿದರು.

ಇದರ ಸಾರಂಶ ಹೀಗಿದೆ–ರಾಜ್ಯದಲ್ಲಿರುವ ಎಲ್ಲ ಧಾರ್ಮಿಕ ಕಟ್ಟಡಗಳನ್ನು ರಕ್ಷಿಸಲಾಗುವುದು. ಆದರೆ, ಭವಿಷ್ಯದಲ್ಲಿ ಅನಧಿಕೃತವಾಗಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸುವುದನ್ನು ಮಸೂದೆ ನಿರ್ಬಂಧಿಸಿದೆ.

ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದರೂ, ಸರ್ಕಾರದ ನಿಯಮಗಳಿಗೆ ಅನುಸಾರ ಧಾರ್ಮಿಕ ಕಟ್ಟಡಗಳಿದ್ದರೆ ಅವುಗಳನ್ನು ತೆರವುಗೊಳಿಸುವಂತಿಲ್ಲ. ಸರ್ಕಾರದ ನಿಯಮಗಳಿಗೆ ಒಳಪಡದ ಧಾರ್ಮಿಕ ಕಟ್ಟಡಗಳನ್ನು ತೆರವು ಮಾಡಬಹುದು.

'ಧಾರ್ಮಿಕ ಕಟ್ಟಡ' ಗಳು ವ್ಯಾಪ್ತಿಗೆ, ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರ, ಬೌದ್ಧ ವಿಹಾರ ಇತ್ಯಾದಿ ಸೇರಿವೆ. ಇದರ ಅನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಸರ್ಕಾರದ ಅನುಮತಿ ಪಡೆಯದೇ ನಿರ್ಮಿಸಲಾಗಿದ್ದರೆ, ಅವುಗಳನ್ನು ಉಳಿಸಿಕೊಳ್ಳಲಾಗುವುದು. ಒಂದು ವೇಳೆ ಸುಪ್ರೀಂಕೋರ್ಟ್ ನಿರ್ದೇಶನ ಮೇರೆಗೆ ಕ್ರಮ ಜರುಗಿಸಿದರೂ, ಅಂತಹ ಧಾರ್ಮಿಕ ಕಟ್ಟಡಗಳಿಗೆ 'ಒಳ್ಳೆಯ ನಂಬಿಕೆಯಿಂದ ತೆಗೆದುಕೊಂಡ ಕ್ರಮ' ಎಂಬ ಕಾರಣದಿಂದ ರಕ್ಷಣೆಯನ್ನು ನೀಡುವ ಅಂಶವನ್ನೂ ಮಸೂದೆ ಒಳಗೊಂಡಿದೆ. ಎರಡೂ ಸದನಗಳಲ್ಲಿ ಮಸೂದೆ ಅಂಗೀಕಾರಗೊಂಡ ಬಳಿಕ ಕಾನೂನು ಜಾರಿಗೆ ಬರಲಿದೆ.

ಪ್ರತಿಭಟನೆ: ಮಹದೇವಮ್ಮ ದೇವಸ್ಥಾನ ಕೆಡವಿದ್ದ ಬಗ್ಗೆ ಕೆಲವು ಹಿಂದೂಪರ ಸಂಘಟನೆಗಳು ಹೋರಾಟ ನಡೆಸಿದ್ದವು. ಮೈಸೂರು ಸಂಸದ ಪ್ರತಾಪ ಸಿಂಹ ಅವರೂ ಆಕ್ರೋಶ ವ್ಯಕ್ತಪಡಿಸಿ, ಮುಖ್ಯಮಂತ್ರಿಯವರ ಜತೆ ಮಾತುಕತೆ ನಡೆಸಿ, ದೇವಸ್ಥಾನದ ಪುನರ್ ನಿರ್ಮಾಣಕ್ಕೂ ಆಗ್ರಹಿಸಿದ್ದರು. ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಇತ್ತೀಚೆಗೆ ಚಿಕ್ಕಮಗಳೂರಿಗೆ ಭೇಟಿ ನೀಡಿದಾಗ ಕೆಲವು ಸಂಘಟನೆಗಳಿಂದ ಪ್ರತಿಭಟನೆ ಬಿಸಿ ಎದುರಿಸಿದ್ದರು. ಹಿಂದೂ ಮಹಾಸಭಾ ಸಂಘಟನೆಯು ಮುಖ್ಯಮಂತ್ರಿಯಗೇ ಬೆದರಿಕೆ ಹಾಕಿತ್ತು.

ಇದರ ಬೆನ್ನಲ್ಲೇ ದೇವಸ್ಥಾನಗಳನ್ನು ತೆರವುಗೊಳಿಸುವ ಕಾರ್ಯವನ್ನು ತಕ್ಷಣವೇ ನಿಲ್ಲಿಸುವಂತೆ ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೆ, ನಂಜನಗೂಡು ತಾಲ್ಲೂಕಿನ ದೇವಸ್ಥಾನ ಪುನರ್ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಮೈಸೂರಿನ ವಿದ್ಯಾರ್ಥಿಗೆ ಎಲ್ಲ ಐದೂ ವಿಭಾಗಗಳಲ್ಲಿ ಮೊದಲ ರ್‍ಯಾಂಕ್

ಸಿಇಟಿ: ಮೇಘನ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆಗಸ್ಟ್ 28 ಮತ್ತು 29ರಂದು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಐದೂ ವಿಭಾಗಗಳಲ್ಲಿ ಮೈಸೂರಿನ ಪ್ರಮತಿ ಹಿಲ್ ವ್ಯೂ ಅಕಾಡೆಮಿಯ ವಿದ್ಯಾರ್ಥಿ ಎಚ್.ಕೆ. ಮೇಘನ್ ಮೊದಲ ರ್‍ಯಾಂಕ್ ಗಳಿಸಿ ಹೊಸ ದಾಖಲೆ ಬರೆದಿದ್ದಾರೆ.



ಮೇಘನ್

ಎಂಜಿನಿಯರಿಂಗ್, ಪಶುವೈದ್ಯ, ಬಿಎಸ್ಸಿ (ಕೃಷಿ), ಬಿ- ಫಾರ್ಮಾ, ಡಿ- ಫಾರ್ಮಾ, ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಿಇಟಿ ಫಲಿತಾಂಶವನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು ಸೋಮವಾರ ಪ್ರಕಟಿಸಿದರು.

'ಸಿಇಟಿಯಲ್ಲಿ ಈ ಬಾರಿ ಗಣಿತ ಮತ್ತು ಭೌತವಿಜ್ಞಾನ ವಿಷಯದಲ್ಲಿ ತಲಾ 3 ಅಂಕ ಕೃಪಾಂಕ ನೀಡಲಾಗಿದೆ. ಹೀಗೆ ಒಟ್ಟು 6 ಅಂಕಗಳು ಅಭ್ಯರ್ಥಿಗಳಿಗೆ ಸಿಕ್ಕಿವೆ. ಒಬ್ಬನೇ ವಿದ್ಯಾರ್ಥಿ ಎಲ್ಲ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿರುವುದು ಹೊಸ ದಾಖಲೆ' ಎಂದು ಅವರು ತಿಳಿಸಿದರು.

ಹೆಚ್ಚು ಅಂಕ ಗಳಿಸಿದವರು: 'ಎಂಜಿನಿಯರಿಂಗ್ ಮತ್ತು ಬಿ-ಫಾರ್ಮಾ ವಿಭಾಗದಲ್ಲಿ ರ್‍ಯಾಂಕ್ ಪಡೆದವರಲ್ಲಿ ಸಿಬಿಎಸ್‌ಇ ವಿದ್ಯಾರ್ಥಿಗಳು ಹೆಚ್ಚು ಇದ್ದಾರೆ. ಭೌತವಿಜ್ಞಾನ ವಿಷಯದಲ್ಲಿ ಯಾವ ಅಭ್ಯರ್ಥಿಯೂ 60ಕ್ಕೆ 60 ಅಂಕ ಪಡೆದಿಲ್ಲ. ಆದರೆ, ರಸಾಯನ ವಿಜ್ಞಾನದಲ್ಲಿ 3, ಗಣಿತದಲ್ಲಿ 6 ಹಾಗೂ ಜೀವವಿಜ್ಞಾನ ವಿಷಯದಲ್ಲಿ 50 ವಿದ್ಯಾರ್ಥಿಗಳು 60 ಅಂಕ ಗಳಿಸಿದ್ದಾರೆ.

ದ್ವಿತೀಯ ಪಿಯುಸಿ ಅಂಕಪಟ್ಟಿ ಸರಿಯಾಗಿ ಅಪ್‌ಲೋಡ್ ಮಾಡದ 6 ಸಾವಿರ ಅಭ್ಯರ್ಥಿಗಳು ಸೇರಿದಂತೆ ಒಟ್ಟು 12 ಸಾವಿರ ವಿದ್ಯಾರ್ಥಿಗಳ ಫಲಿತಾಂಶವನ್ನು ತಾಂತ್ರಿಕ ಕಾರಣದಿಂದ ತಡೆಹಿಡಿಯಲಾಗಿದೆ. ಅಂಕಪಟ್ಟಿಯ ಯಥಾಪ್ರತಿಯನ್ನು ಕೆಇಎ ಕಚೇರಿಗೆ ಇ-ಮೇಲ್ (keauthority-ka@nic.in) ಮೂಲಕ ಅಥವಾ ನೇರವಾಗಿ ಸಲ್ಲಿಸಿ ರ್‍ಯಾಂಕ್‌ಗಳನ್ನು ಪಡೆಯಬಹುದು.

> ಯೋಜನಾಬದ್ಧವಾಗಿ ಓದಿದರೆ ಖಂಡಿತ ಫಲ ಸಿಗುತ್ತದೆ. ನಮಗೆ ನಾವೇ ಸ್ಪರ್ಧಿಗಳೆಂದುಕೊಂಡರೆ ಯಶಸ್ಸು ಸುಲಭ. ವೈದ್ಯನಾಗುವ ಹಂಬಲವಿದೆ. ನೀಟ್‌ನಲ್ಲಿಯೂ ಉತ್ತಮ ಅಂಕಗಳ ನಿರೀಕ್ಷೆಯಲ್ಲಿದ್ದೇನೆ
>
> **ಎಚ್.ಕೆ.ಮೇಘನ್**
> ಪ್ರಮತಿ ಹಿಲ್ ವ್ಯೂ ಅಕಾಡೆಮಿ, ಮೈಸೂರು.

6ನೇ ಪುಟ ನೋಡಿ

ದ್ವಿತೀಯ ಪಿಯುಸಿ: 29.91ರಷ್ಟು ಉತ್ತೀರ್ಣ

ಬೆಂಗಳೂರು: 2020–21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಫಲಿತಾಂಶ ತಿರಸ್ಕರಿಸಿದ್ದ ಹೊಸ ವಿದ್ಯಾರ್ಥಿಗಳು, ಖಾಸಗಿ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಆಗಸ್ಟ್–ಸೆಪ್ಟೆಂಬರ್‌ನಲ್ಲಿ ನಡೆದಿದ್ದ ವಾರ್ಷಿಕ ಪರೀಕ್ಷೆಯಲ್ಲಿ ಶೇ 29.91ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಒಟ್ಟು 18,413 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 5,507 ಮಂದಿ ಪಾಸಾಗಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ಫಲಿತಾಂಶ ಪ್ರಕಟಿಸಿದರು.

ಪಾಸಾದವರ ಪೈಕಿ, 580 ಮಂದಿ ಉನ್ನತ ಶ್ರೇಣಿ ಪಡೆದರೆ, 1,939 ಮಂದಿ ಪ್ರಥಮ ಶ್ರೇಣಿ, 1,578 ಮಂದಿ ದ್ವಿತೀಯ ಶ್ರೇಣಿ ಪಡೆದಿದ್ದಾರೆ.

592 ಹೊಸಬರ ಪೈಕಿ 556, ಪುನರಾವರ್ತಿತ 351ರಲ್ಲಿ 183, ಖಾಸಗಿ ವಿದ್ಯಾರ್ಥಿಗಳಲ್ಲಿ 17,470ರಲ್ಲಿ 4,768 ಮಂದಿ ಪಾಸಾಗಿದ್ದಾರೆ. ಕಲಾ ವಿಭಾಗದಲ್ಲಿ 12,203ರಲ್ಲಿ 3,912, ವಾಣಿಜ್ಯ ವಿಷಯದಲ್ಲಿ 6,114ರಲ್ಲಿ 1,527, ವಿಜ್ಞಾನದಲ್ಲಿ 96ರಲ್ಲಿ 68 ವಿದ್ಯಾರ್ಥಿಗಳ ಪಾಸಾಗಿದ್ದಾರೆ. ಈ ಲಿಂಕ್‌ನಲ್ಲಿ www.karresults.nic.in ಫಲಿತಾಂಶ ಸಿಗಲಿದೆ.

30ರಿಂದ ದಾಖಲಾತಿ ಪರಿಶೀಲನೆ

'ಇದೇ 30ರಿಂದ ದಾಖಲಾತಿ ಪರಿಶೀಲನೆ ಆರಂಭಿಸಲಾಗುವುದು. ಅಭ್ಯರ್ಥಿಗಳ ಅನುಕೂಲಕ್ಕಾಗಿ ಮೂಲ ದಾಖಲಾತಿಗಳ ಪರಿಶೀಲನೆಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ 'ಸೌಲಭ್ಯ ಕೇಂದ್ರ'ಗಳನ್ನು ತೆರೆಯಲಾಗುವುದು ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

'ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗೆ ಸಮೀಪದ ಸೌಲಭ್ಯ ಕೇಂದ್ರಗಳಲ್ಲಿ ಹಾಜರಾಗಬೇಕು. ಅಗತ್ಯವಿರುವ ಎಲ್ಲ ಮೂಲ ದಾಖಲಾತಿಗಳನ್ನು ಸಿದ್ಧವಾಗಿ ಇಟ್ಟುಕೊಳ್ಳಬೇಕು' ಎಂದರು.

6ನೇ ಪುಟ ನೋಡಿ

ತೆರವಾಗಿದ್ದ ಕಲ್ಯಾಣ ಮಂಟಪಕ್ಕೂ ನುಗ್ಗಿತು ನೀರು!

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರಾಥಮಿಕ ರಾಜಕಾಲುವೆಯನ್ನು ಒತ್ತುವರಿ ಮಾಡಿ ನಿರ್ಮಿಸಿದ್ದ ಪದ್ಮಾವತಿ ಮತ್ತು ಮೀನಾಕ್ಷಿ ಕಲ್ಯಾಣ ಮಂಟಪಗಳನ್ನು 2016ರ ಆ. 18ರಂದೇ ತೆರವುಗೊಳಿಸಲಾಗಿದೆ ಎನ್ನುತ್ತದೆ ಬಿಬಿಎಂಪಿಯು ಲೆಕ್ಕಪರಿಶೋಧನೆಗೆ ನೀಡಿದ ಮಾಹಿತಿ. ಆದರೆ, 2020ರ ಅ.20 ರಂದು ಈ ಕಲ್ಯಾಣ ಮಂಟಪದ ಭೋಜನಶಾಲೆಗೆ ನೀರು ನುಗ್ಗಿದೆ! 3

ಬಾಲಬ್ರೂಯಿ ಜಾಗದಲ್ಲಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್'?

ಬೆಂಗಳೂರು: ಪಾರಂಪರಿಕ ಕಟ್ಟಡವಾದ ಬಾಲಬ್ರೂಯಿ ಜಾಗದಲ್ಲಿ ಶಾಸಕರಿಗಾಗಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. 3

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಲೆ ಏರಿಕೆ: ಸೈಕಲ್ ಏರಿದ 'ಕೈ' ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೈಲ ಹಾಗೂ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಖಂಡಿಸಿ ವಾರದ ಹಿಂದೆ ಎತ್ತಿನ ಗಾಡಿಯಲ್ಲಿ ವಿಧಾನ ಸೌಧಕ್ಕೆ ಹೋಗಿದ್ದ ಕಾಂಗ್ರೆಸ್ ನಾಯಕರು, ಸೋಮವಾರ ಸೈಕಲ್ ಏರಿ ಹೋದರು. ಆ ಮೂಲಕ, ರಾಜ್ಯ ಸರ್ಕಾರಕ್ಕೆ ಕಾಂಗ್ರೆಸ್ ಮತ್ತೆ ಬಿಸಿ ಮುಟ್ಟಿಸಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ನೇತೃತ್ವದಲ್ಲಿ ಶಾಸಕರು, ಮುಖಂಡರು ಕೆಪಿಸಿಸಿ ಕಚೇರಿಯಿಂದ ವಿಧಾನಸೌಧವರೆಗೆ ಸೈಕಲ್ ಜಾಥಾ ನಡೆಸಿದರು.

ಜಾಥಾದಲ್ಲಿ ಸೈಕಲ್ ತುಳಿದ ಕಾರ್ಯಕರ್ತರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. 'ಜನಪರ ಕಾಳಜಿ ಇಲ್ಲದ ಸರ್ಕಾರ ಇದು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, 'ಅಗತ್ಯ ವಸ್ತುಗಳು ಹಾಗೂ ಅಡುಗೆ ಅನಿಲ ಬೆಲೆ ಏರಿಕೆಯಿಂದ ಜನಸಾಮಾನ್ಯರು ಸಂಕಟಪಡುತ್ತಿದ್ದಾರೆ. ಅಡುಗೆ ಅನಿಲ ಮೇಲಿನ ಸಹಾಯಧನವನ್ನೂ ರದ್ದುಪಡಿಸಲಾಗಿದೆ. ಕೇಂದ್ರ ಸರ್ಕಾರ ಯಾವುದೇ ತೆರಿಗೆಯನ್ನೂ ಕಡಿಮೆ ಮಾಡುತ್ತಿಲ್ಲ' ಎಂದು ಕಿಡಿಕಾರಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಆಡಳಿತದಲ್ಲಿರುವ ಬಿಜೆಪಿ ಸರ್ಕಾರ 'ಪಿಕ್ ಪಾಕೆಟ್' ಸರ್ಕಾರ. ಬಡಜನರ ಜೇಬಿಗೆ ಕತ್ತರಿ ಹಾಕುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗುತ್ತಿದೆ. ಅಷ್ಟಾದರೂ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇಳಿಕೆಯಾಗುತ್ತಿಲ್ಲ. ಇದರ ಪರಿಣಾಮ ಅಗತ್ಯ ವಸ್ತುಗಳ ಬೆಲೆಯೂ ಗಗನಕ್ಕೇರುತ್ತಿದೆ. ಈ ಬಗ್ಗೆ ಸರ್ಕಾರಕ್ಕೆ ಕಾಳಜಿಯೇ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕೋವಿಡ್ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಇವೆಲ್ಲವನ್ನು ಜನರಿಗೆ ಮುಟ್ಟಿಸುವ ಉದ್ದೇಶದಿಂದ ಸದನದ ಒಳಗೆ ಹಾಗೂ ಹೊರಗೆ ಪ್ರತಿಭಟನೆ ಮಾಡಲಿದ್ದೇವೆ' ಎಂದೂ ಹೇಳಿದರು.



ತೈಲ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸೋಮವಾರ ಬೆಂಗಳೂರಿನಲ್ಲಿ ಕಾಂಗ್ರೆಸ್ ನಡೆಸಿದ ಸೈಕಲ್ ಜಾಥಾದಲ್ಲಿ ಶಾಸಕರಾದ ಎನ್‌.ಎ. ಹ್ಯಾರಿಸ್, ನಾರಾಯಣ ಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕ ಯು.ಬಿ. ವೆಂಕಟೇಶ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ರೈತರದ್ದು ಪ್ರಾಯೋಜಿತ ಪ್ರತಿಭಟನೆ: ಬೊಮ್ಮಾಯಿ

ಬೆಂಗಳೂರು: 'ಕೃಷಿ ಕಾಯ್ದೆ ವಿರೋಧಿಸಿ ರೈತರು ವರ್ಷದಿಂದ ನಡೆಸುತ್ತಿರುವ ಪ್ರತಿಭಟನೆ ಪ್ರಾಯೋಜಿತವಾದುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. 5

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/2XyU1tj

ಪಾಕ್ ನಂಟು: ಜಿತೇಂದರ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸೇನಾಧಿಕಾರಿ ವೇಷ ಧರಿಸಿಕೊಂಡು ಓಡಾಡಿ ಸೇನೆಗೆ ಸಂಬಂಧಪಟ್ಟ ಸ್ಥಳಗಳ ಫೋಟೊ ಹಾಗೂ ರಹಸ್ಯ ಮಾಹಿತಿಗಳನ್ನು ಪಾಕಿಸ್ತಾನದ ಐಎಸ್‌ಐ ಅಧಿಕಾರಿಗೆ ಕಳುಹಿಸುತ್ತಿದ್ದ ಆರೋಪದಡಿ ಜಿತೇಂದರ್ ಸಿಂಗ್ ಎಂಬಾತನನ್ನು ಬೆಂಗಳೂರಿನಲ್ಲಿ ಸೋಮವಾರ ಬಂಧಿಸಲಾಗಿದೆ.



ಜಿತೇಂದರ್ ಸಿಂಗ್

'ರಾಜಸ್ಥಾನದ ಜಿತೇಂದರ್ ಸಿಂಗ್, ಕಾಟನ್ ಪೇಟೆಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಭಾರತೀಯ ಸೇನೆಯ ಗುಪ್ತದಳ ವಿಭಾಗದ ಅಧಿಕಾರಿಗಳು ಆತನ ಕೃತ್ಯದ ಬಗ್ಗೆ ಮಾಹಿತಿ ನೀಡಿದ್ದರು. ಸೇನೆ ಕಮಾಂಡರ್‌ಗಳ ಜೊತೆ ಕಾರ್ಯಾಚರಣೆ ನಡೆಸಿ ಕಾಟನ್‌ಪೇಟೆಯ ಜಾಲಿ ಮೊಹಲ್ಲಾ ಬಳಿ ಜಿತೇಂದರ್‌ನನ್ನು ಸೆರೆ ಹಿಡಿಯಲಾಗಿದೆ. ಆತನ ಬಳಿ ಸೇನಾ ಸಮವಸ್ತ್ರ ಹಾಗೂ ಕೆಲ ದಾಖಲೆಗಳು ಸಿಕ್ಕಿವೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಸೇನಾಧಿಕಾರಿ ಬಟ್ಟೆ ತೊಟ್ಟು ರಾಜಸ್ಥಾನದ ಬಾರ್ಮೆರ್ ಸೇನಾ ನೆಲೆಗೆ ಇತ್ತೀಚೆಗೆ ಹೋಗಿದ್ದ ಆರೋಪಿ, ಅಲ್ಲಿಯ ಫೋಟೊಗಳನ್ನು ಮೊಬೈಲ್ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದ್ದ. ಅದೇ ಫೋಟೊಗಳನ್ನು ಪಾಕಿಸ್ತಾನದ ಐಎಸ್‌ಐ ಅಧಿಕಾರಿಗೆ ಕಳುಹಿಸಿದ್ದ. ಇದನ್ನು ಪತ್ತೆ ಹಚ್ಚಿದ್ದ ಗುಪ್ತದಳದ ಅಧಿಕಾರಿಗಳು, ಆರೋಪಿಯನ್ನು ಬಂಧಿಸುವಂತೆ ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದೂ ತಿಳಿಸಿವೆ.

6ನೇ ಪುಟ ನೋಡಿ

ಚನ್ನಿ ವಿರುದ್ಧದ 'ಮೀಟೂ' ಆರೋಪ ಮತ್ತೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿರುವ ಚರಣ್‌ಜಿತ್ ಸಿಂಗ್ ಚನ್ನಿ ಅವರ ವಿರುದ್ಧದ 'ಮೀಟೂ' ಆರೋಪವು ಮತ್ತೆ ಮುನ್ನೆಲೆಗೆ ಬಂದಿದೆ. ಪ್ರಕರಣದ ಆರೋಪಿ ಚನ್ನಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಆಗ್ರಹಿಸಿದೆ.



ಚರಣ್‌ಜಿತ್ ಸಿಂಗ್ ಚನ್ನಿ

ಮಹಿಳಾ ಐಎಎಸ್ ಅಧಿಕಾರಿಗೆ 2018ರಲ್ಲಿ ಅಸಮಂಜಸ ಸಂದೇಶಗಳನ್ನು ರವಾನಿಸಿದ್ದ ಆರೋಪ ಚನ್ನಿ ಅವರ ಮೇಲಿದೆ.

'ಈ ರೀತಿಯ ವ್ಯಕ್ತಿಯೊಬ್ಬರು ಪಂಜಾಬ್ ಮುಖ್ಯಮಂತ್ರಿ ಆಗಿದ್ದು ನಾಚಿಕೇಡಿನ ಮತ್ತು ಆಕ್ಷೇಪಾರ್ಹ ವಿಷಯ. ಮಹಿಳಾ ಐಎಎಸ್ ಅಧಿಕಾರಿಗೆ ಆದ ಅನುಭವ ಮತ್ತೊಬ್ಬ ಮಹಿಳೆಗೆ ಆಗುವುದು ಮತ್ತು ಅದೇ ರೀತಿಯ ದೌರ್ಜನ್ಯವನ್ನು ಮತ್ತೊಬ್ಬ ಮಹಿಳೆಯೂ ಅನುಭವಿಸುವುದು ನಮಗೆ ಬೇಕಿಲ್ಲ. ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವಂತೆ ಸೋನಿಯಾ ಗಾಂಧಿ ಅವರನ್ನು ಕೇಳಿಕೊಳ್ಳುತ್ತೇನೆ' ಎಂದು ಎನ್‌ಸಿಡಬ್ಲ್ಯು ಮುಖ್ಯಸ್ಥೆ ರೇಖಾ ಶರ್ಮಾ ಹೇಳಿದ್ದಾರೆ.

ಚನ್ನಿ ವಿರುದ್ಧದ ಆರೋಪವನ್ನು ಪಂಜಾಬ್ ಸರ್ಕಾರದ ಗಮನಕ್ಕೆ ಅಲ್ಲಿನ ಮಹಿಳಾ ಆಯೋಗ ತಂದಿತ್ತು. ಆದರೂ ಅವರ ವಿರುದ್ಧ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರೇಖಾ ಶರ್ಮಾ ಹೇಳಿದ್ದಾರೆ.

11ನೇ ಪುಟ ನೋಡಿ

ಜಾನಪದ ಕೃತಿಗಳಿಗೆ ಆಹ್ವಾನ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು 2020ನೇ ಸಾಲಿನ ಪುಸ್ತಕ ಬಹುಮಾನಕ್ಕಾಗಿ ಜಾನಪದ ಕೃತಿಗಳನ್ನು ಆಹ್ವಾನಿಸಿದೆ.

2020ರ ಜನವರಿ 1ರಿಂದ ಡಿಸೆಂಬರ್ 31ರ ಅವಧಿಯಲ್ಲಿ ಮುದ್ರಣಗೊಂಡಿರುವ 150 ಪುಟಗಳಿಗೂ ಹೆಚ್ಚು ಇರುವ ಕೃತಿಗಳನ್ನು ಸಲ್ಲಿಸಬೇಕು. ಜನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ-ವಿಮರ್ಶೆ-ಸಂಶೋಧನೆ ಹಾಗೂ ಜನಪದ ಸಂಕೀರ್ಣ ವಿಭಾಗದಲ್ಲಿನ ಕೃತಿಗಳನ್ನು ಸಲ್ಲಿಸಬೇಕು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ತಿಳಿಸಿದ್ದಾರೆ.

ಲೇಖಕರು ಅಥವಾ ಪ್ರಕಾಶಕರು ಅಥವಾ ಸಂಪಾದಕರು ಈ ನಾಲ್ಕು ಪ್ರಕಾರಗಳ ಅತ್ಯುತ್ತಮ ಜಾನಪದ ಕೃತಿಗಳನ್ನು ದ್ವಿಪ್ರತಿಯೊಂದಿಗೆ ಅಕ್ಟೋಬರ್ 11ರ ಒಳಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560032 ಇವರಿಗೆ ಕಳುಹಿಸಬೇಕು ಎಂದು ತಿಳಿಸಿದ್ದಾರೆ.

ವಿಧಾನಮಂಡಲ ಸಂಸ್ಥೆಗಳ ಸಭೆ: ಪಾರಂಪರಿಕ ಕಟ್ಟಡದಲ್ಲಿ ಶಾಸಕರ, ಮಾಜಿ ಶಾಸಕರ ಮನರಂಜನಾ ಕ್ಲಬ್ ಪ್ರಸ್ತಾವ

ಬಾಲಬ್ರೂಯಿ ಜಾಗದಲ್ಲಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್'?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ಕಟ್ಟಡವಾದ ಬಾಲಬ್ರೂಯಿ ಜಾಗದಲ್ಲಿ ಶಾಸಕರಿಗಾಗಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್' (ಶಾಸಕರ ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ವಿಧಾನಸೌಧದಲ್ಲಿ ಸೋಮವಾರ ನಡೆದ ವಿಧಾನಮಂಡಲ ಸಂಸ್ಥೆಗಳ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆ ಕಾರ್ಯದರ್ಶಿ ಕೆ. ವಿಶಾಲಕ್ಷಿ (ಪ್ರಭಾರ) ಇದ್ದರು.

ಬಾಲಬ್ರೂಯಿ ಜಾಗದಲ್ಲಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಮಾಡುವ ಪ್ರಸ್ತಾವವನ್ನು ವಿಧಾನ ಪರಿಷತ್ ಸದಸ್ಯರೊಬ್ಬರು ಸರ್ಕಾರಕ್ಕೆ ಸಲ್ಲಿಸಿದ್ದರು. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದ್ದು, ಕ್ಲಬ್ ಮಾಡಲು ಸಹಮತ ವ್ಯಕ್ತವಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಆದರೆ, ತನ್ನ ವ್ಯಾಪ್ತಿಯಲ್ಲಿರುವ ಈ ಕಟ್ಟಡವನ್ನು ಕ್ಲಬ್ ಮಾಡಲು ಅವಕಾಶ ಇಲ್ಲ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸ್ಪಷ್ಟ ಅಭಿಪ್ರಾಯ ನೀಡಿದೆ. ಈ ಪ್ರಸ್ತಾವದ ವಿರುದ್ಧ ಹಿಂದೊಮ್ಮೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ ಆಗಿತ್ತು. ಆಗ ಕ್ಲಬ್ ಮಾಡುವ ಉದ್ದೇಶ ಇಲ್ಲ ಎಂದು ಕೋರ್ಟ್‌ಗೆ ಸರ್ಕಾರ ಮಾಹಿತಿ ನೀಡಿತ್ತು ಎಂದೂ ಮೂಲಗಳು ಹೇಳಿವೆ.



ಬಾಲಬ್ರೂಯಿ ಅತಿಥಿಗೃಹ

ಹದಿನಾಲ್ಕು ಎಕರೆ ಪ್ರದೇಶದಲ್ಲಿರುವ ಬಾಲಬ್ರೂಯಿ ಬೆಂಗಳೂರಿನ ಪ್ರಮುಖ ಪಾರಂಪರಿಕ ಕಟ್ಟಡಗಳಲ್ಲಿ ಒಂದು. ರಾಜ್ಯ ಸರ್ಕಾರಿ ಒಡೆತನದಲ್ಲಿರುವ ಈ ಕಟ್ಟಡದಲ್ಲಿ ನೊಬೆಲ್ ಪುರಸ್ಕೃತ ರವೀಂದ್ರನಾಥ ಟ್ಯಾಗೋರ್, ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ತಂಗಿದ್ದ ದಾಖಲೆಯಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಲವು ಗಣ್ಯರು ಈ ಕಟ್ಟಡದಲ್ಲಿ ತಂಗಿದ್ದರು.

ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಈ ಬಂಗಲೆಯೇ ಅಧಿಕೃತ ನಿವಾಸವಾಗಿತ್ತು. 1850ರಲ್ಲಿ ಬೆಂಗಳೂರಿನ ಮುಖ್ಯ ಕಮಿಷನರ್ ಆಗಿದ್ದ ಲಾರ್ಡ್ ಕಬ್ಬನ್ ಅವರ ಅಧಿಕೃತ ನಿವಾಸವಾಗಿದ್ದ ಹೆಗ್ಗಳಿಕೆಯೂ ಈ ಕಟ್ಟಡಕ್ಕೆ ಇದೆ. ಕುಮಾರಕೃಪದ ನಂತರ ಅತಿ ಹೆಚ್ಚು ಬೇಡಿಕೆ ಇರುವ ಈ ಅತಿಥಿಗೃಹ ಇಂದಿಗೂ ಸರ್ಕಾರಿ ಗಣ್ಯರಿಗೆ ವಸತಿ ನೀಡುತ್ತಿದೆ.

ಈ ಕಟ್ಟಡದ ಸದ್ಯ ಡಿಜೆ ಹಳ್ಳಿ, ಕೆಜೆ ಹಳ್ಳಿ ಪ್ರಕರಣ ತನಿಖೆ ನಡೆಸುವ ತಂಡ ಕಾರ್ಯನಿರ್ವಹಿಸುತ್ತಿದೆ. ಈ ಕಟ್ಟಡದ ಹಿಂಭಾಗದಲ್ಲಿ ಮುಖ್ಯ ಕಾರ್ಯದರ್ಶಿಯವರ ಅಧಿಕೃತ ನಿವಾಸವಿದೆ. ಇದೇ ಕಟ್ಟಡವನ್ನು ಶಾಸಕರ ಸಂವಿಧಾನ ಕ್ಲಬ್ ಆಗಿ ಪರಿವರ್ತಿಸುವ ಚರ್ಚೆ 15 ವರ್ಷಗಳಿಂದ ಚಾಲ್ತಿಯಲ್ಲಿದೆ.

ವಿಧಾನಸಭಾಧ್ಯಕ್ಷರಾಗಿ ಈ ಹಿಂದೆ ಕೆಲಸ ಮಾಡಿದ ಎಂ.ವಿ. ವೆಂಕಟಪ್ಪ, ಕೆ.ಆರ್. ರಮೇಶ್ ಕುಮಾರ್, ಕೃಷ್ಣ, ಜಗದೀಶ ಶೆಟ್ಟರ್, ಕೆ.ಜಿ.ಬೋಪಯ್ಯ, ಕಾಗೋಡು ತಿಮ್ಮಪ್ಪ, ಕೆ.ಬಿ. ಕೋಳಿವಾಡ ಅವರ ಅಧ್ಯಕ್ಷತೆಯಲ್ಲಿ ಬಾಲಬ್ರೂಯಿ ಅತಿಥಿ ಗೃಹದಲ್ಲಿ ಕ್ಲಬ್ ಸ್ಥಾಪಿಸುವ ಕುರಿತಂತೆ ಸಾಕಷ್ಟು ಸಭೆಗಳು ನಡೆದಿದ್ದವು. ಅದಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಅದನ್ನು ಕೈಬಿಟ್ಟು ಕಾರ್ಲ್‌ಟನ್ ಭವನದಲ್ಲಿ ಕ್ಲಬ್ ಸ್ಥಾಪಿಸಲು ನಿರ್ಧರಿಸಲಾಗಿತ್ತು. ಆದರೆ, ನಂತರ ಈ ಯೋಜನೆ ನನೆಗುದಿಗೆ ಬಿದ್ದಿತ್ತು.

ತೆರವಾಗಿದ್ದ ಕಲ್ಯಾಣ ಮಂಟಪಕ್ಕೂ ನುಗ್ಗಿತು ನೀರು

ರಾಜಕಾಲುವೆ ಒತ್ತುವರಿ ತೆರವು: ಅನುಮಾನ ವ್ಯಕ್ತಪಡಿಸಿದ ಮಹಾಲೇಖಪಾಲರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದಲ್ಲಿ ಪ್ರಾಥಮಿಕ ರಾಜಕಾಲುವೆಯನ್ನು ಒತ್ತುವರಿ ಮಾಡಿ ನಿರ್ಮಿಸಿದ್ದ ಪದ್ಮಾವತಿ ಮತ್ತು ಮೀನಾಕ್ಷಿ ಕಲ್ಯಾಣ ಮಂಟಪಗಳನ್ನು 2016ರ ಆ. 18ರಂದೇ ತೆರವುಗೊಳಿಸಲಾಗಿದೆ ಎನ್ನುತ್ತದೆ ಬಿಬಿಎಂಪಿಯು ಲೆಕ್ಕಪರಿಶೋಧನೆಗೆ ನೀಡಿದ ಮಾಹಿತಿ. ಆದರೆ, 2020ರ ಅ.20 ರಂದು ಈ ಕಲ್ಯಾಣ ಮಂಟಪದ ಭೋಜನಶಾಲೆಗೆ ನೀರು ನುಗ್ಗಿದೆ!

ನಗರದಲ್ಲಿ ಮಳೆನೀರು ನಿರ್ವಹಣೆ ಕುರಿತ ವರದಿಯಲ್ಲಿ ಮಹಾಲೇಖಪಾಲರು ರಾಜಕಾಲುವೆ ಒತ್ತುವರಿ ತೆರವು ಸಂಬಂಧ ಬಿಬಿಎಂಪಿ ನೀಡಿರುವ ಅಧಿಕೃತ ಮಾಹಿತಿಗಳ ಬಗ್ಗೆಯೇ ಅನುಮಾನ ವ್ಯಕ್ತಪಡಿಸಿದ್ದಾರೆ. ಇದನ್ನು ಪುಷ್ಟೀಕರಿಸಲು, ತೆರವುಗೊಂಡ ಕಲ್ಯಾಣ ಮಂಟಪಕ್ಕೆ ಮತ್ತೆ ನೀರು ನುಗ್ಗಿದ ಪ್ರಕರಣದ ಉದಾಹರಣೆಯನ್ನು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ರಾಜರಾಜೇಶ್ವರಿ ನಗರದ ಪ್ರಾಥಮಿಕ ರಾಜಕಾಲುವೆಯ (ಆರ್‌ಎನ್ 193) ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಹೇಳಿತ್ತು. ಆದರೆ, 2018ರ ಜೂನ್ 11ರಂದು ಜಂಟಿ ಭೌತಿಕ ತಪಾಸಣೆ ನಡೆಸಿದಾಗ ರಾಜಕಾಲುವೆಯ ಎರಡು ಬದಿಗಳಲ್ಲಿ ಕಲ್ಯಾಣ ಮಂಟಪಗಳು ಹಾಗೆಯೇ ಇದ್ದವು. ಈ ಎರಡೂ ಕಟ್ಟಡಗಳೂ ರಾಜಕಾಲುವೆ ಮೇಲೆಯೇ ಕಾಂಕ್ರೀಟ್ ವೇದಿಕೆಯಿಂದ ಸಂಪರ್ಕ ಹೊಂದಿರುವುದು ಕಂಡು ಬಂತು ಎಂದು ಮಹಾಲೇಖಪಾಲರ ವರದಿಯಲ್ಲಿ ಹೇಳಲಾಗಿದೆ. ಈ ಕುರಿತ ಛಾಯಾಚಿತ್ರಗಳನ್ನೂ ವರದಿಯಲ್ಲಿ ಪ್ರಕಟಿಸಲಾಗಿದೆ.

ಬಿಬಿಎಂಪಿಯು ಮೊದಲು ರಾಜಕಾಲುವೆಗಳು 1,988 ಒತ್ತುವರಿಯಾಗಿರುವ ಪಟ್ಟಿಯನ್ನು ನೀಡಿತು. ಲೆಕ್ಕಪರಿಶೋಧನೆ ಸಮಯದಲ್ಲಿ 70 ರಾಜಕಾಲುವೆಗಳನ್ನು ಜಂಟಿ ಪರಿಶೀಲನೆ ನಡೆಸಲಾಗಿದೆ. ಈ ವೇಳೆ 23 ಗಮನಾರ್ಹ ಒತ್ತುವರಿಗಳು ಗಮನಕ್ಕೆ ಬಂದಿವೆ. ಆದರೆ, ಇವುಗಳಲ್ಲಿ 16 ಒತ್ತುವರಿ ಪ್ರಕರಣಗಳು ಬಿಬಿಎಂಪಿ ಒದಗಿಸಿದ ಒತ್ತುವರಿ ಪಟ್ಟಿಯಲ್ಲಿ ಇರಲೇ ಇಲ್ಲ. ಹಾಗಾಗಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಬಳಿ ಇರುವ ಒತ್ತುವರಿ ಕುರಿತ ಪರಿಪೂರ್ಣತೆ ಮತ್ತು ವಿಶ್ವಾಸಾರ್ಹತೆಯೇ ಅನುಮಾನಾಸ್ಪದ ಎಂದು ಮಹಾಲೇಖಪಾಲರ ವರದಿ ಅಭಿಪ್ರಾಯಪಟ್ಟಿದೆ.

2020ರ ಡಿಸೆಂಬರ್‌ನಲ್ಲಿ ನೀಡಲಾದ ಮಾಹಿತಿ ಪರಿಷ್ಕೃತ ಪ್ರಕಾರ, ಬಿಬಿಎಂಪಿಯು 2,626 ಒತ್ತುವರಿಗಳನ್ನು ಗುರುತಿಸಿತ್ತು. ಅವುಗಳಲ್ಲಿ 2016–17ನೇ ಸಾಲಿನಲ್ಲಿ 428 ಒತ್ತುವರಿಗಳನ್ನು, 2018–19ರ ನಂತರ 1,484 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. 714 ಒತ್ತುವರಿಗಳ ತೆರವು ಬಾಕಿ ಇವೆ. ಇವುಗಳಲ್ಲಿ 52 ಒತ್ತುವರಿ ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇವೆ. ಆದರೆ, ಇನ್ನುಳಿದ ಒತ್ತುವರಿಗಳನ್ನು ತೆರವುಗೊಳಿಸಲು ಏಕೆ ಸಾಧ್ಯವಾಗಿಲ್ಲ ಎಂಬುದಕ್ಕೆ ಕಾರಣಗಳನ್ನೇ ಬಿಬಿಎಂಪಿ ನೀಡಿಲ್ಲ ಎಂದು ವರದಿಯಲ್ಲಿ ಮಹಾಲೇಖಪಾಲರು ತಿಳಿಸಿದ್ದಾರೆ.

ಅನೇಕ ಕಡೆ ಕಟ್ಟಡಗಳ ಕೆಲವು ಭಾಗಗಳನ್ನು ಮಾತ್ರ ಕೆಡವಲಾಗಿದೆ. ಆ ಬಳಿಕ ರಾಜಕಾಲುವೆಯ ಸ್ಥಿತಿ ಸುಧಾರಣೆಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲದ ಕಾರಣ ತೆರವು ಕಾರ್ಯವೇ ಅಪೂರ್ಣ. ಹಾಗಾಗಿ, 1,912 ಕಡೆ ಒತ್ತುವರಿ ತೆರವುಗೊಳಿಸಲಾಗಿದೆ ಎಂಬ ಬಿಬಿಎಂಪಿಯ ಹೇಳಿಕೆಯನ್ನು ಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ರಾಜಕಾಲುವೆಗಳಲ್ಲಿ ಯಾವುದೇ ಕಟ್ಟಡ, ಗೋಡೆ, ಬೇಲಿ ಅಥವಾ ಇತರ ರಚನೆಗಳನ್ನು ನಿರ್ಮಿಸುವುದನ್ನು 1976ರ ಕೆಎಂಸಿ ಕಾಯ್ದೆಯ ಸೆಕ್ಷನ್ 234 ನಿಷೇಧಿಸುತ್ತದೆ. ಅಂತಹ ಅಕ್ರಮ ನಿರ್ಮಾಣಗಳನ್ನು ತೆರವುಗೊಳಿಸಲು ಮತ್ತು ತಪ್ಪಿತಸ್ಥರಿಂದ ಅವರ ವೆಚ್ಚವನ್ನು ವಸೂಲಿ ಮಾಡಲು ಬಿಬಿಎಂಪಿ ಆಯುಕ್ತರಿಗೆ ಅಧಿಕಾರ ನೀಡುತ್ತದೆ. ಚರಂಡಿಗಳನ್ನು ಖಚಿತವಾಗಿ ಗುರುತಿಸಬೇಕು ಮತ್ತು ಗಡಿಗಳನ್ನು ನಿಗದಿಪಡಿಸಬೇಕು ಎಂಬುದನ್ನು ರಾಷ್ಟ್ರೀಯ ವಿಕೋಪ ನಿರ್ವಹಣೆ ಮಾರ್ಗಸೂಚಿಯಲ್ಲೂ ಸ್ಪಷ್ಟಪಡಿಸಲಾಗಿದೆ. ರಾಜಕಾಲುವೆ ಒತ್ತುವರಿ ತೆರವು ಕುರಿತು ಹೈಕೋರ್ಟ್ ಕೂಡಾ ಬಿಬಿಎಂಪಿಗೆ ನಿರ್ದೇಶನ ನೀಡಿದೆ. ಆದರೂ ಈ ಕುರಿತು ಬಿಬಿಎಂಪಿ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ ಎಂದು ವರದಿಯಲ್ಲಿ ಅಸಮಾಧಾನ ವ್ಯಕ್ತಪಡಿಸಲಾಗಿದೆ.

ರಾಜಕಾಲುವೆ: ನಿಯತಕಾಲಿಕ ತಪಾಸಣೆಗೆ ಶಿಫಾರಸು

ಜಂಟಿ ತಪಾಸಣೆಯ ಸಮಯದಲ್ಲಿ ಚರಂಡಿಗಳು ಮತ್ತು ರಾಜಕಾಲುವೆಗಳೆರಡರಲ್ಲೂ ತೀವ್ರ ಅಡೆತಡೆಗಳು ಹಾಗೆಯೇ ಇದ್ದವು. ಕ್ಷೇತ್ರದ ಎಂಜಿನಿಯರ್‌ಗಳು ತಪಾಸಣೆಯನ್ನು ಕೈಗೊಂಡಿರಲಿಲ್ಲ. ಎಂಜಿನಿಯರ್‌ಗಳ ವರದಿಯ ಆಧಾರದಲ್ಲೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂಬ ಟೀಕೆ ಮಹಾಲೇಖಪಾಲರ ವರದಿಯಲ್ಲಿ ವ್ಯಕ್ತವಾಗಿದೆ.

ರಾಜಕಾಲುವೆಗಳ ಆಕಾರ ಮತ್ತು ಇಳಿಜಾರನ್ನು ಮೂಲವಿನ್ಯಾಸದ ರೀತಿಯಲ್ಲೇ ಉಳಿಸಿಕೊಳ್ಳುವುದು ಅವಶ್ಯಕ. ರಾಜಕಾಲುವೆಗಳ ಆಕಾರವನ್ನು ಯಥಾಸ್ಥಿತಿಯಲ್ಲೇ ಉಳಿಸಿಕೊಳ್ಳುವ ಬಗ್ಗೆ ವಿಶೇಷವಾಗಿ ಮಳೆಗಾಲದಲ್ಲಿ ಖಚಿತಪಡಿಸಿಕೊಳ್ಳುವ ಅಗತ್ಯವಿದೆ. ಈ ಸಲುವಾಗಿ ಮೂರು ರೀತಿಯ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

- ನಿಯತಕಾಲಿಕ ತಪಾಸಣೆ ಮತ್ತು ನಿರ್ವಹಣೆ
- ನಿರಂತರ ವ್ಯವಸ್ಥಿತ ನಿರ್ವಹಣೆ
- ಸುಧಾರಣೆಗಾಗಿ ವಿಶೇಷ ನಿರ್ವಹಣೆ/ ದುರಸ್ತಿ ಕಾರ್ಯ

ಕನ್ನಡ ಸ್ಪಷ್ಟ ಬರವಣಿಗೆ ಕಮ್ಮಟ 26ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಲೇಖಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತ ಸಾರ್ವಜನಿಕರಿಗೆ ಕನ್ನಡದಲ್ಲಿ ಸ್ಪಷ್ಟವಾಗಿ, ಸ್ವಚ್ಛವಾಗಿ ಬರೆಯುವ ಕ್ರಮವನ್ನು ಬೋಧಿಸುವ ಒಂದು ದಿನದ ಕಮ್ಮಟವನ್ನು ನಗರದ ಸದ್ಭಾವನಾ ಪ್ರತಿಷ್ಠಾನ ಹಮ್ಮಿಕೊಂಡಿದೆ.

ಮಾಗಡಿ ಮುಖ್ಯರಸ್ತೆಯ ಶ್ರೀಗಂಧದ ಕಾವಲ್‌ನಲ್ಲಿರುವ ಕೆಂಪೇಗೌಡ ನಿರ್ವಹಣಾ ಅಧ್ಯಯನ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಇದೇ 26ರಂದು ಕಮ್ಮಟ ನಡೆಯಲಿದೆ. ಈ ಕಮ್ಮಟದಲ್ಲಿ ಉಪನ್ಯಾಸ, ಪ್ರಾತ್ಯಕ್ಷಿಕೆ, ಚರ್ಚೆ ಮತ್ತು ಅಭ್ಯಾಸಗಳು ಇರಲಿವೆ. ಭಾಷಾ ತಜ್ಞರಾದ ಕೆ. ರಾಜಕುಮಾರ್ ಅವರು ಕಮ್ಮಟದ ನಿರ್ದೇಶಕರು ಎಂದು ಸದ್ಭಾವನಾ ಪ್ರತಿಷ್ಠಾನದ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಕನ್ನಡದ ಬಳಕೆಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವ ಉದ್ದೇಶದಿಂದ ಈ ಕಮ್ಮಟ ಆಯೋಜಿಸಲಾಗಿದೆ. ಆಸಕ್ತರು ₹ 50 ಪಾವತಿಸಿ ನೋಂದಾಯಿಸಿಕೊಳ್ಳಬಹುದು. ಮೊದಲ 50 ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ. ಭಾಗವಹಿಸುವವರಿಗೆ ಲೇಖನ ಸಾಮಗ್ರಿ, ಜೊತೆಗೆ ಭೋಜನ ವ್ಯವಸ್ಥೆ ಮಾಡಲಾಗುವುದು. ಪ್ರಮಾಣಪತ್ರಗಳನ್ನೂ ವಿತರಿಸಲಾಗುವುದು ಎಂದೂ ಹೇಳಿದ್ದಾರೆ. ಮಾಹಿತಿಗೆ 9448709651/ 8762802170.

ಬಿಬಿಎಂಪಿ ಪ್ರಧಾನ ಎಂಜಿನಿಯರ್ ಹುದ್ದೆ: ಪ್ರಭಾಕರ್‌ಗೆ ಬಡ್ತಿ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಮುಖ್ಯಾಂಶಗಳು

- 'ಬಡ್ತಿ ಬೇಡ' ಎಂಬ ಕೋರಿಕೆ ಮನ್ನಿಸದ ಸರ್ಕಾರ
- ಟೆಂಡರ್ ಕಡತಗಳ ಹೊಣೆ ಇನ್ನು ಪ್ರಧಾನ ಎಂಜಿನಿಯರ್‌ಗೆ

ಬೆಂಗಳೂರು: 'ನನಗೆ ಪ್ರಧಾನ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡದಿರಿ' ಎಂಬ ಪೂರ್ವ ವಲಯದ ಮುಖ್ಯ ಎಂಜಿನಿಯರ್ ಎಸ್.ಪ್ರಭಾಕರ್ ಅವರ ಕೋರಿಕೆಯನ್ನು ಸರ್ಕಾರ ಮನ್ನಿಸಿಲ್ಲ. ಅವರಿಗೆ ಪ್ರಧಾನ ಎಂಜಿನಿಯರ್ ಆಗಿ ಸೋಮವಾರ ಬಡ್ತಿ ನೀಡಲಾಗಿದೆ. ಇನ್ನು ಮೂವರು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳಿಗೆ ಮುಖ್ಯ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಿ ನಗರಾಭಿವೃದ್ಧಿ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಪ್ರಧಾನ ಎಂಜಿನಿಯರ್ ಸಿದ್ದೇಗೌಡ ಅವರು 2021ರ ಮೇ 31ರಂದು ನಿವೃತ್ತರಾದ ಬಳಿಕ ಪ್ರಭಾಕರ್ ಅವರಿಗೆ ಪ್ರಭಾರ ಪ್ರಧಾನ ಎಂಜಿನಿಯರ್ ಹೊಣೆ ವಹಿಸಲಾಗಿತ್ತು. ಈ ಹುದ್ದೆಗೆ ಅವರಿಗೇ ಬಡ್ತಿ ನೀಡುವ ಪ್ರಸ್ತಾವ ಸಿದ್ಧವಾಗಿತ್ತು. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಇದೇ 16ರಂದು ಪತ್ರ ಬರೆದಿದ್ದ ಪ್ರಭಾಕರ್, 'ತಂದೆ ವೃದ್ಧರಾಗಿದ್ದು, ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಚಿಕಿತ್ಸೆ ಹಾಗೂ ಆರೈಕೆ ಬಗ್ಗೆ ಹೆಚ್ಚಿನ ಕ್ರಮ ವಹಿಸಬೇಕಾಗಿದೆ. ಹಾಗಾಗಿ ಪ್ರಧಾನ ಎಂಜಿನಿಯರ್‌ನಂತಹ ಜವಾಬ್ದಾರಿಯುತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುವುದು ಕಷ್ಟಸಾಧ್ಯ. ವೈಯಕ್ತಿಕ ಕಾರಣಗಳಿಂದಾಗಿ ನಾನು ಪೂರ್ವ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತೇನೆ. ನನ್ನ ಬಡ್ತಿ ಪ್ರಸ್ತಾವನೆಯನ್ನು ಕೈಬಿಡಬೇಕು' ಎಂದು ಕೋರಿದ್ದರು. ಈ ಬಗ್ಗೆ 'ಪ್ರಜಾವಾಣಿ'ಯು ಸೋಮವಾರದ ಸಂಚಿಕೆಯಲ್ಲಿ 'ಬೇಡವಾಯಿತು ಪಾಲಿಕೆ ಪ್ರಧಾನ ಎಂಜಿನಿಯರ್ ಹುದ್ದೆ' ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

ಈ ಹಿಂದೆ ಟೆಂಡರ್‌ಗಳಿಗೆ ಸಂಬಂಧಿಸಿದ ಕಡತಗಳನ್ನೂ ಪ್ರಧಾನ ಎಂಜಿನಿಯರ್ ಗಮನಕ್ಕೆ ತರಬೇಕಾಗಿತ್ತು. ಅವರೂ ಅದಕ್ಕೆ ಸಂಬಂಧಿಸಿದ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಕ್ರಮೇಣ ಪ್ರಧಾನ ಎಂಜಿನಿಯರ್ ಅವರ ಈ ಹೊಣೆಗಳನ್ನು ಮುಕ್ತಗೊಳಿಸಿದ ಬಗ್ಗೆ ಹಾಗೂ ಕಾಮಗಾರಿಗಳ ಟೆಂಡರ್ ಕುರಿತ ಪ್ರಮುಖ ತೀರ್ಮಾನಗಳೆಲ್ಲವೂ ಮುಖ್ಯ ಎಂಜಿನಿಯರ್ ಹಂತದಲ್ಲೇ ನಡೆಯುತ್ತಿರುವ ಬಗ್ಗೆಯೂ 'ಪ್ರಜಾವಾಣಿ' ಬೆಳಕು ಚೆಲ್ಲಿತ್ತು.

ಇದರ ಬೆನ್ನಲ್ಲೇ ನಗರಾಭಿವೃದ್ಧಿ ಇಲಾಖೆ ಪ್ರಭಾಕರ್ ಅವರ ಬಡ್ತಿ ಕುರಿತ ಆದೇಶ ಹೊರಡಿಸಿದೆ. ಜೊತೆಗೆ, ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಎಲ್ಲ ಕಡತಗಳು ಮತ್ತು ಮಾರ್ಪಾಡುಗಳಿಗೆ ಸಂಬಂಧಿಸಿದ ಕಡತಗಳನ್ನು ವ್ಯವಹರಿಸುವ ಹೊಣೆಯನ್ನೂ ಪ್ರಧಾನ ಎಂಜಿನಿಯರ್‌ಗೆ ವಹಿಸಲಾಗಿದೆ.

ಸೂಪರಿಂಟೆಂಡಿಂಗ್ ಎಂಜಿನಿಯರ್ ಬಿ.ಟಿ.ಮೋಹನಕೃಷ್ಣ, ಆರ್.ಸುಗುಣಾ ಹಾಗೂ ನರಸರಾಮರಾವ್ ಅವರಿಗೆ ಮುಖ್ಯ ಎಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗಿದೆ. ಮೋಹನ ಕೃಷ್ಣ ಅವರಿಗೆ ಪೂರ್ವ ವಲಯ ಹಾಗೂ ನರಸರಾಮ ರಾವ್ ಅವರಿಗೆ ರಾಜರಾಜೇಶ್ವರಿನಗರ ವಲಯದ ಮುಖ್ಯ ಎಂಜಿನಿಯರ್ ಹೊಣೆ ವಹಿಸಲಾಗಿದೆ. ಸುಗುಣಾ ಅವರನ್ನು ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿ ನಿಯುಕ್ತಿಗೊಳಿಸಲಾಗಿದೆ. ಆದರೆ, ಕೋರಮಂಗಲ ಕಣಿವೆ (ಕೆ–100) ಅಭಿವೃದ್ಧಿ ಯೋಜನೆಯನ್ನು ರಾಜಕಾಲುವೆ ವಿಭಾಗದಿಂದ ಹೊರಗಿಡಲಾಗಿದೆ.

ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರನ್ನು ರಾಜಕಾಲುವೆ ವಿಭಾಗದ ಪ್ರಭಾರ ಮುಖ್ಯ ಎಂಜಿನಿಯರ್ ಹೊಣೆಯಿಂದ ಮುಕ್ತಗೊಳಿಸಲಾಗಿದೆ. ಆದರೆ, ಕೋರಮಂಗಲ ಕಣಿವೆ ಅಭಿವೃದ್ಧಿ ಯೋಜನೆಯ ಹೊಣೆಯನ್ನು ಪ್ರಹ್ಲಾದ್ ಅವರಿಗೆ ವಹಿಸಲಾಗಿದೆ.

ವಿದ್ಯಾರ್ಥಿನಿಯರ ಸಾಮರ್ಥ್ಯ ವೃದ್ಧಿಗೆ ಕೋರ್ಸ್: ಎನ್‌ಸಿಡಬ್ಲ್ಯು

ನವದೆಹಲಿ: ಉದ್ಯೋಗ ಸಂಪಾದಿಸಲು ಅನುಕೂಲವಾಗುವಂತೆ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿನಿಯರಿಗಾಗಿ ಸಾಮರ್ಥ್ಯ ವೃದ್ಧಿ ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ದೇಶದಾದ್ಯಂತ ಆರಂಭಿಸಿದೆ.

ಹರಿಯಾಣದ ಕೇಂದ್ರೀಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಸೋಮವಾರ ಇಂತಹ ಮೊದಲ ಕಾರ್ಯಕ್ರಮ ನಡೆಯಿತು.

ಕೋವಿಡ್-19: ಇನ್ನೆರಡು ದಿನಗಳಲ್ಲಿ ₹1 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ಬಡ ಕುಟುಂಬದವರಿಗೆ ಮುಂದಿನ ಎರಡು– ಮೂರು ದಿನಗಳಲ್ಲಿ ತಲಾ ₹1 ಲಕ್ಷ ಪರಿಹಾರ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದರು.

ಬೆಲೆ ಏರಿಕೆ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಈವರೆಗೆ ಒಟ್ಟು 7 ರಿಂದ 8 ಸಾವಿರ ಬಿಪಿಎಲ್ ಕುಟುಂಬಗಳು ನೋಂದಣಿ ಮಾಡಿವೆ. ನೇರವಾಗಿ ಅವರ ಖಾತೆಗೆ ಹಣ ಜಮೆ ಮಾಡಲಾಗುವುದು ಎಂದು ಹೇಳಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ವಿಷಯ ಪ್ರಸ್ತಾಪಿಸಿ, ಮೃತಪಟ್ಟವರಿಗೆ ತಲಾ ₹1 ಲಕ್ಷ ನೀಡುವುದಾಗಿ ಸರ್ಕಾರ ಪ್ರಕಟಿಸಿತ್ತು. ಆದರೆ, ಈವರೆಗೂ ಪರಿಹಾರ ಮೊತ್ತವನ್ನು ನೀಡಿಲ್ಲ ಎಂದರು.

ಕೋವಿಡ್ 2ನೇ ಅಲೆ ಕೊನೆ ಹಂತಕ್ಕೆ ಬಂದಿದೆ. ಮೂರನೇ ಅಲೆಯ ಬಗ್ಗೆ ಚರ್ಚೆ ನಡೆದಿದೆ. ಈಗಾಗಲೇ ಶಾಲೆಯನ್ನು ಹಂತ ಹಂತವಾಗಿ ಆರಂಭಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಆರ್ಥಿಕ ಚಟುವಟಿಕೆಗೆ ಚುರುಕು ನೀಡಬೇಕಾಗಿದೆ ಎಂದು ಬೊಮ್ಮಾಯಿ ಹೇಳಿದರು.

'ಕೆಲವು ವರ್ಗಗಳಿಗೆ ಸಹಾಯ ಮಾಡುವ ಉದ್ದೇಶವಿದ್ದು, ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಚರ್ಚೆ ನಡೆಸಿದ್ದೇನೆ. ಬಡ ವರ್ಗಕ್ಕೆ ನೆರವು ನೀಡುವ ಮೂಲಕ ಮತ್ತು ಹೊಸ ಯೋಜನೆಗಳನ್ನು ರೂಪಿಸುವ ಮೂಲಕ ಆರ್ಥಿಕ ಚಟುವಟಿಕೆಗಳಿಗೆ ಚೇತರಿಕೆ ನೀಡಬೇಕಾಗಿದೆ' ಎಂದರು.

'ಕೋವಿಡ್: ಸಿಗದ ₹1 ಲಕ್ಷ ಪರಿಹಾರ' ಎಂಬ ಶೀರ್ಷಿಕೆಯಡಿ ಈ ಬಗ್ಗೆ 'ಪ್ರಜಾವಾಣಿ'ಯು ವಿಶೇಷ ವರದಿ ಪ್ರಕಟಿಸಿತ್ತು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,43,693 ▲ ಒಟ್ಟು ಸೋಂಕಿತರು (12,43,480 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,318 ▼	12,20,278 ▲	16,096 ▲

ದಿನದ ಏರಿಕೆ

ಹೊಸ ಪ್ರಕರಣ	213	▼
ಗುಣಮುಖ	362	▲
ಸಾವು	07	–

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

29,68,543 ▲ ಒಟ್ಟು ಸೋಂಕಿತರು (29,67,866 ನಿನ್ನೆಯ ವಿವರ)
14,358 ▼ ಸಕ್ರಿಯ ಪ್ರಕರಣಗಳು
29,16,530 ▼ ಗುಣಮುಖರಾದವರು
37,627 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	677	▼
ಗುಣಮುಖ	1,678	▲
ಸಾವು	24	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಕ್ರಿಯ ಪ್ರಕರಣ 15 ಸಾವಿರಕ್ಕಿಂತ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು 14,358ಕ್ಕೆ ಇಳಿಕೆಯಾಗಿವೆ. ಮೃತರ ಪ್ರಮಾಣವು ಅಲ್ಪ ಏರಿದೆ. ಸೋಮವಾರ ಒಟ್ಟು 24 ಮಂದಿ ಅಸುನೀಗಿದ್ದು, ಸಾವಿಗೀಡಾದವರ ಒಟ್ಟು ಸಂಖ್ಯೆ 37,627ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರವು ಶೇ 3.54ರಷ್ಟಿದೆ.

ಹಿಂದಿನ 24 ಗಂಟೆಗಳಲ್ಲಿ 677 ಜನರಲ್ಲಿ ಸೋಂಕು ದೃಢಪಟ್ಟಿದೆ. ಸೋಂಕಿತರ ಒಟ್ಟು ಸಂಖ್ಯೆ 29.68 ಲಕ್ಷಕ್ಕೆ ಏರಿಕೆಯಾಗಿದೆ. ಕೋವಿಡ್ ದೃಢ ಪ್ರಮಾಣವು ಶೇ 0.60ರಷ್ಟಿದೆ. ಒಂದು ದಿನದಲ್ಲಿ 1,678 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಒಟ್ಟು ಸಂಖ್ಯೆಯು 29.16 ಲಕ್ಷಕ್ಕೆ ಹೆಚ್ಚಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತೆ ಇಳಿದಿದೆ. ಸೋಮವಾರ 1.12 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲಿ ಹೊಸದಾಗಿ 213 ಜನರಿಗೆ ಸೋಂಕು ತಗುಲಿದೆ. ಕೇರಳ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡದಲ್ಲಿ 102 ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 7 ಮಂದಿ ಮೃತಪಟ್ಟಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.95 ಕೋಟಿ ▲	3.35 ಕೋಟಿ ▲
ಸಕ್ರಿಯ ಪ್ರಕರಣ	1.85 ಕೋಟಿ ▼	3.02 ಲಕ್ಷ ▼
ಗುಣಮುಖ	20.62 ಕೋಟಿ ▲	3.27 ಕೋಟಿ
ಸಾವು	47.09 ಲಕ್ಷ ▲	4.45 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.54 ಲಕ್ಷ ▼	24,248 ▼
ಗುಣಮುಖ	3.77 ಲಕ್ಷ ▼	33,464 ▼
ಸಾವು	5,848 ▼	207 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 32,731 ▼ ಅಮೆರಿಕ | 29,479 ▼ ಬ್ರಿಟನ್ | 26,398 ▲ ಟರ್ಕಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 97.05 ▲ ಅಮೆರಿಕ | 13.12 ▲ ಬ್ರಿಟನ್ | 5.42 ▼ ಇರಾನ್

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.38 ಲಕ್ಷ ಮಹಾರಾಷ್ಟ್ರ | 35,360 ▲ ತಮಿಳುನಾಡು | 23,683 ▲ ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 65.24 ಮಹಾರಾಷ್ಟ್ರ ▲ | 45.24 ಕೇರಳ ▲ | 26.47 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಗಂಭೀರತೆ ತಿಳಿಯಲು ಕಿಟ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪೀಡಿತ ರೋಗಿಯ ಪರಿಸ್ಥಿತಿ ಎಷ್ಟು ಗಂಭೀರ ಎಂದು ನಿಖರವಾಗಿ ಗುರುತಿಸಬಹುದು ಎನ್ನಲಾದ ತಂತ್ರಜ್ಞಾನವನ್ನು ಐಐಟಿ–ಬಾಂಬೆಯ ತಂಡವು ಸಂಶೋಧಿಸಿದೆ. ಹೆಸರಾಂತ ಔಷಧ ಉತ್ಪಾದನಾ ಕಂಪನಿಯೊಂದು ಈ ತಂತ್ರಜ್ಞಾನ ಆಧರಿಸಿ ವಾಣಿಜ್ಯ ಬಳಕೆ ಕಿಟ್ ಉತ್ಪಾದನೆಗೆ ಒಪ್ಪಂದ ಮಾಡಿಕೊಂಡಿದ್ದು, ಕಾರ್ಯಪ್ರವೃತ್ತವಾಗಿದೆ.

ಪ್ರಸ್ತುತ, ಸೋಂಕಿನ ಪರಿಣಾಮ ಹಾಗೂ ರೋಗಿಯ ಆರೋಗ್ಯ ಸ್ಥಿತಿ ಎಷ್ಟು ಗಂಭೀರ ಎಂದು ಖಚಿತವಾಗಿ ಅಂದಾಜಿಸಲು ಯಾವುದೇ ನಿಖರ ಕ್ರಮಗಳಿಲ್ಲ. ಗೋಲ್ಡ್ ಗುಣಮಟ್ಟದ ಆರ್‌ಟಿ–ಪಿಸಿಆರ್ ತಪಾಸಣೆಯಿಂದ ವ್ಯಕ್ತಿ ಸೋಂಕು ಪೀಡಿತನೇ ಎಂದಷ್ಟೇ ಗುರುತಿಸಬಹುದು. ಆದರೆ, ಗಂಭೀರತೆಯನ್ನು ತಿಳಿಸುವುದಿಲ್ಲ.

ಐಐಟಿ ಬಾಂಬೆ, ಜೈವಿಕ ವಿಜ್ಞಾನ ಮತ್ತು ಜೈವಿಕ ಎಂಜಿನಿಯರಿಂಗ್ ವಿಭಾಗದ ಸಂಜೀವ ಶ್ರೀವಾತ್ಸವ ನೇತೃತ್ವದ ತಂಡವು ಕಸ್ತೂರಬಾ ಹಾಸ್ಪಿಟಲ್‌ನ ಸಂಶೋಧಕರ ಸಹಯೋಗದಲ್ಲಿ ಸೋಂಕು ಗಂಭೀರತೆ ಪತ್ತೆ ಪರಿಕರ ಕುರಿತು ಕಾರ್ಯತತ್ಪರವಾಗಿದೆ. ಗಂಭೀರ ಮತ್ತು ಗಂಭೀರವಲ್ಲದ ಸ್ಥಿತಿಯ ಕೋವಿಡ್ ಪೀಡಿತರನ್ನು ಗುರುತಿಸಲು ಪೂರಕವಾದ ಆರು ಪ್ರೊಟೀನ್‌ಗಳನ್ನು ತಂಡ ಗುರುತಿಸಿದೆ. ಗಂಟಲುದ್ರವಗಳ ಮಾದರಿಗಳಲ್ಲಿ ಇಂಥ ಅಂಶದ ಪತ್ತೆಗೆ ವಿಸ್ತೃತ ತಪಾಸಣಾ ಕಾರ್ಯವನ್ನೂ ಕೈಗೊಂಡಿದೆ.

ಹಕ್ಕುಸ್ವಾಮ್ಯ ಹೊಂದಿರುವ ಈ ತಂತ್ರಜ್ಞಾನವನ್ನು ಆಧರಿಸಿ ಸರಳವಾದ ತಪಾಸಣಾ ಕಿಟ್ ಅಭಿವೃದ್ಧಿ ಪಡಿಸಲು ಮರೆಕ್ ಇಂಡಿಯಾ ಸಂಸ್ಥೆಯ ಜೊತೆಗೆ ನಾವು ಸಹಭಾಗಿತ್ವ ಹೊಂದಿದ್ದೇವೆ ಎಂದು ಶ್ರೀವಾತ್ಸವ ತಿಳಿಸಿದರು. ಇಂತಹ ಕಿಟ್ ಅಭಿವೃದ್ಧಿಗೆ ಪೂರಕವಾಗಿ ಐಐಟಿಯಲ್ಲಿ ಉನ್ನತ ಅಧ್ಯಯನ ಕೇಂದ್ರ ಸ್ಥಾಪನೆಗೆ ಐಐಟಿ ಬಾಂಬೆಗೆ ₹ 1.75 ಕೋಟಿಯನ್ನು ಕಂಪನಿ ನೀಡಿದೆ.

ಶಂಕಾಸ್ಪದ ರೀತಿ ಸ್ವಾಮೀಜಿ ಸಾವು




ಅಲಹಾಬಾದ್ (ಪಿಟಿಐ): ಅಖಿಲ ಭಾರತೀಯ ಅಖಾಡಾ ಪರಿಷತ್‌ನ ಅಧ್ಯಕ್ಷ ಮಹಂತ ನರೇಂದ್ರ ಗಿರಿ ಇಲ್ಲಿನ ಭಾಗಾಂಬರಿ ಮಠದಲ್ಲಿ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ. ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಗಿದೆ.

ಪರಿಷತ್ ಭಾರತದಲ್ಲಿ ಸಾಧುಗಳ ಅತಿ ದೊಡ್ಡ ಸಂಘಟನೆಯಾಗಿದೆ. ಐಜಿಪಿ ಕೆ.ಪಿ. ಸಿಂಗ್ ಅವರ ಪ್ರಕಾರ, ಸ್ಥಳದಲ್ಲಿ ಕೃತ್ಯಕ್ಕೆ ಮೊದಲು ಬರೆದಿದ್ದ ಪತ್ರ ಲಭಿಸಿದ್ದು, ಮಾನಸಿಕವಾಗಿ ನೊಂದಿದ್ದ ತಾವು ಈ ಕೃತ್ಯಕ್ಕೆ ಮುಂದಾಗಿದ್ದೇನೆ ಎಂದು ಬರೆಯಲಾಗಿದೆ.

ಸೈಕಲ್ ಜಾಥಾ ಲೇವಡಿ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ

ಬೆಂಜ್ ಕಾರ್ ಹತ್ತುವ 'ಕೈ' ನಾಯಕರು

ಪ್ರಜಾವಾಣಿ ವಾರ್ತೆ



ವಿಧಾನಸಭಾ ಅಧಿವೇಶನದಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿವಿಧ ಭಂಗಿಗಳು

ಬೆಂಗಳೂರು: 'ಗೇರ್ ಸೈಕಲ್‌ನಲ್ಲಿ ಬಂದು ಪ್ರತಿಭಟನೆ ಮಾಡಿ ನಂತರ ಬೆಂಜ್ ಕಾರಿನಲ್ಲಿ ಹೋಗುವ ನಿಮ್ಮ ಬಗ್ಗೆ ಜನರಿಗೆ ಚೆನ್ನಾಗಿ ಗೊತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ನಾಯಕರನ್ನು ಛೇಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಕಾಂಗ್ರೆಸ್ ನಾಯಕರ ಸೈಕಲ್ ಜಾಥಾ ಬಗ್ಗೆ ಲೇವಡಿ ಮಾಡಿದ ಬೊಮ್ಮಾಯಿ, 'ನೀವು ಎಷ್ಟು ಸೈಕಲ್ ಹೊಡೆದರೂ ಏನೂ ಆಗಲ್ಲ. ನಿಮ್ಮ ಸೈಕಲ್ ಜಾಥಾವನ್ನು ನಾನೂ ನೋಡಿದೆ. ಸೈಕಲ್ ಮತ್ತು ಚಕ್ಕಡಿ ಹೊಡೆಯುವ ಅನುಭವ ನಿಮಗಿಲ್ಲ' ಎಂದರು.

'ಚಕ್ಕಡಿಯ ನೊಗ ಸಿದ್ದರಾಮಯ್ಯ ಅವರ ಕೈಯಲ್ಲಿದ್ದರೆ, ಬಾರು ಕೋಲು ಡಿ.ಕೆ.ಶಿವಕುಮಾರ್ ಕೈಯಲ್ಲಿತ್ತು. ಒಬ್ಬರು ಬಾರು ಕೋಲಿನಿಂದ ಬಾರಿಸಿದರೆ, ಮತ್ತೊಬ್ಬರು ನೊಗ ಹಿಡಿದೆಳೆಯುತ್ತಿದ್ದರು. ಎತ್ತಿಗೆ ಏನು ಮಾಡಬೇಕೆಂದು ತೋಚದೆ ಗಾಬರಿಗೊಂಡು ಓಡಿತು. ಇದರಿಂದ ಮೂರು ಜನ ಚಕ್ಕಡಿಯ ಹಿಂದೆ ಬಿದ್ದು ಹೋದರು' ಎಂದು ಬೊಮ್ಮಾಯಿ ಕಾಲೆಳೆದರು.

'ನಾಲ್ಕೈದು ಗೇರ್ ಇರುವ ಸೈಕಲ್ ಹತ್ತಿದರೆ ತನ್ನಿಂತಾನೆ ಮುಂದೆ ಹೋಗುತ್ತದೆ. ಸಿದ್ದರಾಮಯ್ಯ ಸೈಕಲ್ ಮುಂದೆ ಹೋದರೆ, ಡಿ.ಕೆ ಸೈಕಲ್ ಹಿಂದಕ್ಕೆ ಉಳಿಯಿತು. ಇದೊಂದು ಮನರಂಜನೆ ಎಂಬುದು ಜನರಿಗೂ ಗೊತ್ತಿದೆ. ಎಲ್ಲ ಮುಗಿದ ಮೇಲೆ ಸೈಕಲ್‌ನಿಂದ ಇಳಿದು ಬೆಂಜ್ ಕಾರು ಹತ್ತಿಕೊಂಡು ಹೋಗುತ್ತೀರಿ' ಎಂದರು.

ಕಡತದಿಂದ ತೆಗೆದ ಆಕ್ಷೇಪಾರ್ಹ ಪದ: ಪ್ರಧಾನಮಂತ್ರಿ ನರೇಂದ್ರ ಮೋದಿ ಕುರಿತು ಸಿದ್ದರಾಮಯ್ಯ ಅವರು ಬಳಸಿದ ಪದವೊಂದರ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ, ಸಚಿವ ಕೆ.ಎಸ್.ಈಶ್ವರಪ್ಪ ಮತ್ತಿತರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಳಿಕ ಅದನ್ನು ಕಡತದಿಂದ ತೆಗೆದು ಹಾಕಲಾಯಿತು.

ಭೇಷ್ ಎಂದ ಬಿಎಸ್‌ವೈ

ಮುಖ್ಯಮಂತ್ರಿ ಬೊಮ್ಮಾಯಿ ಅವರು ಸದನದಲ್ಲಿ ಉತ್ತರ ನೀಡಿದ ಪರಿಗೆ ಖುಷಿಯಾದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮುಕ್ತ ಕಂಠದಿಂದ ಹೊಗಳಿದರು. 'ಇಷ್ಟು ಉತ್ತಮ ರೀತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಯಾವುದೇ ಮುಖ್ಯಮಂತ್ರಿ ಉತ್ತರ ನೀಡಿರಲಿಲ್ಲ' ಎಂದು ಹೇಳಿದರು.

ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ವಿರೋಧ ಪಕ್ಷವನ್ನು ಎದುರಿಸಿದ ಅವರು, ಬೀಡು ಬೀಸಾಗಿ ವಿರೋಧಿ ಪಕ್ಷಗಳ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಕೆಲವೊಮ್ಮೆ ಹಾಸ್ಯ, ಇನ್ನೂ ಕೆಲವೊಮ್ಮೆ ಲೇವಡಿ, ತೀಕ್ಷ್ಣ ಉತ್ತರಗಳ ಮೂಲಕ ವಿರೋಧಿ ಸದಸ್ಯರನ್ನು ಕಾಡಿದರು. ಇದರಿಂದಾಗಿ ಕಾಂಗ್ರೆಸ್ ಸದಸ್ಯರಿಂದ ಪದೇ ಪದೇ ಪ್ರತಿರೋಧ ಎದುರಿಸಬೇಕಾಯಿತು.

ಮುಖ್ಯಮಂತ್ರಿಯವರ ಭಾಷಣಕ್ಕೆ ಆಡಳಿತ ಪಕ್ಷದ ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು. ಮೋದಿಯವರ ಸಾಧನೆಯನ್ನು ಪದೇ ಪದೇ ಉಲ್ಲೇಖಿಸಿದರು. 'ಮೋದಿ ಸಮ ನಿಲ್ಲ ಬಲ್ಲ ಒಬ್ಬ ನಾಯಕರ ನಿಮ್ಮಲ್ಲಿ ಇದ್ದರೆ ತೋರಿಸಿ' ಎಂದು ಬೊಮ್ಮಾಯಿ ಹೇಳಿದ್ದು, ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು.

ಬೊಮ್ಮಾಯಿಯವರ ಮಾತಿನ ವರಸೆಯನ್ನು ಯಡಿಯೂರಪ್ಪ ನಗುತ್ತಾ ಆಸ್ವಾದಿಸಿದರು. ಇದನ್ನು ನೋಡಿದ ಸಿದ್ದರಾಮಯ್ಯ, 'ಯಡಿಯೂರಪ್ಪ ನಗುತ್ತಿದ್ದಾರೆ. ಅವರು ನಗುವುದೇ ಅಪರೂಪ. ಬೊಮ್ಮಾಯಿ ಉತ್ತರ ಕೇಳಿ ಅವರಿಗೆ ನಗು ಬರುತ್ತಿರಬೇಕು' ಎಂದು ಕಾಲೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಯಡಿಯೂರಪ್ಪ, 'ಸಾಮಾನ್ಯವಾಗಿ ನಾನು ಮಾತನಾಡಲ್ಲ. ಇತ್ತೀಚಿನ ವರ್ಷಗಳಲ್ಲಿ ಮುಖ್ಯಮಂತ್ರಿಯೊಬ್ಬರು ಇಷ್ಟು ಚೆನ್ನಾಗಿ ಮಾತನಾಡಿದ್ದು ನಾನು ಕೇಳಿಲ್ಲ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ' ಎಂದರು.

ಯಾವ ರೀತಿ ರಾಜ್ಯವನ್ನಾಳಬೇಕು?

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕುಮಾರವ್ಯಾಸನ ಭಾಮಿನಿ ಷಟ್ಪದಿಯಿಂದ ಆಯ್ದ ಸಾಲುಗಳನ್ನು ಉಲ್ಲೇಖಿಸಿ ರಾಜ ಹೇಗಿರಬಾರದು ಎಂದು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದರು. ಇದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಅವರು, ರಾಜ ಯಾವ ರೀತಿ ರಾಜ್ಯವನ್ನಾಳಬೇಕು ಎಂಬುದನ್ನು ಕುಮಾರವ್ಯಾಸನ ಕಾವ್ಯದ ಸಾಲುಗಳನ್ನೇ ಉಲ್ಲೇಖಿಸಿ ತಿರುಗೇಟು ನೀಡಿದರು.

"ಮಾಲೆಗಾರ ಸಿಳೀಮುಖನ ಪಶು
ಪಾಲಕನವೋಲ್ ಪ್ರಜೆಯ ರಕ್ಷಿಸಿ
ಮೇಲೆ ತೆಗೆವೈ ಧನವನುಳಿದಂಗಾರಕಾರಕನ
ವೋಲು ಕಡದುರು ವ್ಯಾಘ್ರನಂತೆ ವಿ
ತಾಳಿಸಲು ಪ್ರಜೆ ನಸಿಯಲರಸಿನ
ಬಾಳಿಕೆಗೆ ಸಂದೇಹವರಿಯಾ ರಾಯ ಕೇಳೆಂದ"

ಇದರ ತಾತ್ಪರ್ಯ: ವಿದುರನು ಮೂರು ಉದಾಹರಣೆಗಳನ್ನು ನೀಡಿ ಧೃತರಾಷ್ಟ್ರನಿಗೆ ವಿವರಣೆ ನೀಡುತ್ತಾನೆ. ಯಾವ ರೀತಿ ಹೂವಾಡಿಗನು ಹೂವನ್ನು ಬಿಡಿಸಿ ಗಿಡವನ್ನು ರಕ್ಷಿಸುತ್ತಾನೋ, ದುಂಬಿಯು ಹೂವಿಗೆ ತೊಂದರೆ ಕೊಡದೆ ಹೂವಿನ ರಸವನ್ನು ಮಾತ್ರ ಹೀರುತ್ತದೆಯೋ, ಪಶುಪಾಲಕನು ಗೋವನ್ನು ರಕ್ಷಿಸಿ ಅದರಿಂದ ಹಾಲನ್ನು ಮಾತ್ರ ಕರೆದುಕೊಳ್ಳುತ್ತಾನೆಯೋ, ಹಾಗೆಯೇ ಪ್ರಜೆಗಳನ್ನು ರಕ್ಷಿಸಿ ತೆರಿಗೆಯನ್ನು ಸಂಗ್ರಹಿಸಬೇಕು. ಇದ್ದಿಲು ಮಾರುವವನು ಗಿಡವನ್ನೇ ಕಡಿದು ಸುಡುವಂತೆ, ಕಡಿಜೀರಗೆ ಹುಳವು ಛಿದ್ರಿಸುವಂತೆ, ಹುಲಿಯು ಹಸುವನ್ನೇ ಕೊಲ್ಲುವಂತೆ ಪ್ರಜೆಗಳನ್ನು ನಡೆಸಿಕೊಳ್ಳುವೆಯಾ? ಉತ್ತರಾರ್ಧದಲ್ಲಿ ಹೇಳಿರುವ ರೀತಿ ನೀನು ಪ್ರಜೆಗಳನ್ನು ನಡೆಸಿಕೊಂಡರೆ ಪ್ರಜೆಗಳು ನಶಿಸಿ ಹೋಗಿ ರಾಜನ ಉಳಿವೇ ಸಂಶಯಕ್ಕೆ ಒಳಗಾಗುತ್ತದೆ.

ಸಹಕಾರ ಸಂಘಗಳ ತಿದ್ದುಪಡಿ ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ 2021'ಕ್ಕೆ ಕಾಂಗ್ರೆಸ್ ಪ್ರತಿರೋಧದ ಮಧ್ಯೆಯೂ ವಿಧಾನಸಭೆ ಅಂಗೀಕಾರ ನೀಡಿತು.

'ಈ ಮಸೂದೆಗೆ ತರಾತುರಿಯಲ್ಲಿ ಒಪ್ಪಿಗೆ ನೀಡಬಾರದು ಇದರ ಸಾಧಕ–ಬಾಧಕವನ್ನು ಪರಿಶೀಲಿಸಿ ಮತ್ತೊಮ್ಮೆ ಚರ್ಚಿಸಲು ಅವಕಾಶ ನೀಡಬೇಕು' ಎಂದು ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು. ಆದರೆ ಅದಕ್ಕೆ ಅವಕಾಶ ನೀಡದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಂಗೀಕಾರ ನೀಡಿದರು.

ಸಹಕಾರಿ ಸಂಘಗಳ ಉದ್ಯೋಗಿಗಳು ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ನಿರ್ಬಂಧ ವಿಧಿಸಲಾಗಿದ್ದು, ಅವರ ಕುಟುಂಬದ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಬಹುದಾಗಿದೆ.

ಮಸೂದೆಯನ್ನು ಮಂಡಿಸಿದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು, ಚುನಾಯಿತ ನಿರ್ದೇಶಕರು ಮೃತಪಟ್ಟರೆ, ಚುನಾವಣೆ ನಡೆಸುವ ಬದಲು ಆ ಸ್ಥಾನಕ್ಕೆ ಒಬ್ಬರನ್ನು ಕೋ–ಆಪ್ಟ್ ಮಾಡಿಕೊಳ್ಳಲು ಅವಕಾಶ ಇದೆ ಎಂದರು.

ಸೌಹಾರ್ದ ಸಹಕಾರಿ ಮಸೂದೆ ಅಂಗೀಕಾರ: ಸಹಕಾರಿ ಕಾರ್ಯಕ್ಷೇತ್ರದಲ್ಲಿನ ಕೆಲವು ನಿಯಮಗಳ ಅಸ್ಪಷ್ಟತೆಯನ್ನಯ ತೆಗೆದು ಹಾಕಲು ಮತ್ತು ಸೌಹಾರ್ದ ಸಹಕಾರಿಯನ್ನು ಸಹಕಾರ ಕ್ಷೇತ್ರವೆಂದು ಪರಿಗಣಿಸಲು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ 2021ಕ್ಕೆ ಅಂಗೀಕಾರ ನೀಡಲಾಯಿತು.

ಠೇವಣಿಗಳ ಹೊರತಾಗಿ ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲ ಸಂಗ್ರಹಿಸಬಹುದು. ಒಟ್ಟು ಷೇರುಗಳ ಶೇ 5 ರಷ್ಟು ಷೇರುಗಳನ್ನು ಯಾವುದೇ ವ್ಯಕ್ತಿಯು ಹೊಂದುವುದಕ್ಕೆ ನಿರ್ಬಂಧ ವಿಧಿಸುವ ಅಂಶವನ್ನು ಮಸೂದೆ ಒಳಗೊಂಡಿದೆ.

ಮಂಡನೆಯಾದ ಮಸೂದೆಗಳು:

- ಸುಗ್ರೀವಾಜ್ಞೆ ರೂಪದಲ್ಲಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ಮಸೂದೆ 2021
- ಕರ್ನಾಟಕ ಸರಕು ಮತ್ತು ಸೇವೆಗಳ ತಿದ್ದುಪಡಿ ತೆರಿಗೆ ಮಸೂದೆ 2021

ಕುಕ್ಕೆ ಸುಬ್ರಹ್ಮಣ್ಯ: ಸೇವೆಗಳು ಆರಂಭ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸರ್ಪಸಂಸ್ಕಾರ, ಆಶ್ಲೇಷ ಬಲಿ ಸೇರಿದಂತೆ ಎಲ್ಲ ಸೇವೆಗಳನ್ನು ನಿಗದಿತ ಸಂಖ್ಯೆಯಲ್ಲಿ ನಡೆಸಲು ಮತ್ತು ಕೋವಿಡ್ ಮುಂಜಾಗ್ರತೆಯೊಂದಿಗೆ ಭಕ್ತರ ಮುಕ್ತ ಪ್ರವೇಶಕ್ಕೆ ಅನುಮತಿ ನೀಡಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ದಿನಕ್ಕೆ 100 ಸರ್ಪ ಸಂಸ್ಕಾರ, 20 ನಾಗಪ್ರತಿಷ್ಠೆ, 4 ಪಂಚಾಮೃತ ಅಭಿಷೇಕಕ್ಕೆ ಅವಕಾಶ ನೀಡಲಾಗಿದೆ. ಪ್ರತಿ ಸೇವೆಯಲ್ಲಿ ಇಬ್ಬರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆಶ್ಲೇಷ ಬಲಿ ಸೇವೆಯು ಪ್ರತಿ ದಿನ ನಾಲ್ಕು ಪಾಳಿಗಳಲ್ಲಿ ನಡೆಯಲಿದ್ದು, ಒಂದು ಪಾಳಿಯಲ್ಲಿ 70 ಸೇವೆಗಳಿಗೆ ಅವಕಾಶ ನೀಡಲಾಗಿದೆ. ಆಶ್ಲೇಷ ಬಲಿಯು ಬೆಳಿಗ್ಗೆ 7ರಿಂದ 8.15, 8.30ರಿಂದ 9.45, 10ರಿಂದ 11.15 ಹಾಗೂ ಸಂಜೆ 5ರಿಂದ 6.30ರ ಸಮಯದಲ್ಲಿ ನಡೆಯಲಿದೆ.

2020ರಿಂದ ಮುಂಗಡ ಬುಕ್ಕಿಂಗ್ ಆಗಿರುವ ಸರ್ಪಸಂಸ್ಕಾರ ಸೇವಾ ಭಕ್ತರಿಗೆ ಆದ್ಯತೆ ನೀಡಲಾಗಿದೆ. ಸರ್ಪ ಸಂಸ್ಕಾರ ಸೇರಿದಂತೆ ಪ್ರಮುಖ ಸೇವೆಗಳಲ್ಲಿ ಭಾಗ ವಹಿಸುವ ವ್ಯಕ್ತಿಗಳು ಕೋವಿಡ್ ತಡೆ ಲಸಿಕೆ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಸಲ್ಲಿಸುವುದು ಕಡ್ಡಾಯಗೊಳಿಸಲಾಗಿದೆ.

ಸಾರಿಗೆ ನೌಕರರ ವಜಾ ಆದೇಶ ವಾಪಸ್‌ಗೆ ಆಗ್ರಹ

ಬೆಂಗಳೂರು: ಮುಷ್ಕರದ ಅವಧಿಯಲ್ಲಿ ವಜಾ ಮಾಡಿದ ಸಾರಿಗೆ ಸಂಸ್ಥೆಗಳ ನೌಕರರನ್ನು ಮರಳಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ (ಸಿಐಟಿಯು ಸಂಯೋಜಿತ) ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿತು.

ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದ ಫೆಡರೇಷನ್ ಪದಾಧಿಕಾರಿಗಳು ಮತ್ತು ನೌಕರರು, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಸೇವೆಯಿಂದ ಕೈಬಿಟ್ಟಿರುವ ತರಬೇತಿ ಅವಧಿಯ ಎಲ್ಲಾ ನೌಕರರನ್ನು ಪುನರ್ ನೇಮಕ ಮಾಡಿಕೊಳ್ಳಬೇಕು. ವಿಭಾಗದಿಂದ ವಿಭಾಗಕ್ಕೆ ವರ್ಗಾವಣೆ ಮಾಡಿರುವ ನೌಕರರನ್ನು ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳಗಳಿಗೆ ಆಡಳಿತಾತ್ಮಕ ವರ್ಗಾವಣೆ ಆಧಾರದಲ್ಲಿ ವಾಪಸ್ ತರಬೇಕು' ಎಂದು ಆಗ್ರಹಿಸಿದರು.

ಫೆಡರೇಷನ್ ಅಧ್ಯಕ್ಷ ಎಚ್.ಡಿ. ರೇವಪ್ಪ, ಉಪಾಧ್ಯಕ್ಷ ಕೆ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್, ಉಪಾಧ್ಯಕ್ಷ ಚಂದ್ರಪ್ಪ, ಜಂಟಿ ಕಾರ್ಯದರ್ಶಿ ಆರ್.ವೇಣುಗೋಪಾಲ್ ಇದ್ದರು.

ಸಮಿತಿಗೆ ಎಂಜಿನಿಯರಿಂಗ್ ಹಿನ್ನೆಲೆಯ ವಿದ್ಯಾಶಂಕರ್: ಆಕ್ಷೇಪ

ಮೈಸೂರು: 'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕಾಗಿ ರಚಿಸಿರುವ ಶೋಧನಾ ಸಮಿತಿಯ ಮುಖ್ಯಸ್ಥರಾಗಿ ಎಂಜಿನಿಯರಿಂಗ್ ಮೂಲದವರಾದ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಅವರನ್ನು ನಾಮನಿರ್ದೇಶನ ಮಾಡಿರುವ ರಾಜ್ಯ ಸರ್ಕಾರದ ನಡೆ ಸರಿಯಲ್ಲ' ಎಂದು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆಯ (ಎಫ್‌ವಿಸಿಕೆ) ಅಧ್ಯಕ್ಷ ಪ್ರೊ.ಕೆ.ಎಸ್.ರಂಗಪ್ಪ ಬೇಸರ ವ್ಯಕ್ತಪಡಿಸಿದರು.



ಪ್ರೊ.ಕೆ.ಎಸ್ ರಂಗಪ್ಪ

'ಪ್ರೊ.ಎಸ್.ವಿದ್ಯಾಶಂಕರ್ ಅವರನ್ನು ತಿರಸ್ಕರಿಸಿ, ಆರೋಗ್ಯ ವಿಜ್ಞಾನ ವಿಷಯದಲ್ಲಿ ಆಳವಾದ ಜ್ಞಾನ ಇರುವವರನ್ನು ಸೂಚಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ರಾಜ್ಯಪಾಲರಿಗೆ ವೇದಿಕೆಯು ಪತ್ರ ಬರೆದಿದೆ' ಎಂದು ಸೋಮವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಶೋಧನಾ ಸಮಿತಿಯು ಉತ್ತಮ ಶಿಕ್ಷಣ ತಜ್ಞರನ್ನು ಒಳಗೊಂಡಿರಬೇಕು. ಪಾರದರ್ಶಕತೆಯ ದೃಷ್ಟಿಯಿಂದ, ಈಗಾಗಲೇ ವಿಶ್ವವಿದ್ಯಾಲಯವೊಂದರ ಕುಲಪತಿ ಆಗಿರುವವರನ್ನು ಸಮಿತಿಗೆ ನೇಮಿಸಬಾರದು. ಮುಖ್ಯಮಂತ್ರಿ ಅವರಿಗೂ ಈ ಕುರಿತು ಮರು ಪರಿಶೀಲಿಸುವಂತೆ ಪತ್ರ ಬರೆಯಲಾಗಿದೆ. ಶೋಧನಾ ಸಮಿತಿಯಲ್ಲಿ ಎಫ್‌ವಿಸಿಕೆ ಸದಸ್ಯರಿಗೂ ಅವಕಾಶ ನೀಡಬೇಕು ಎಂದು ಒತ್ತಾಯಿಸಲಾಗಿದೆ' ಎಂದರು.

ಎಂಇಎಸ್‌ನವರಿಗೆ ಚಳಿ ಬಿಡಿಸಿದ ಮಹಿಳಾ ಅಧಿಕಾರಿ

ಬೆಳಗಾವಿ: ಇಲ್ಲಿನ ಕಪಿಲೇಶ್ವರ ಹೊಂಡ ಬಳಿ ಗಣೇಶ ವಿಸರ್ಜನೆ ಪೆಂಡಾಲ್‌ನಲ್ಲಿ ಹಾಕಿದ್ದ ಬ್ಯಾನರ್‌ನಲ್ಲಿ ಮರಾಠಿ ಭಾಷೆ ಬಳಸಿಲ್ಲವೇಕೆ ಎಂದು ತಗಾದೆ ತೆಗೆದ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಸಂಘಟನೆಯ ಕೆಲವರಿಗೆ ಮಹಾನಗರಪಾಲಿಕೆಯ ಉಪ ಆಯುಕ್ತೆ (ಅಭಿವೃದ್ಧಿ) ಲಕ್ಷ್ಮಿ ಸುಳಗೇಕರ ಚಳಿ ಬಿಡಿಸಿದ್ದಾರೆ. ಮಹಿಳಾ ಅಧಿಕಾರಿಯು ಎಂಇಎಸ್‌ನವರಿಗೆ ತಿರುಗೇಟು ನೀಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಬೋಧಕರ ಕೊರತೆ, ತಗ್ಗಿದ ಸಂಶೋಧನೆ: ನ್ಯಾಕ್

ಎ + ನಿಂದ ಎ ಗ್ರೇಡ್‌ಗೆ ಇಳಿದ ಮೈಸೂರು ವಿ.ವಿ

ಪ್ರಜಾವಾಣಿ ವಾರ್ತೆ

ಮೈಸೂರು: ಶತಮಾನ ಕಂಡಿರುವ ಮೈಸೂರು ವಿಶ್ವವಿದ್ಯಾಲಯವು ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್‌ನ (ನ್ಯಾಕ್) ಎ + ನಿಂದ ಎ ಗ್ರೇಡ್‌ಗೆ ಇಳಿದಿದೆ.


'ಅತ್ಯುತ್ತಮ ಸೌಲಭ್ಯಗಳಿರುವುದರಿಂದ ಎ + ಶ್ರೇಯಾಂಕ ಉಳಿಸಿಕೊಳ್ಳುವ ಭರವಸೆಯಿತ್ತು. ಆದರೆ, ಬೋಧಕರ ಕೊರತೆ ಹಾಗೂ ಸಂಶೋಧನೆ ಪ್ರಮಾಣ ತಗ್ಗಿದ್ದರಿಂದ ಅಂಕಗಳು ಕಡಿಮೆಯಾದವು. ಹೀಗಾಗಿ, 'ಎ' ಮಾನ್ಯತೆ ಸಿಕ್ಕಿದೆ. ಬಂದಿದ್ದನ್ನು ಒಪ್ಪಿಕೊಳ್ಳಬೇಕಷ್ಟೇ' ಎಂದು ಕುಲಪತಿ ಪ್ರೊ. ಜಿ.ಹೇಮಂತಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- **ಗ್ರೇಡ್ ಪ್ರಕಟಿಸಿದ ನ್ಯಾಕ್**
- **ಈಚೆಗೆ ಭೇಟಿ ನಡೆಸಿದ್ದ ಸಮಿತಿ**
- **ಐದು ವರ್ಷಗಳಿಗೆ ಮಾನ್ಯತೆ**


ಕಳೆದ ವಾರ ಭೇಟಿ ನೀಡಿದ್ದ ನ್ಯಾಕ್ ಸಮಿತಿಯ ಸದಸ್ಯರು ಮೂರು ದಿನ ಮೂವತ್ತು ವಿಭಾಗಗಳು ಹಾಗೂ ಸೌಲಭ್ಯಗಳನ್ನು ಪರಿಶೀಲಿಸಿದ್ದರು. ಬೋಧಕರು, ಪೋಷಕರು ಹಾಗೂ ವಿದ್ಯಾರ್ಥಿಗಳನ್ನು ಮಾತನಾಡಿಸಿದ್ದರು.

'400 ಬೋಧಕರ ಕೊರತೆಯಿರುವುದರಿಂದ ಅತಿಥಿ ಉಪನ್ಯಾಸಕರನ್ನು ಬಳಸಿಕೊಳ್ಳುತ್ತಿರುವುದಾಗಿ ತಿಳಿಸಿದ್ದೆವು. ಮಾನ್ಯತೆಯು ಐದು ವರ್ಷಗಳ ಅವಧಿಗೆ ಇರಲಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್‌ನ (ಎನ್‌ಐಆರ್‌ಎಫ್) ಶ್ರೇಯಾಂಕ ಪಟ್ಟಿಯ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ 19ನೇ ಸ್ಥಾನ ಸಿಕ್ಕಿದ್ದು, ಹಿಂದಿನದಕ್ಕಿಂತ ಎಂಟು ಸ್ಥಾನ ಮೇಲೇರಿದ್ದೇವೆ' ಎಂದು ಕುಲಸಚಿವ ಪ್ರೊ.ಆರ್.ಶಿವಪ್ಪ ತಿಳಿಸಿದರು.



ರಾಜ್ಯದ ಉಳಿದ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ನಾವು ಮುಂದೆ ಇದ್ದೇವೆ

ಪ್ರೊ.ಜಿ.ಹೇಮಂತಕುಮಾರ್, ಕುಲಪತಿ, ಮೈಸೂರು ವಿಶ್ವವಿದ್ಯಾಲಯ



ನಮ್ಮಲ್ಲಿ ಉತ್ತಮ ಸೌಲಭ್ಯಗಳಿದ್ದರೂ. ನ್ಯಾಕ್ ಮಾನದಂಡವೇ ಬೇರೆ. ಬೋಧಕರ ಕೊರತೆಯಿಂದ ಕಡಿಮೆ ಅಂಕ ನೀಡಿರಬಹುದು

ಪ್ರೊ.ಆರ್.ಶಿವಪ್ಪ, ಕುಲಸಚಿವ, ಮೈಸೂರು ವಿಶ್ವವಿದ್ಯಾಲಯ

ಅಧಿಕಾರಿಗಳು ಸೋದರತ್ತೆಯ ಮಕ್ಕಳಾ: ರಮೇಶ್ ಕುಮಾರ್ ಕಿಡಿ

ಶೇ 99ರಷ್ಟು ರಸ್ತೆ ಉಬ್ಬುಗಳು ಅವೈಜ್ಞಾನಿಕ: ಸಿ.ಸಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹೆದ್ದಾರಿಗಳಲ್ಲಿರುವ ಶೇ 99ರಷ್ಟು ರಸ್ತೆ ಉಬ್ಬುಗಳು ಹಾಗೂ ವೇಗ ನಿಯಂತ್ರಕಗಳು ಅವೈಜ್ಞಾನಿಕ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ಹೊಸಕೋಟೆ ಮಾಡಿಕೆರೆ ಕ್ರಾಸ್ ಮಧ್ಯೆ ಕೆಶಿಪ್ ನಿರ್ಮಿಸಿರುವ ರಸ್ತೆ ಉದ್ದ ಎಷ್ಟು ಹಾಗೂ ಎಷ್ಟು ರಸ್ತೆ ಉಬ್ಬುಗಳನ್ನು ಹಾಕಿದ್ದಾರೆ. ರಾಷ್ಟ್ರೀಯ ಹೆದ್ದಾರಿ 234ರ ಮುಳಬಾಗಿಲಿನಿಂದ ಚಿಕ್ಕಬಳ್ಳಾಪುರದ ವರೆಗೆ ಎಷ್ಟು ಅಧಿಕೃತ ಹಂಪ್‌ಗಳಿವೆ’ ಎಂದು ಪ್ರಶ್ನೆ ಕೇಳಿದರು. ಅದಕ್ಕೆ ಸಚಿವರು, ‘ಹೊಸಕೋಟೆ– ಮಾಡಿಕೆರೆ ಕ್ರಾಸ್‌ನಲ್ಲಿ 33 ಅಧಿಕೃತ ಹಂಪ್‌ಗಳಿವೆ’ ಎಂದು ಉತ್ತರಿಸಿದರು.

ಈ ಮಾತಿನಿಂದ ಕೆರಳಿದ ರಮೇಶ್ ಕುಮಾರ್, ‘ಸಚಿವರಿಗೆ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. 47 ಹಂಪ್‌ಗಳಿವೆ. ಈ ಹಂಪ್‌ಗಳನ್ನು ಹಾಕಿದ್ದು ಯಾರು. ನಿಮ್ಮ ಅಧಿಕಾರಿಗಳು ಪರಿಶೀಲನೆ ಮಾಡುವುದಿಲ್ಲವೇ. ಇದಕ್ಕೆ ಕಾರಣರಾದ ಎಂಜಿನಿಯರ್‌ಗಳನ್ನು ಅಮಾನತು ಮಾಡಿ. ನಿಮ್ಮ ಅಧಿಕಾರಿಗಳು ನಮ್ಮನ್ನು ಬಫೂನ್‌ಗಳು ಎಂದು ಭಾವಿಸಿದ್ದಾರಾ’ ಎಂದೂ ಆಕ್ರೋಶದಿಂದ ಪ್ರಶ್ನಿಸಿದರು. ‘ಅಧಿಕಾರಿಗಳು ಸಂಜೆ ಡಾಬಾದಲ್ಲಿ ಕುಳಿತು ರಮೇಶ್ ಕುಮಾರ್ ಅವರಿಂದ ಏನೂ ಮಾಡಲೂ ಸಾಧ್ಯವಾಗಲಿಲ್ಲ ಎಂದೂ ನಗಾಡುತ್ತಾರೆ’ ಎಂದರು.



ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರ ಪ್ರಶ್ನೆಗೆ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಉತ್ತರಿಸಿದರು

ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ನನ್ನ ಕ್ಷೇತ್ರದಲ್ಲೂ ರಸ್ತೆ ಉಬ್ಬುಗಳಿಂದ ಸಮಸ್ಯೆ ಎದುರಿಸಿದ್ದೇನೆ. ಅಧಿಕಾರಿಗಳ ಅಮಾನತು ಮಾಡಿದರೆ ರಸ್ತೆ ಉಬ್ಬು ಸಮಸ್ಯೆ ಪರಿಹಾರ ಆಗುವುದಿಲ್ಲ. ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆಗಳ ಸಹಕಾರ ಪಡೆದು ಹಂತ ಹಂತವಾಗಿ ರಸ್ತೆಗಳ ಉಬ್ಬುಗಳನ್ನು ತೆಗೆಸಲಾಗುವುದು’ ಎಂದು ಭರವಸೆ ನೀಡಿದರು. ಕೆ.ಆರ್.ರಮೇಶ್ ಕುಮಾರ್, ‘ನಿಯಮದ ಪ್ರಕಾರ ಹೆದ್ದಾರಿಗಳಲ್ಲಿ ರಸ್ತೆ ಉಬ್ಬುಗಳು ಇರುವಂತಿಲ್ಲ. ಇದಕ್ಕೆ ಅವಕಾಶ ನೀಡಿದ ಅಧಿಕಾರಿಗಳನ್ನು ಅಮಾನತು ಮಾಡಿ. ನಾನು ನಿಮ್ಮ ₹10 ಕೋಟಿ ಅನುದಾನ ಕೇಳಿದೆನಾ. ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದಷ್ಟೇ ಕೇಳಿದ್ದೇನೆ. ಅವರೇನೂ ನಿಮ್ಮ ಸೋದರತ್ತೆ ಮಕ್ಕಳಾ. ಅವರು ಭೂಲೋಕಕ್ಕೆ ಇಳಿದು ಬಂದವರಾ’ ಎಂದು ಕಟುವಾಗಿ ಪ್ರಶ್ನಿಸಿದರು. ‘ಅವೈಜ್ಞಾನಿಕ ರಸ್ತೆ ಉಬ್ಬು ನಿರ್ಮಾಣಕ್ಕೆ ಅವಕಾಶ ನೀಡಿದ ಅಧಿಕಾರಿಗಳಿಗೆ ಈ ವರ್ಷ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿ’ ಎಂದೂ ವ್ಯಂಗ್ಯವಾಗಿ ಹೇಳಿದರು.

ಈ ಸಮಸ್ಯೆಯನ್ನು ಒಂದೇ ದಿನದಲ್ಲಿ ಪರಿಹಾರ ಮಾಡಲು ಸಾಧ್ಯವಿಲ್ಲ ಎಂದು ಸಚಿವರು ಉತ್ತರಿಸಿದರು. ಈ ಉತ್ತರದಿಂದ ಸಮಾಧಾನಗೊಳ್ಳದ ರಮೇಶ್ ಕುಮಾರ್, ‘ನನ್ನ ಪ್ರಶ್ನೆಯನ್ನು ವಾಪಸ್ ಪಡೆಯುತ್ತೇನೆ. ಇಂತಹ ಅವಮಾನವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಉದಾಹರಣೆ ನೀಡಿದ ರಮೇಶ್ ಕುಮಾರ್, ‘ವಿಮಾನ ನಿಲ್ದಾಣಕ್ಕೆ ಹೋಗುವವರನ್ನು ಈ ರಸ್ತೆಯಲ್ಲಿ ಪೊಲೀಸರು ಪರಿಶೀಲನೆ ಮಾಡುತ್ತಾರೆ. ಜತೆಗೆ, ಈ ರಸ್ತೆಯಲ್ಲಿ ಟೆಂಪೊಗಳು, ರಿಕ್ಷಾಗಳು, ಸ್ಕೂಟರ್‌ಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಒಂದು ವೇಳೆ ವಿಮಾನ ಕೈ ತಪ್ಪಿದರೆ ನಿಲ್ದಾಣಕ್ಕೆ ಹೋಗುವವರು ಏನು ಮಾಡಬೇಕು. ಯೋಚನೆ ಮಾಡದೆ ಕೈಗೊಳ್ಳುವ ಕ್ರಮಗಳಿಂದ ಈ ರೀತಿ ಸಮಸ್ಯೆ ಆಗುತ್ತದೆ’ ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಬಿಜೆಪಿಯ ಕೆ.ಜಿ.ಬೋಪಯ್ಯ ಸಹ ರಸ್ತೆ ಉಬ್ಬು ಸಮಸ್ಯೆಗಳ ಬಗ್ಗೆ ಧ್ವನಿಗೂಡಿಸಿದರು.

‘3 ವರ್ಷದಿಂದ ಒಂದೂ ಮನೆ ನೀಡದ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಒಂದೇ ಒಂದು ಮನೆ ಮಂಜೂರು ಮಾಡಿಲ್ಲ ಎಂದು ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಶರತ್ ಬಚ್ಚೇಗೌಡ ಅವರು ಮನೆ ಹಂಚಿಕೆ ಬಗ್ಗೆ ಪ್ರಶ್ನೆ ಮಾಡಿದ್ದರು. ಇದಕ್ಕೆ ವಸತಿ ಸಚಿವ ವಿ.ಸೋಮಣ್ಣ ಉತ್ತರ ನೀಡಿ ಸರ್ಕಾರದ ಸಾಧನೆ ಬಗ್ಗೆ ಹೇಳಿಕೊಂಡರು.

ಈ ವೇಳೆ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಎಂಟಿಬಿ ನಾಗರಾಜ್ ವಸತಿ ಸಚಿವರಾಗಿದ್ದಾಗ ಕ್ಷೇತ್ರಕ್ಕೆ 7500 ಮನೆಗಳನ್ನು ಮಂಜೂರು ಮಾಡಿದ್ದರು. ಆ ಬಳಿಕ ಈವರೆಗೆ ಒಂದೇ ಒಂದು ಮನೆಯನ್ನೂ ಮಂಜೂರು ಮಾಡಿಲ್ಲ. ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ನಿರ್ಮಾಣ ಹಂತದಲ್ಲಿರುವ ಮನೆಗಳನ್ನು ಲಾಕ್ ಮಾಡಲಾಗಿದೆ. ಅಕ್ರಮ ಮಾಡಿದ್ದರೆ ತನಿಖೆ ನಡೆಸಲಿ. ಅದು ಬಿಟ್ಟು ಮನೆ ಹಂಚಿಕೆ ಮಾಡದೆ ಇರುವುದು ಸರಿಯಲ್ಲ’ ಎಂದರು.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರತಿ ವರ್ಷ 3 ಲಕ್ಷದಂತೆ ಒಟ್ಟು 15 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. ಬೆಂಗಳೂರಿನಲ್ಲಿ ಒಂದು ಲಕ್ಷ ವಸತಿ ಯೋಜನೆಗೆ ಚಾಲನೆ ನೀಡಿದ್ದೆವು’ ಎಂದರು. ‘ಒಂದೇ ಒಂದು ಮನೆ ನಿರ್ಮಾಣ ಆಗಿಲ್ಲ’ ಎಂದು ಡಿ.ಕೆ.ಶಿವಕುಮಾರ್, ಯು.ಟಿ.ಖಾದರ್ ಸೇರಿದಂತೆ ಹಲವು ಸದಸ್ಯರು ದೂರಿದರು. ‘ನನ್ನ ಕ್ಷೇತ್ರಕ್ಕೆ ಹಂಚಿಕೆಯಾಗಿದ್ದ ಮನೆಯನ್ನು ಬೇರೆ ಕ್ಷೇತ್ರಕ್ಕೆ ಮರು ಹಂಚಿಕೆ ಮಾಡಲಾಗಿದೆ’ ಎಂದು ತನ್ವೀರ್ ಸೇಠ್ ದೂರಿದರು.

ವಿ.ಸೋಮಣ್ಣ, ‘1ಲಕ್ಷ ವಸತಿ ಯೋಜನೆಗೆ ಕ್ವಾರಿ ಜಾಗ ನೀಡಲಾಗಿತ್ತು. 3–4 ಕಡೆ ಮಾತ್ರ ಮನೆ ನಿರ್ಮಾಣ ಸಾಧ್ಯ. ಯೋಜನೆಯಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿತ್ತು. ಈಗ ಈ ಎಲ್ಲ ಗೊಂದಲಗಳನ್ನು ನಿವಾರಿಸಲಾಗಿದೆ. 3–4 ತಿಂಗಳಲ್ಲಿ 38 ಸಾವಿರ ಜನರಿಗೆ ಮನೆ ಹಂಚಿಕೆ ಮಾಡುತ್ತೇವೆ’ ಎಂದರು.

ಕ್ಷೇತ್ರಗಳ ಬಗ್ಗೆ ಮನೆ ಹಂಚಿಕೆ ಮಾಡದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ ಸಲಹೆ ನೀಡಿದರು. ಅದಕ್ಕೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಒಪ್ಪಿದರು.

ವಿ.ಸೋಮಣ್ಣ ಪ್ರತಿಕ್ರಿಯಿಸಿ, ‘ಯಾವ ಕ್ಷೇತ್ರಕ್ಕೆ ಈ ಹಿಂದೆ ಎಷ್ಟು ಮನೆ ಹಂಚಿಕೆ ಮಾಡಲಾಗಿತ್ತು, ಈಗ ಎಷ್ಟು ಹಂಚಿಕೆ ಮಾಡಲಾಗಿದೆ ಎಂಬ ವಿವರಗಳನ್ನು ಇದೇ 23ರಂದು ಸದನದಲ್ಲಿ ಹೇಳುವೆ’ ಎಂದರು.

ಜೆಟಿಟಿಸಿ ಉಪಕರಣ ಖರೀದಿ: ತನಿಖೆಗೆ ಕಾಂಗ್ರೆಸ್ ಸದಸ್ಯರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಾಜಾಜಿನಗರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ(ಜಿಟಿಟಿಸಿ) ಉಪಕರಣಗಳ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಆರೋಪಗಳ ಬಗ್ಗೆ ಸದನ ಸಮಿತಿಯಿಂದ ತನಿಖೆ ನಡೆಸುವಂತೆ ಕಾಂಗ್ರೆಸ್ ಸದಸ್ಯರು ಸೋಮವಾರ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು, ‘ಉಪಕರಣಗಳ ಖರೀದಿಯಲ್ಲಿ ಪಾರದರ್ಶಕ ಕಾಯ್ದೆ ಕಡೆಗಣಿಸಲಾಗಿದ್ದು, ಭಾರಿ ಅವ್ಯವಹಾರ ನಡೆದಿದೆ’ ಎಂದು ಆರೋಪಿಸಿದರು.

‘ಅಧಿಕೃತ ಏಜೆಂಟ್‌ರಿಂದ ಉಪಕರಣಗಳನ್ನು ಖರೀದಿಸಿಲ್ಲ. ವಾಸ್ತವಕ್ಕಿಂತ ಹೆಚ್ಚು ಬೆಲೆ ನೀಡಲಾಗಿದೆ. ₹ 8.5 ಕೋಟಿ ಯಂತ್ರಕ್ಕೆ ₹17 ಕೋಟಿ ನೀಡಲಾಗಿದೆ. ₹ 40 ಲಕ್ಷ ಯಂತ್ರಕ್ಕೆ ₹ 1.3 ಕೋಟಿ ನೀಡಲಾಗಿದೆ. ಕೆಲ ಉಪಕರಣಗಳು ದಾಖಲೆಗಳಲ್ಲಿವೆಯೇ ಹೊರತು ವಾಸ್ತವದಲ್ಲಿ ಇಲ್ಲ. ಇಂತಹ ಹಲವಾರು ವ್ಯತ್ಯಾಸಗಳಿವೆ’ ಎಂದು ಆರೋಪಿಸಿದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ‘₹27 ಕೋಟಿ ಮೊತ್ತದ ಯಂತ್ರಕ್ಕೆ ₹60 ಕೋಟಿ ನೀಡಲಾಗಿದೆ. ಕೇವಲ ಮೂರು ಕಂಪನಿಗಳಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ದೊರೆತಿದೆ. ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದರಿಂದ ಸದನ ಸಮಿತಿಯಿಂದ ತನಿಖೆ ಮಾಡಿಸಿ’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್‌ನಿಂದ ಬಳಿಯುವ ಯತ್ನ’



ಅಶ್ವತ್ಥ ನಾರಾಯಣ

‘ಖರೀದಿ ವೇಳೆ ಯಾವುದೇ ರೀತಿಯಲ್ಲೂ ನಿಯಮಗಳನ್ನು ಉಲ್ಲಂಘಿಸಿಲ್ಲ. ಪಾರದರ್ಶಕ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ. ಆದರೆ, ಕಾಂಗ್ರೆಸ್ ಮಸಿ ಬಳಿಯುವ ಪ್ರಯತ್ನ ನಡೆಸಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಕಿಡಿಕಾರಿದರು.

‘ಟೆಂಡರ್ ಅಂದಾಜಿಗಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿಲ್ಲ. ಉದಾಹರಣೆಗೆ, ಸಿಎನ್‌ಸಿ ಯಂತ್ರವನ್ನು ಅಣ್ಣಾಮಲೈ ವಿಶ್ವವಿದ್ಯಾಲಯ ₹1.8 ಕೋಟಿಗೆ ಖರೀದಿಸಿದೆ. ಆದರೆ, ಜಿಟಿಟಿಸಿಯಲ್ಲಿ ₹99 ಲಕ್ಷಕ್ಕೆ ಖರೀದಿಸಲಾಗಿದೆ’ ಎಂದರು.

‘ಜಿಟಿಟಿಸಿಯಿಂದ ವರ್ಷಕ್ಕೆ ಸುಮಾರು ₹7 ಕೋಟಿ ಆದಾಯ ಬರುತ್ತಿದೆ. ಇಲ್ಲಿ ತಯಾರಿಸಿದ ಹಲವು ಉಪಕರಣಗಳನ್ನು ಎಚ್‌ಎಎಲ್, ಇಸ್ರೊ ಮುಂತಾದ ಸಂಸ್ಥೆಗಳು ಖರೀದಿಸಿವೆ’ ಎಂದು ವಿವರಿಸಿದರು.

ಲೌಡ್‌ಸ್ಪೀಕರ್ ಅಳವಡಿಕೆಗೆ ಆಕ್ಷೇಪ

ಬೆಂಗಳೂರು: ‘ಮಸೀದಿ, ಚರ್ಚ್ ಮತ್ತು ದೇವಸ್ಥಾನಗಳಲ್ಲಿ ಲೌಡ್‌ಸ್ಪೀಕರ್ ಅಳವಡಿಕೆಯಿಂದ ತೀವ್ರ ಸಮಸ್ಯೆಯಾಗುತ್ತಿದೆ’ ಎಂದು ಬಿಜೆಪಿಯ ಡಾ.ವೈ.ಎ. ನಾರಾಯಣಸ್ವಾಮಿ ಅವರು ವಿಧಾನ ಪರಿಷತ್‌ನಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

‘ಶಬ್ದ ಮಾಲಿನ್ಯವಾಗುತ್ತಿದ್ದರೂ ಪರಿಸರ ಇಲಾಖೆ ಯಾವುದೇ ಕ್ರಮಕೈಗೊಂಡಿಲ್ಲ. ಇಲಾಖೆ ಮಲಗಿದೆಯಾ? ಸತ್ತಿದೆಯಾ?’ ಎಂದು ಕಿಡಿಕಾರಿದರು.

‘ಕಾನೂನು ಉಲ್ಲಂಘಿಸಿ ಬೆಳಿಗ್ಗೆ 5 ಗಂಟೆಗೆ ಲೌಡ್‌ಸ್ಪೀಕರ್ ಹಾಕಲಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಲೌಡ್‌ಸ್ಪೀಕರ್‌ಗಳಿಗೆ ನಿಷೇಧ ಹೇರಲಾಗಿದೆ. ಅದೇ ರೀತಿ ನಿಯಮ ಇಲ್ಲಿಯೂ ಜಾರಿಗೊಳಿಸಬೇಕು’ ಎಂದು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪರಿಸರ ಸಚಿವ ಆನಂದ್ ಸಿಂಗ್ ಅವರು, ‘ಕೆಲವು ನಿರ್ಬಂಧಗಳನ್ನು ವಿಧಿಸಿ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಲೌಡ್‌ಸ್ಪೀಕರ್‌ಗೆ ಅವಕಾಶ ಕಲ್ಪಿಸಲಾಗಿದೆ. ರಾತ್ರಿ 10ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಲೌಡ್ ಸ್ಪೀಕರ್‌ಗೆ ನಿಷೇಧಿಸಲಾಗಿದೆ’ ಎಂದು ವಿವರಿಸಿದರು.

ವಿಧಾನ ಪರಿಷತ್‌ನಲ್ಲಿ ಗೃಹ ಸಚಿವರಿಗೆ ಹಲವರಿಂದ ಸಲಹೆ

ಕೈದಿಗಳ ಜತೆಯಲ್ಲೇ ಅಧಿಕಾರಿಗಳನ್ನೂ ಪರಿವರ್ತಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜೈಲು ಸೇರುವ ಕೈದಿಗಳನ್ನಷ್ಟೇ ಮನಪರಿವರ್ತನೆ, ಸುಧಾರಣೆ ಮಾಡಿದರೆ ಸಾಲದು. ಕೈದಿಗಳನ್ನೂ ಕಿತ್ತು ತಿನ್ನುವ ಬಂದಿಖಾನೆ ಅಧಿಕಾರಿಗಳನ್ನು ಮೊದಲು ಪರಿವರ್ತನೆ ಮಾಡಬೇಕು’ ಎಂದು ವಿಧಾನ ಪರಿಷತ್‌ನಲ್ಲಿ ಸೋಮವಾರ ಹಲವು ಸದಸ್ಯರು ಸಲಹೆ ನೀಡಿದರು.

‘ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಮಸೂದೆ– 2021’ರ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪಕ್ಷಗಳ ಸದಸ್ಯರು, ಬಂದಿಖಾನೆ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಕೈದಿಗಳಿಗೆ ದುಡಿಮೆಯ ಅವಕಾಶ ಕಲ್ಪಿಸಲು ಮಂಡಳಿ ಸ್ಥಾಪಿಸುವ ಪ್ರಸ್ತಾವವನ್ನು ಬೆಂಬಲಿಸಿದ ಬಹುತೇಕ ಸದಸ್ಯರು, ಕಾರಾಗೃಹದ ಅಧಿಕಾರಿಗಳ ವರ್ತನೆ ಬದಲಿಸುವುದಕ್ಕೂ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

‘ನಾನು ಹೋರಾಟದಲ್ಲಿ ಭಾಗವಹಿಸಿ ನಾಲ್ಕು ಬಾರಿ ಜೈಲು ಸೇರಿದ್ದೆ. ಬೆಳಗಾವಿ ಹೊರತುಪಡಿಸಿ ರಾಜ್ಯದ ನಾಲ್ಕು ಕೇಂದ್ರ ಕಾರಾಗೃಹಗಳಲ್ಲಿ ದೀರ್ಘ ಕಾಲ ಇದ್ದೆ. ಆಗ, ಜೈಲಿನ ಒಳಗಡೆ ನಡೆಯುವ ಬೆಳವಣಿಗೆಗಳನ್ನು ಕಂಡಿದ್ದೇನೆ. ಜೈಲಿನ ಅಧಿಕಾರಿಗಳೇ ಕೈದಿಗಳನ್ನು ಎತ್ತಿಕಟ್ಟಿ ಗಲಾಟೆ ಮಾಡಿಸುತ್ತಾರೆ. ಗಾಂಜಾ, ಬೀಡಿ, ಸಿಗರೇಟು, ಮದ್ಯ ಸೇರಿದಂತೆ ಎಲ್ಲವೂ ಅಧಿಕಾರಿಗಳ ಸಹಕಾರದಲ್ಲೇ ಒಳಕ್ಕೆ ಬರುತ್ತವೆ. ಮಹಿಳೆಯರು ಮತ್ತು ಮಕ್ಕಳನ್ನು ಕಾರಾಗೃಹದ ಅಧಿಕಾರಿಗಳು ಲೈಂಗಿಕವಾಗಿ ದುರ್ಬಳಕೆ ಮಾಡುವುದೂ ನಿರಂತರವಾಗಿ ನಡೆದಿದೆ’ ಎಂದು ಬಿಜೆಪಿಯ ಆಯನೂರು ಮಂಜುನಾಥ ಆರೋಪಿಸಿದರು.

ಬಂದಿಖಾನೆಗಳು ನ್ಯಾಯಾಂಗದ ಮೇಲುಸ್ತುವಾರಿಯಲ್ಲಿರುವ ಸ್ಥಳಗಳು. ಅಲ್ಲೇ ಅಧಿಕಾರಿಗಳು ಕೈದಿಗಳ ಮೇಲೆ ದೌರ್ಜನ್ಯ ನಡೆಸುತ್ತಾರೆ. ನ್ಯಾಯಾಂಗ ಬಂಧನದಲ್ಲಿ ಇರುವವರಿಗೆ ನ್ಯಾಯ ದೊರಕಿಸುವುದು ಸರ್ಕಾರದ ಜವಾಬ್ದಾರಿ. ಕಾರಾಗೃಹ ಇಲಾಖೆಯಲ್ಲಿನ ಆಂತರಿಕ ಭ್ರಷ್ಟಾಚಾರಕ್ಕೆ ಮದ್ದು ಅರೆಯುವ ಕೆಲಸವನ್ನು ಗೃಹ ಸಚಿವರು ಮಾಡಬೇಕು. ಕೈದಿಗಳ ಮನೋವಿಕಾಸದ ಜತೆಗೆ ಅಧಿಕಾರಿಗಳ ಮನಪರಿವರ್ತನೆಯೂ ಆಗಬೇಕು ಎಂದರು.

‘ಜೈಲಿನೊಳಗೆ ಹಫ್ತಾ ವಸೂಲಿ ನಡೆಯುತ್ತಿರುತ್ತದೆ. ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ತೊಡಗಿರುವವರು ಹೊಸದಾಗಿ ಕಾರಾಗೃಹ ಸೇರಿದವರ ಮೇಲೆ ದೌರ್ಜನ್ಯ ನಡೆಸುತ್ತಾರೆ. ಈ ರೀತಿಯ ಅಕ್ರಮಗಳಿಗೆ ಕಡಿವಾಣ ಹಾಕಬೇಕು’ ಎಂದು ಕಾಂಗ್ರೆಸ್‌ನ ನಜೀರ್ ಅಹಮ್ಮದ್ ಒತ್ತಾಯಿಸಿದರು.

‘ಕಿತ್ತು ತಿನ್ನುತ್ತಾರೆ’: ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, ‘ಬಂದಿಖಾನೆ ಇಲಾಖೆಯಲ್ಲಿರುವ ಕೆಲವು ಕೆಟ್ಟ ಅಧಿಕಾರಿಗಳು ಕೈದಿಗಳ ಸೌಲಭ್ಯವನ್ನೂ ಕಿತ್ತು ತಿನ್ನುತ್ತಾರೆ. ಕೆಲವು ಜೈಲುಗಳಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಅಧಿಕಾರಿಗಳೇ ಕೈದಿಗಳಿಗೆ ನಮಸ್ಕಾರ ಹೊಡೆಯುವುದೂ ಇದೆ’ ಎಂದರು.

‘ಕಾರಾಗೃಹಗಳಿಗೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. ಆದರೂ, ಶಸ್ತ್ರಾಸ್ತ್ರ, ಐಷಾರಾಮಿ ವಸ್ತುಗಳು, ಮದ್ಯ, ಮಾದಕ ವಸ್ತುಗಳು ಹೇಗೆ ಜೈಲುಗಳ ಒಳಕ್ಕೆ ಹೋಗುತ್ತವೆ. ಅಧಿಕಾರಿಗಳು ಕ್ರಿಮಿನಲ್ ಅಪರಾಧಿಗಳ ಜತೆ ಕೈಜೋಡಿಸಿದರೆ ಮಾತ್ರ ಇದೆಲ್ಲ ಸಾಧ್ಯವಾಗುವುದಲ್ಲವೇ’ ಎಂದು ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಪ್ರಶ್ನಿಸಿದರು.

ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, ‘ಮಂಡ್ಯ ಕಾರಾಗೃಹದಲ್ಲಿ ಕೈದಿಗಳು ಬೆಳೆಸುವ ಸೊಪ್ಪು, ತರಕಾರಿಗೆ ಈಗಲೂ ಹೆಚ್ಚು ಬೇಡಿಕೆ ಇದೆ. ಅಂತಹ ಚಟುವಟಿಕೆಗಳಿಗೆ ಆದ್ಯತೆ ನೀಡಿ’ ಎಂದು ಸಲಹೆ ನೀಡಿದರು.

ಬಂದೀಖಾನೆ ಅಭಿವೃದ್ಧಿ ಮಂಡಳಿಗೆ ಶಾಸಕರನ್ನೂ ಸದಸ್ಯರನ್ನಾಗಿ ನೇಮಿಸುವಂತೆ ಬಿಜೆಪಿಯ ತೇಜಸ್ವಿನಿ ಗೌಡ ಒತ್ತಾಯಿಸಿದರು. ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಅಪ್ಪಾಜಿಗೌಡ, ಎಚ್.ಎಂ. ರಮೇಶ್ ಗೌಡ, ಬಿಜೆಪಿಯ ತಳವಾರ ಸಾಬಣ್ಣ, ಪ್ರತಾಪಸಿಂಹ ನಾಯಕ ಸೇರಿದಂತೆ ಹಲವರು ಚರ್ಚೆಯಲ್ಲಿ ಪಾಲ್ಗೊಂಡರು.

‘ಮಸೂದೆಯಲ್ಲಿ ಹಲವು ಲೋಪಗಳಿದ್ದು, ಸರಿಪಡಿಸಬೇಕು’ ಎಂದು ಕಾಂಗ್ರೆಸ್‌ನ ಪಿ.ಆರ್. ರಮೇಶ್ ಆಗ್ರಹಿಸಿದರು.

ವೇತನ ಪರಿಷ್ಕರಣೆಯ ಭರವಸೆ

ಚರ್ಚೆಗೆ ಉತ್ತರಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ‘ನಾನು ಸ್ವತಃ ಜೈಲುವಾಸ ಅನುಭವಿಸಿದವನು. ಜೈಲುಗಳೆಂದರೆ ಭೂಮಿಯ ಮೇಲಿನ ನರಕ ಎಂಬ ಸ್ಥಿತಿ ಇದೆ. ಈ ವಾತಾವರಣ ಬದಲಿಸುವುದಕ್ಕೆ ಮಂಡಳಿ ರಚಿಸಲಾಗುತ್ತಿದೆ. ಸದಸ್ಯರು ಪ್ರಸ್ತಾಪಿಸಿರುವ ಎಲ್ಲ ಸಮಸ್ಯೆಗಳಿಗೂ ಪರಿಹಾರ ಒದಗಿಸಲು ಪ್ರಯತ್ನಿಸಲಾಗುವುದು’ ಎಂದು ಭರವಸೆ ನೀಡಿದರು.

ದುಡಿಯುವ ಕೈದಿಗಳ ವೇತನವನ್ನು 2018ರಲ್ಲಿ ಪರಿಷ್ಕರಿಸಲಾಗಿತ್ತು. ಶೀಘ್ರದಲ್ಲಿ ಪುನಃ ವೇತನ ಪರಿಷ್ಕರಣೆ ಮಾಡಲಾಗುವುದು ಎಂದು ತಿಳಿಸಿದರು.

ಎರಡು ಕಡೆ ಉರುಳಿಬಿದ್ದ ಮರ • ರಸ್ತೆಯಲ್ಲಿ ಹೊಳೆಯಂತೆ ಹರಿದ ನೀರು

ಕೇಂದ್ರ, ಪೂರ್ವ ಭಾಗದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ಭಾಗ ಹಾಗೂ ಪೂರ್ವ ಭಾಗಗಳಲ್ಲಿ ಸೋಮವಾರ ಮಧ್ಯಾಹ್ನ ಅಬ್ಬರದ ಮಳೆ ಆಗಿದ್ದು, ಉಳಿದ ಪ್ರದೇಶಗಳಲ್ಲಿ ಸಾಧಾರಣ ಮಳೆ ಸುರಿಯಿತು.

ನಗರದಲ್ಲಿ ಹಲವು ದಿನಗಳಿಂದ ಮೋಡ ಕವಿದ ವಾತಾವರಣವಿದೆ. ಆಗಾಗ ಬಿಸಿಲು ಕಾಣಿಸಿಕೊಳ್ಳುತ್ತಿದೆ. ಭಾನುವಾರ ತಡರಾತ್ರಿಯೂ ಜೋರು ಮಳೆಯಾಗಿ, ಹಲವೆಡೆ ನೀರು ಧಾರಾಕಾರವಾಗಿ ಹರಿಯಿತು. ಸೋಮವಾರ ಬೆಳಿಗ್ಗೆ ಪುನಃ ಬಿಸಿಲು ಕಾಣಿಸಿಕೊಂಡಿತು. ಮಧ್ಯಾಹ್ನ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಜಿಟಿ ಜಿಟಿ ಮಳೆ ಸುರಿಯಲಾರಂಭಿಸಿತು. ಕೆಲ ನಿಮಿಷಗಳಲ್ಲೇ ಮಳೆ ಅಬ್ಬರ ಜೋರಾಯಿತು. ಮಳೆಯ ದೊಡ್ಡ ಹನಿಗಳು ನೆಲಕ್ಕೆ ಅಪ್ಪಳಿಸಿದವು. ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು.

ಮಳೆಯಿಂದ ತಪ್ಪಿಸಿಕೊಳ್ಳಲು ಕೆಲವರು, ರಸ್ತೆಯ ಪಕ್ಕ-ಪಕ್ಕದ ಮಳಿಗೆಗಳಲ್ಲಿ ಆಶ್ರಯ ಪಡೆದರು. ಕೆಲವರು ಸುರಿವ ಮಳೆಯಲ್ಲೇ ವಾಹನಗಳನ್ನು ಚಲಾಯಿಸಿಕೊಂಡು ಹೋದರು. ಬೆಂಗಳೂರು ಕೇಂದ್ರ ಹಾಗೂ ಪೂರ್ವ ಭಾಗದ ಪ್ರಮುಖ ರಸ್ತೆಗಳ ಕೆಳಸೇತುವೆಗಳು ಹಾಗೂ ಕಾಲುವೆಗಳಲ್ಲಿ ನೀರು ರಭಸವಾಗಿ ಹರಿಯುತ್ತಿದ್ದ ದೃಶ್ಯ ಕಂಡುಬಂತು. ಹರಿಯುವ ನೀರಿನಲ್ಲೇ ವಾಹನ ಚಲಾಯಿಸಿಕೊಂಡು ಹೋಗಲು ಯತ್ನಿಸಿದ್ದರಿಂದ ಕೆಲವು ವಾಹನಗಳು ಕೆಟ್ಟು ನಿಂತವು. ವಾಹನಗಳನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲು ಸ್ಥಳೀಯರು ನೆರವಾದರು.

ಮೆಜೆಸ್ಟಿಕ್, ಶೇಷಾದ್ರಿಪುರ, ವಿಧಾನಸೌಧ, ಶಿವಾಜಿನಗರ, ಇಂದಿರಾನಗರ, ಎಂ.ಜಿ. ರಸ್ತೆ, ಹಲಸೂರು, ವಿಲ್ಸನ್ ಗಾರ್ಡನ್, ಶಾಂತಿನಗರ, ವೈಟ್‌ಫೀಲ್ಡ್, ಬೆಳ್ಳಂದೂರು, ಈಜಿಪುರ, ಕೆ.ಆರ್. ಪುರ, ನಾಗವಾರ, ಹೆಬ್ಬಾಳ, ಸಂಜಯನಗರ, ಆರ್.ಟಿ. ನಗರ ಹಾಗೂ ಸುತ್ತಮುತ್ತ ಮಳೆ ಅಬ್ಬರ ಜೋರಾಗಿತ್ತು.

ಚಾಮರಾಜಪೇಟೆ, ಜಯನಗರ, ಹನುಮಂತನಗರ, ಗಿರಿನಗರ, ಬಸವನಗುಡಿ, ವಿಜಯನಗರ, ಬಸವೇಶ್ವರನಗರ, ರಾಜಾಜಿನಗರ, ಯಶವಂತಪುರ, ಮತ್ತೀಕೆರೆ, ಪೀಣ್ಯ, ವಿದ್ಯಾರಣ್ಯಪುರ, ಜಾಲಹಳ್ಳಿ, ಯಲಹಂಕ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು.

ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಹೊಸೂರು ರಸ್ತೆ, ಕನಕಪುರ ರಸ್ತೆಯಲ್ಲಿ ನೀರು ಹೆಚ್ಚು ಹರಿಯಿತು. ಈ ಭಾಗದ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ಕೆಲ ಚಾಲಕರು ವಾಹನಗಳನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದರಿಂದ ಇತರೆ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ವಾಹನಗಳ ದಟ್ಟಣೆಯೂ ಕಂಡುಬಂತು.

ಉರುಳಿಬಿದ್ದ ಮರಗಳು: ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ ಗಾಳಿಯೂ ಜೋರಾಗಿ ಬೀಸಿತು. ವೈಟ್‌ಫೀಲ್ಡ್ ಹಾಗೂ ರಾಜಭವನ ರಸ್ತೆಯಲ್ಲಿ ಮರಗಳು ಉರುಳಿಬಿದ್ದಿದ್ದವು. ಇದರಿಂದ ವಾಹನಗಳ ಸಂಚಾರಕ್ಕೆ ಕೆಲ ಹೊತ್ತು ಅಡಚಣೆ ಉಂಟಾಗಿತ್ತು.

ಪೊಲೀಸರು ಹಾಗೂ ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ, ಮರ ತೆರವು ಮಾಡಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ರಸ್ತೆ, ಕಾಲುವೆಗಳು ಭರ್ತಿ: 'ಕಬ್ಬನ್ ಪಾರ್ಕ್ ಸುತ್ತಮುತ್ತಲ ಪ್ರದೇಶಗಳಲ್ಲಿ ಜೋರು ಮಳೆ ಆಗಿದೆ. ಪ್ರಮುಖ ರಸ್ತೆಗಳು ಹಾಗೂ ಕಾಲುವೆಗಳು ನೀರಿನಿಂದ ಭರ್ತಿಯಾಗಿದ್ದವು' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ವಲಯವಾರು ಸಿಬ್ಬಂದಿ, ದೂರು ಬಂದ ಸ್ಥಳಕ್ಕೆ ಹೋಗಿ ಮಳೆ ನೀರು ತೆರವು ಕಾರ್ಯಾಚರಣೆ ಮಾಡಿದರು. ಮರ ಬಿದ್ದ ಹಾಗೂ ರಸ್ತೆಯಲ್ಲಿ ನೀರು ಹರಿದ ದೂರುಗಳು ಬಿಟ್ಟರೆ, ಬೇರೆ ಯಾವ ದೂರುಗಳೂ ಬಂದಿಲ್ಲ' ಎಂದೂ ಅವರು ತಿಳಿಸಿದರು.



ಡಾ. ಅಂಬೇಡ್ಕರ್ ರಸ್ತೆಯಲ್ಲಿ ಸುರಿವ ಮಳೆಯ ನಡುವೆಯೇ ವಾಹನ ಸವಾರರು ಸಾಗಿದ ದೃಶ್ಯ ಪ್ರಜಾವಾಣಿ ಚಿತ್ರ. ಅನೂಪ್ ರಾಘ. ಟಿ.



ವಿಧಾನಸೌಧ ಕಟ್ಟಡದ ಕಾರಿಡಾರ್‌ನಲ್ಲಿದ್ದ ನೀರನ್ನು ಸಿಬ್ಬಂದಿ ತೆರವು ಮಾಡಿದರು

'ವಿಧಾನಸೌಧದೊಳಗೆ ನೀರು'

ಧಾರಾಕಾರ ಮಳೆಯಿಂದಾಗಿ ವಿಧಾನಸೌಧ ಕಟ್ಟಡದೊಳಗೆ ನೀರು ನುಗ್ಗಿತ್ತು. ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲಿ ಜೋರು ಮಳೆ ಆಯಿತು. ಕಟ್ಟಡದ ಕಾರಿಡಾರ್‌ನಲ್ಲಿ ನೀರು ನಿಂತುಕೊಂಡಿತ್ತು. ಮಳೆ ನಿಂತ ನಂತರ ಸ್ವಚ್ಛತಾ ಸಿಬ್ಬಂದಿ ನೀರು ತೆರವುಗೊಳಿಸಿ, ನೆಲವನ್ನು ಸ್ವಚ್ಛಗೊಳಿಸಿದರು.

ನೆಲಮಂಗಲದಲ್ಲಿ ಯುವಕನ ಕೊಲೆ

ನೆಲಮಂಗಲ: ಇಲ್ಲಿನ ಬಿಟಿ ಬಸ್ ನಿಲ್ದಾಣದ ಬಳಿ ಸ್ನೇಹಿತರ ನಡುವೆ ಜಗಳ ನಡೆದು ಯುವಕನನ್ನು ಕೊಲೆ ಮಾಡಲಾಗಿದೆ. ವಿ.ಪಿ. ಮ್ಯಾಗ್ನಸ್ ಆಸ್ಪತ್ರೆ ಉದ್ಯೋಗಿ ರೇವಂತ್ ಅಲಿಯಾಸ್ ಸೃಷ್ಟಿ (22) ಕೊಲೆಯಾದ ಯುವಕ. ಇದೇ ತಾಲ್ಲೂಕಿನ ಜೋಗಿಪಾಳ್ಯದ ಚಿಕ್ಕಣ್ಣ ಮತ್ತು ಶಾಂತಮ್ಮ ದಂಪತಿ ಮಗ ರೇವಂತ್, ಪೋಷಕರೊಂದಿಗೆ ಪಟ್ಟಣದ ಸುಭಾಷ್ ನಗರದಲ್ಲಿ ವಾಸವಿದ್ದರು. ತಾಲ್ಲೂಕಿನ ಎಣ್ಣೆಗೆರೆ ನಿವಾಸಿ ಅರುಣ್ (23), ಮಾಗಡಿ ತಾಲ್ಲೂಕಿನ ಕಂಬದಕಲ್ಲು ನಿವಾಸಿ ಧರಣೇಶ್(25) ಮತ್ತು ಇತರ ಮೂವರ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಉಡುಪಿ ಉದ್ಯಮಿಗೆ ₹10 ಲಕ್ಷ ದಂಡ

ಬೆಂಗಳೂರು: ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ವಾಸ್ತವಾಂಶ ಮರೆಮಾಚಿದ್ದ ಉಡುಪಿಯ ಉದ್ಯಮಿಗೆ ಹೈಕೋರ್ಟ್ ₹10 ಲಕ್ಷ ದಂಡ ವಿಧಿಸಿದೆ.

ಪ್ರಮೋದ್ ಮಧ್ವರಾಜ್ ಒಡೆತನದ ಮೀನು ಸಂಸ್ಕರಣಾ ಘಟಕವನ್ನು ಪರಿಸರ ಕಾನೂನು ಉಲ್ಲಂಘಿಸಿ ನಿರ್ವಹಿಸಲಾಗುತ್ತಿದೆ ಎಂದು ಆರೋಪಿಸಿ ಪ್ರಶಾಂತ್ ಅಮಿನ್ ಅರ್ಜಿ ಸಲ್ಲಿಸಿದ್ದರು.

'ದಂಡದ ಮೊತ್ತವನ್ನು ಕರ್ನಾಟಕ ವಕೀಲರ ಗುಮಾಸ್ತರ ಕಲ್ಯಾಣ ನಿಧಿಗೆ ಒಂದು ತಿಂಗಳಲ್ಲಿ ಜಮೆ ಮಾಡಬೇಕು' ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿದೆ.

'ಒಂದು ತಿಂಗಳಲ್ಲಿ ದಂಡದ ಮೊತ್ತ ಪಾವತಿಸದಿದ್ದರೆ ಉಡುಪಿ ಜಿಲ್ಲಾಧಿಕಾರಿ ವಸೂಲಿ ಮಾಡಬೇಕು' ಎಂದು ತಿಳಿಸಿದೆ.



ಬೆಂಗಳೂರಿನ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಆವರಣದಲ್ಲಿ ರಾಜವಂಶಸ್ಥ ಯುವರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿ ಅನಾವರಣಗೊಳಿಸಿದರು. ಎಫ್‌ಕೆ.ಸಿ.ಸಿ.ಐ. ಅಧ್ಯಕ್ಷ ಪೇರಿಕಲ್ ಎಂ ಸುಂದರ್, ಹಿರಿಯ ಉಪಾಧ್ಯಕ್ಷ ಐ.ಎಸ್. ಪ್ರಸಾದ್, ಇದ್ದಾರೆ. ಪ್ರಜಾವಾಣಿ ಚಿತ್ರ.

ಗ್ರೀನ್ ವ್ಯಾಲಿ ಗೋಮಾಳ ಜಮೀನು

ರೇವ್ ಪಾರ್ಟಿ ಸ್ಥಳಕ್ಕೆ ಎಸ್ಪಿ ಭೇಟಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ತಮ್ಮನಾಯಕನಹಳ್ಳಿ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ರೇವ್ ಪಾರ್ಟಿ ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್ಪಿ ಡಾ.ಕೆ.ವಂಶಿಕೃಷ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಡಾ.ಕೆ.ವಂಶಿಕೃಷ್ಣ ಮಾತನಾಡಿ, ವಶಕ್ಕೆ ಪಡೆಯಲಾಗಿರುವ ಎಲ್ಲ ಆರೋಪಿಗಳ ರಕ್ತ ಹಾಗೂ ಮೂತ್ರ ಮತ್ತು ಹೇರ್ ಪಾಲಿಕಲ್ ಟೆಸ್ಟ್ ವರದಿಗಾಗಿ ಕಾಯಲಾಗುತ್ತಿದೆ. ಕೋವಿಡ್ ಮಾರ್ಗಸೂಚಿಗಳಿದ್ದರೂ ಪಾರ್ಟಿ ಆಯೋಜನೆ ಮಾಡಿರುವುದು ತಪ್ಪು. ರೆಸಾರ್ಟ್ ಮಾಲೀಕನ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಕಂದಾಯ ಇಲಾಖೆಗೆ ಸ್ಥಳದ ಮಾಹಿತಿ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದರು.

ವೀಕೆಂಡ್ ಸಂದರ್ಭದಲ್ಲಿ ಎಲ್ಲ ರೆಸಾರ್ಟ್‌ಗಳ ಮೇಲೆ ದಾಳಿ ಮಾಡುವಂತೆ ಜಿಲ್ಲೆ ಪೊಲೀಸರಿಗೆ ತಿಳಿಸಲಾಗಿದೆ. ತಪಾಸಣೆ ಬಿಗಿಗೊಳಿಸಿ ಅವ್ಯವಹಾರ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಪುಂಡರ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ ಎಂದು ತಿಳಿಸಿದರು.

ಸ್ಥಳಕ್ಕೆ ಎಎಸ್ಪಿ ಲಕ್ಷ್ಮೀಗಣೇಶ್, ಡಿವೈಎಸ್ಪಿ ಎಂ.ಮಲ್ಲೇಶ್, ಸರ್ಕಲ್ ಇನ್‌ಸ್ಪೆಕ್ಟರ್ ಎಚ್.ಆರ್.ಮಹಾನಂದ, ಸಬ್‌ಇನ್‌ಸ್ಪೆಕ್ಟರ್ ಮಧುಸೂದನ್ ಭೇಟಿ ನೀಡಿ ಪರಿಶೀಲಿಸಿದರು.

ಘಟನೆ ಹಿನ್ನೆಲೆಯಲ್ಲಿ ತಹಶೀಲ್ದಾರ್ ಪಿ.ದಿನೇಶ್ ಗ್ರೀನ್‌ವ್ಯಾಲಿ ರೆಸಾರ್ಟ್‌ಗೆ ಭೇಟಿ ನೀಡಿ ದಾಖಲಾತಿ ಪರಿಶೀಲನೆ ನಡೆಸಿದರು.

ಗ್ರೀನ್ ವ್ಯಾಲಿಯು ಹಸಿರು ವಲಯದಲ್ಲಿದ್ದು ಭೂಪರಿವರ್ತನೆ ಮಾಡಿಸಿಕೊಳ್ಳದೆ ಖಾತೆದಾರರು ಪ್ರಶ್ನಿತ ಜಮೀನಿನಲ್ಲಿ ಭೂ ಕಂದಾಯ ಕಾಯ್ದೆ ಉಲ್ಲಂಘನೆ ಮಾಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಲು ಪೊಲೀಸರಿಗೆ ಪತ್ರ ಬರೆದಿದ್ದಾರೆ. ರೇವ್ ಪಾರ್ಟಿ ನಡೆದ ರೆಸಾರ್ಟ್ ಸ್ಥಳ ತಮ್ಮನಾಯಕನಹಳ್ಳಿ ಸರ್ವೆ ನಂ.23/ಪಿ93ರಲ್ಲಿ ಒಂದು ಎಕರೆ ಮತ್ತು ಸರ್ವೆ ನಂ.23/ಪಿ101ರಲ್ಲಿ ನಾಲ್ಕು ಎಕರೆ ಖಾತೆದಾರರ ಹೆಸರು ಅಲುಮೇಲಮ್ಮ ಕೋಂ ದಾಸಪ್ಪ ಎಂದಿದೆ. ಈ ಪ್ರದೇಶ ಮೂಲತಃ ಗೋಮಾಳದ ಜಮೀನಾಗಿದ್ದು ದರಖಾಸ್ತು ಮೂಲಕ ಮಂಜೂರಾಗಿದೆ ಎಂದು ಪತ್ರದಲ್ಲಿ ತಹಶೀಲ್ದಾರ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಾಣಿಜ್ಯ ಉತ್ಸವ ಉದ್ಘಾಟನೆ ಹಾಗೂ 'ಆಜಾದಿ ಕಾ ಅಮೃತ್ ಮಹೋತ್ಸವ' ಆಚರಣೆ: ಉದ್ಘಾಟಕರು–ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ಮುಖ್ಯ ಅತಿಥಿ–ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಆಯೋಜನೆ– ಸೇವಾ ರಫ್ತು ಉತ್ತೇಜನ ಮಂಡಳಿ (ಎಸ್‌ಇಪಿಸಿ), ಸ್ಥಳ–ಗ್ರ್ಯಾಂಡ್ ಬಾಲ್ ರೂಮ್, ದಿ ಲಲಿತ್ ಅಶೋಕ್ ಹೋಟೆಲ್–ಬೆಳಿಗ್ಗೆ 9.30.

ಕಾನೂನು ಪದಕೋಶ ಹಾಗೂ 15 ಕೇಂದ್ರ ಕಾಯ್ದೆಗಳ ಲೋಕಾರ್ಪಣೆ ಸಮಾರಂಭ: ಪುಸ್ತಕಗಳ ಬಿಡುಗಡೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಸಚಿವ ಜೆ.ಸಿ.ಮಾಧುಸ್ವಾಮಿ, ಸ್ಥಳ– ಸಮ್ಮೇಳನ ಸಭಾಂಗಣ, 3ನೇ ಮಹಡಿ, ವಿಧಾನಸೌಧ– ಮಧ್ಯಾಹ್ನ 1.30.

ಕೃಷಿ ವಿಶ್ವವಿದ್ಯಾಲಯದ 55ನೇ ಘಟಿಕೋತ್ಸವ: ಅಧ್ಯಕ್ಷತೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಭಾಗವಹಿಸುವವರು–ಸಚಿವ ಬಿ.ಸಿ.ಪಾಟೀಲ, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾನಿರ್ದೇಶಕ ತ್ರಿಲೋಚನ್ ಮಹಾಪಾತ್ರ, ಸ್ಥಳ–ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿ.ಕೆ.ವಿ.ಕೆ–ಬೆಳಿಗ್ಗೆ 11.

ವಿಶ್ವ ಅಲ್ಜೈಮರ್ ದಿನ: ಮುಖ್ಯ ಅತಿಥಿ–ಡಾ.ಪ್ರತಿಮಾ ಮೂರ್ತಿ, ಆಯೋಜನೆ ಅಲ್ಜೈಮರ್ ಮತ್ತು ರಿಲೇಟೆಡ್ ಡಿಸಾರ್ಡರ್ ಸೊಸೈಟಿ ಆಫ್ ಇಂಡಿಯಾ ಮತ್ತು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ–ಹೋಟೆಲ್ ರಾಯಲ್ ಆರ್ಕಿಡ್ ಸೆಂಟ್ರಲ್, ಡಿಕೆನ್ಸನ್ ರಸ್ತೆ–ಬೆಳಿಗ್ಗೆ 10.30.

ಕಲಿವ ಶಾಲೆಯ ಹಲವು ಮುಖಗಳು ಪುಸ್ತಕ ಬಿಡುಗಡೆ ಹಾಗೂ 'ಸಮಕಾಲೀನ ಸನ್ನಿವೇಶದಲ್ಲಿ ಸಾರ್ವಜನಿಕ ಶಿಕ್ಷಣ: ಸಮುದಾಯದ ಅಪೇಕ್ಷೆಗಳು ಮತ್ತು ಅಗತ್ಯಗಳು' ಕುರಿತ ವಿಚಾರ ಸಂಕಿರಣ: ಪುಸ್ತಕ ಬಿಡುಗಡೆ–ಸಚಿವ ಬಿ.ಸಿ.ನಾಗೇಶ್, ಅಧ್ಯಕ್ಷತೆ–ಎ.ಎಚ್.ರಾಮರಾವ್, ವಿಷಯ ಮಂಡಣೆ–ರಾಜಕೀಯ ವಿಶ್ಲೇಷಕ ಎ.ನಾರಾಯಣ, ಆಯೋಜನೆ–ನ್ಯಾಷನಲ್ ಕಾಲೇಜು, ಬಸವನಗುಡಿ ಮತ್ತು ಸ್ವಾಮಿ ವಿವೇಕಾನಂದ ಶೈಕ್ಷಣಿಕ ಅನುಸಂಧಾನ, ಸ್ಥಳ–ಎಚ್.ಎನ್.ಮಲ್ಟಿ ಮೀಡಿಯಾ ಸಭಾಂಗಣ–ಮಧ್ಯಾಹ್ನ 3.

ಬಾಲಕಿಗೆ ಲೈಂಗಿಕ ದೌರ್ಜನ್ಯ; ಬಂಧನ

ಬೆಂಗಳೂರು: ಐದು ವರ್ಷದ ಬಾಲಕಿಗೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ 23 ವರ್ಷದ ಆರೋಪಿಯನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ಪೋಷಕರು ನೀಡಿದ್ದ ದೂರು ಆಧರಿಸಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪಶ್ಚಿಮ ಬಂಗಾಳದ ಆರೋಪಿಯನ್ನು ಬಂಧಿಸಿ ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

'ಆರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಹೋಟೆಲ್‌ವೊಂದರಲ್ಲಿ ಕೆಲಸಕ್ಕೆ ಸೇರಿದ್ದ. 20 ದಿನಗಳ ಹಿಂದಷ್ಟೇ ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿದ್ದ ಸ್ನೇಹಿತರ ಕೊಠಡಿಗೆ ಬಂದಿದ್ದ. ಭಾನುವಾರ ಮಧ್ಯಾಹ್ನ ಪಕ್ಕದ ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ' ಎಂದೂ ತಿಳಿಸಿದರು.

ಮುಂದಿನ ವರ್ಷದಿಂದ ಜಾರಿ: ಬೆಂಗಳೂರು ಕೃಷಿ ವಿ.ವಿ ಕುಲಪತಿ ರಾಜೇಂದ್ರ ಪ್ರಸಾದ್

ಸಾಧಕ ರೈತರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ ರೈತರೊಬ್ಬರಿಗೆ 'ಗೌರವ ಡಾಕ್ಟರೇಟ್' ನೀಡಲು ನಿರ್ಧರಿಸಲಾಗಿದೆ. ಮುಂದಿನ ವರ್ಷದಿಂದ ಇದು ಜಾರಿಗೊಳ್ಳಲಿದೆ. ರಾಜ್ಯದ ಇತಿಹಾಸದಲ್ಲೇ ಇದೊಂದು ಹೊಸ ಹೆಜ್ಜೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕೃಷಿ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಮಾಡುವ, ವರಮಾನ ಗಳಿಕೆಯ ಹೊಸ ಮಾರ್ಗಗಳನ್ನು ಕಂಡುಕೊಂಡು ಅದನ್ನು ಇತರರಿಗೂ ಹೇಳಿಕೊಡುವ ಪ್ರಗತಿಪರ ರೈತರನ್ನು ಈ ಗೌರವಕ್ಕೆ ಪರಿಗಣಿಸಲಾಗುತ್ತದೆ. ಈ ವರ್ಷವೇ ಗೌರವ ನೀಡಬೇಕಿತ್ತು. ಕೋವಿಡ್ ಕಾರಣ ಸಾಧಕರನ್ನು ಗುರುತಿಸುವುದು ಸಾಧ್ಯವಾಗಲಿಲ್ಲ' ಎಂದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ನಮಗೆ ಪೂರಕವಾಗಿದೆ. ಹೀಗಾಗಿ ಅದರ ಜಾರಿಗೆ ಯಾವುದೇ ತೊಡಕುಗಳಿಲ್ಲ. ಎನ್‌ಇಪಿಯಲ್ಲಿ ಉಲ್ಲೇಖಿಸಿರುವ ಬಹುಪಾಲು ಅಂಶಗಳನ್ನು ನಾವು ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಇದೇ 28ರಂದು ನಡೆಯುವ ರಾಷ್ಟ್ರೀಯ ಮಟ್ಟದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುವುದು' ಎಂದು ಹೇಳಿದರು.

'ಶೇ 60ರಿಂದ 65ರಷ್ಟು ಏಕೀಕೃತ ಪಠ್ಯಕ್ರಮವನ್ನು ಅಳವಡಿಸುವ ಬಗ್ಗೆ ಚಿಂತನೆ ನಡೆದಿದೆ. ಯಾವ ಯಾವ ವಿಭಾಗಗಳಲ್ಲಿ ಕೌಶಲ ತರಬೇತಿಯ ಅಗತ್ಯವಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಮುಂದಿನ ವಾರದಿಂದ ಭೌತಿಕ ತರಗತಿಗಳನ್ನು ಆರಂಭಿಸುವ ಆಲೋಚನೆ ಇದೆ. ಕೋವಿಡ್ ಇದ್ದರೂ ನಮ್ಮಲ್ಲಿನ ಯಾವ ಕೋರ್ಸ್‌ಗೂ ಬೇಡಿಕೆ ಕಡಿಮೆಯಾಗಿಲ್ಲ. 4 ಸಾವಿರ ಸ್ಥಾನಗಳಿಗೆ ಸುಮಾರು 1 ಲಕ್ಷ ಅರ್ಜಿಗಳು ಬಂದಿವೆ. ವಿದೇಶಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಹಲವು ಆನ್‌ಲೈನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆನ್‌ಲೈನ್ ಸರ್ಟಿಫಿಕೇಷನ್ ಕೋರ್ಸ್ ಕೂಡ ಶುರುಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

'ಕೀಟಶಾಸ್ತ್ರ ವಿಭಾಗ: ಚಿನ್ನದ ಪದಕ ಪ್ರದಾನ ಇಲ್ಲ'

'ಕೀಟಶಾಸ್ತ್ರ ವಿಭಾಗದ (ಪಿ.ಎಚ್‌ಡಿ) ಚಿನ್ನದ ಪದಕ ಪ್ರದಾನವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ' ಎಂದು ರಾಜೇಂದ್ರ ಪ್ರಸಾದ್ ಹೇಳಿದರು.

'ಸರಾಸರಿ ಅಂಕ ಗಳಿಕೆಯಲ್ಲಿ ಮುಂಚೂಣಿಯಲ್ಲಿದ್ದ ವಿದ್ಯಾರ್ಥಿನಿಯೊಬ್ಬರಿಗೆ ಚಿನ್ನದ ಪದಕ ನೀಡಬೇಕಿತ್ತು. ಆಕೆ ಮಂಡಿಸಿದ ಎರಡು ಪ್ರಬಂಧಗಳು ಯಾವುದಾದರೂ ಪತ್ರಿಕೆಯಲ್ಲಿ ಪ್ರಕಟವಾಗಿರಬೇಕು. ಆಕೆಯ ಒಂದು ಪ್ರಬಂಧ ಪತ್ರಿಕೆಯಲ್ಲಿ ಪ್ರಕಟವಾಗಿಲ್ಲ ಎಂದು ನಾಗರಾಜ್ ಎಂಬುವವರು ದೂರಿದ್ದು, ಅಗತ್ಯ ದಾಖಲೆಗಳನ್ನು ಸಲ್ಲಿಸುವುದಾಗಿ ಹೇಳಿದ್ದಾರೆ' ಎಂದರು.

'ನಾಗರಾಜ್ ಸಲ್ಲಿಸಲಿರುವ ದಾಖಲೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿಯ ವರದಿಯ ಆಧಾರದಲ್ಲಿ ಅರ್ಹರಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಅಂಕಿ-ಅಂಶಗಳು

150 ಪ್ರದಾನ ಮಾಡಲಿರುವ ಒಟ್ಟು ಚಿನ್ನದ ಪದಕಗಳು

131 ವಿಶ್ವವಿದ್ಯಾಲಯ ಮತ್ತು ದಾನಿಗಳು ನೀಡುವ ಚಿನ್ನದ ಪದಕಗಳು

19 ದಾನಿಗಳ ಚಿನ್ನದ ಪದಕ ಪ್ರಮಾಣಪತ್ರ

33 ಚಿನ್ನದ ಪದಕ ಪಡೆಯಲಿರುವ ವಿದ್ಯಾರ್ಥಿನಿಯರು

28 ಚಿನ್ನದ ಪದಕ ಪಡೆಯಲಿರುವ ವಿದ್ಯಾರ್ಥಿಗಳು

659 ಸ್ನಾತಕ ಪದವಿ ಪಡೆಯಲಿರುವವರು

279 ಸ್ನಾತಕೋತ್ತರ ಪದವಿ ಪಡೆಯುವವರು

74 ಡಾಕ್ಟೊರೇಟ್ ಸ್ವೀಕರಿಸಲಿರುವವರು

ಚಿನ್ನದ ಪದಕ ವಿಜೇತರು

ಹೆಸರು	ವಿಭಾಗ	ಪಡೆದ ಪದಕ
ಡಾಕ್ಟರ್ ಆಫ್ ಫಿಲಾಸಫಿ		
ದಿಶಾಂತ್ ಜೋಜಿತ್ ಜೇಮ್ಸ್	ಕೃಷಿ ವಿಸ್ತರಣೆ	4
ಎಸ್.ಕೆ.ಕಿರಣ್	ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ವಿಜ್ಞಾನ	3
ಸ್ನೇಹಲ ಗಿರಿ	ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ	2
ಕೆ.ಎನ್.ಮನೋಜ್	ಬೇಸಾಯ ವಿಜ್ಞಾನ	2
ಎಂ.ಪ್ರಿಯಾಂಕಾ	ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ	2
ಬಿ.ಎಸ್.ನಳಿನಿ	ಕೃಷಿ ಸೂಕ್ಷ್ಮಜೀವಿ ವಿಜ್ಞಾನ	2
ಸ್ನಾತಕೋತ್ತರ ಪದವಿ		
ಡಿ.ಎಸ್.ಸುಪ್ರಿತಾ ರಾಜ್	ಆನುವಂಶೀಯ ಮತ್ತು ಸಸ್ಯತಳಿ ಅಭಿವೃದ್ಧಿ ವಿಜ್ಞಾನ	6
ಎಂ.ಎಸ್.ರಾಮು	ಕೃಷಿ ಅರ್ಥಶಾಸ್ತ್ರ	6
ಎಂ.ವಿನಯ್‌ಕುಮಾರ್	ಬೇಸಾಯ ವಿಜ್ಞಾನ	5
ಜಿ.ಅವಿನಾಶ್	ಕೃಷಿ ಸಂಖ್ಯಾಶಾಸ್ತ್ರ	4
ಸ್ನಾತಕ ಪದವಿ (ಬಿಎಸ್ಸಿ)		
ಜಿ.ಮೋನಿಕಾ (ಮಂಡ್ಯ)	ಕೃಷಿ	10
ಆಶಾ ಕಿರಣ್ (ಬೆಂಗಳೂರು)	ಕೃಷಿ	13
ಎಚ್.ಟಿ.ಶಾಂಭವಿ (ಹಾಸನ)	ಕೃಷಿ	4
ಎಂ.ಎಸ್.ಮಾನಸ (ಬೆಂಗಳೂರು)	ಕೃಷಿ ಮಾರುಕಟ್ಟೆ ಮತ್ತು ಸಹಕಾರ	5
ಟಿ.ಸಿ.ಸ್ಮಿತಾ (ಬೆಂಗಳೂರು)	ಕೃಷಿ ಎಂಜಿನಿಯರಿಂಗ್ (ಬಿ.ಟೆಕ್)	3
ಎಸ್.ಪ್ರಿಯಾಂಕಾ (ಹಾಸನ)	ಕೃಷಿ ಜೈವಿಕ ತಂತ್ರಜ್ಞಾನ (ಬಿ.ಟೆಕ್)	2
ರುಚಿ ದಹಿಯ (ಹಾಸನ)	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ	2
ಡಿ.ಎಂ.ಮೇಘನಾ (ಚಿಂತಾಮಣಿ)	ರೇಷ್ಮೆ ಕೃಷಿ (ಬಿಎಸ್ಸಿ)	4

ಇಂದು ಘಟಿಕೋತ್ಸವ

'ವಿಶ್ವವಿದ್ಯಾಲಯದ 55ನೇ ಘಟಿಕೋತ್ಸವವು ಇದೇ 21ರಂದು ಜಿ.ಕೆ.ವಿ.ಕೆ. ಆವರಣದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ನಡೆಯಲಿದೆ. ಈ ಬಾರಿ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ಒಟ್ಟು 1,012 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ' ಎಂದು ಕುಲಪತಿ ತಿಳಿಸಿದರು. 18 ರಿಂದ 60 ವರ್ಷದೊಳಗಿನವರಿಗೆ ಮಾತ್ರ ಸಮಾರಂಭಕ್ಕೆ ಪ್ರವೇಶವಿದೆ. ಉಳಿದವರು ಆನ್‌ಲೈನ್ ಮೂಲಕ ಕಾರ್ಯಕ್ರಮ ವೀಕ್ಷಿಸಬಹುದು' ಎಂದು ಹೇಳಿದರು.

ಇದೇ ಅಧಿವೇಶನದಲ್ಲೇ ಮಸೂದೆ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿಯೇ ವರ್ಗಾವಣೆ ಕಾಯ್ದೆಗೆ ಮಸೂದೆ ಮಂಡಿಸಲಾಗುವುದು ಎಂದು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭರವಸೆ ನೀಡಿದರು.

ವರ್ಗಾವಣೆ ಕಾಯ್ದೆ ವಿಳಂಬ ಖಂಡಿಸಿ ಮತ್ತು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಮತ್ತು ಪ್ರಾಂಶುಪಾಲರ ಸಂಘ ವತಿಯಿಂದ ಮಲ್ಲೇಶ್ವರದಲ್ಲಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಸಂಘದ ಪದಾಧಿಕಾರಿಗಳನ್ನು ವಿಧಾನಸೌಧದಲ್ಲಿರುವ ತಮ್ಮ ಕಚೇರಿಗೆ ಆಹ್ವಾನಿಸಿ ಚರ್ಚಿಸಿದ ಸಚಿವರು, ಇತರ ಬೇಡಿಕೆಗಳ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ಕೆ.ವೈ. ನಾರಾಯಣಸ್ವಾಮಿ, ಎಸ್.ವಿ. ಸಂಕನೂರು, ಅರುಣ್ ಶಹಾಪೂರ, ಹನುಮಂತಪ್ಪ ನಿರಾಣಿ, ಉಪನ್ಯಾಸಕರ ಸಂಘದ ಗೌರವಾಧ್ಯಕ್ಷ ತಿಮ್ಮಯ್ಯ ಪುರ್ಲೆ, ಅಧ್ಯಕ್ಷ ನಿಂಗೇಗೌಡ ಎ.ಎಚ್., ಕಾರ್ಯಾಧ್ಯಕ್ಷ ಎಸ್.ಆರ್. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಶಿವರಾವ್ ಮಾಲಿಪಾಟೀಲ ಇದ್ದರು.

ಪ್ರತಿಭಟನೆ: ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ನೂರಾರು ಉಪನ್ಯಾಸಕರು ಪದವಿ ಪೂರ್ವ ಇಲಾಖೆ ಕಚೇರಿಯ ಮುಂಭಾಗದ ರಸ್ತೆಯಲ್ಲಿ ಕುಳಿತು ಧರಣಿ ನಡೆಸಿದರು. ಧರಣಿ ಸ್ಥಳಕ್ಕೆ ಬಂದ ಕೆ.ಟಿ. ಶ್ರೀಕಂಠೇಗೌಡ, ಎಸ್.ವಿ. ಸಂಕನೂರ್, ಎಸ್.ಎಲ್. ಬೋಜೇಗೌಡ, ಹಣಮಂತಪ್ಪ ನಿರಾಣಿ, ಬೇಡಿಕೆಗಳ ಬಗ್ಗೆ ಸದನದಲ್ಲಿ ವಿಷಯ ಪ್ರಸ್ತಾಪಿಸುವುದಾಗಿ ಉಪನ್ಯಾಸಕರಿಗೆ ಭರವಸೆ ನೀಡಿದರು.

ಕಚೇರಿಯ ಆವರಣದಲ್ಲಿ ಪ್ರತಿಭಟನೆ ನಡೆಸಲು ಉಪನ್ಯಾಸಕರಿಗೆ ಪೊಲೀಸರು ಅವಕಾಶ ನೀಡಲಿಲ್ಲ. ಇದೇ ವೇಳೆ ಕಚೇರಿಗೆ ಬಂದ ಇಲಾಖೆಯ ನಿರ್ದೇಶಕಿ ಸ್ನೇಹಲ್ ಅವರನ್ನು ತರಾಟೆಗೆ ತೆಗೆದುಕೊಂಡ ಉಪನ್ಯಾಸಕರು, ಬೀದಿಯಲ್ಲಿ ಕುಳ್ಳಿರಿಸಿದ ಪೊಲೀಸರ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಉಪನ್ಯಾಸಕರ ಸಮಸ್ಯೆಗಳನ್ನು ಶ್ರೀಕಂಠೇಗೌಡ ಮತ್ತು ಸಂಕನೂರು ಅವರು ನಿರ್ದೇಶಕರಿಗೆ ವಿವರಿಸಿದರು.



ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಪ್ರತಿಭಟನೆಯನ್ನು ಉದ್ದೇಶಿಸಿ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಮಾತನಾಡಿದರು

ಮೇಕೆದಾಟಿನಿಂದ ವಿಧಾನಸೌಧಕ್ಕೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಮೇಕೆದಾಟಿನಿಂದ ವಿಧಾನಸೌಧದ ತನಕ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮೇಕೆದಾಟು ಹೋರಾಟ ಸಮಿತಿ ತಿಳಿಸಿದೆ.

ಸೆ.23 ರಿಂದ 28ರವರೆಗೆ ಐದು ದಿನಗಳ ಕಾಲ ಪಾದಯಾತ್ರೆ ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಸಂಪತ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮೇಕೆದಾಟು ಯೋಜನೆಯಿಂದ ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆಯ ಜನರಿಗೆ ಕುಡಿಯುವ ನೀರು ಸಿಗಲಿದೆ. ಸರ್ಕಾರ ಈ ಯೋಜನೆ ಜಾರಿಗೆ ಮುಂದಾಗಬೇಕು' ಎಂದು ಮನವಿ ಮಾಡಿದರು.

'ಕನ್ನಡ ಸಂಘಟನೆಗಳು, ದಲಿತ ಸಂಘಟನೆಗಳು, ರೈತ ಕಾರ್ಮಿಕ, ವಕೀಲ, ವಿದ್ಯಾರ್ಥಿ ಮತ್ತು ಮಹಿಳಾ ಸಂಘಟನೆಗಳು ಪಾದಯಾತ್ರೆಯಲ್ಲಿ ಭಾಗವಹಿಸಲಿವೆ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಆಡಳಿತವಿದೆ. ಆದರೂ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಇನ್ನೂ ಅನುಮೋದನೆ ಸಿಕ್ಕಿಲ್ಲ' ಎಂದರು.

ಬ್ಯಾಡರಹಳ್ಳಿಯಲ್ಲಿ ಐವರು ಮೃತಪಟ್ಟ ಪ್ರಕರಣ

'ಬಾಯಲ್ಲಿ ಚಪ್ಪಲಿ ಇಟ್ಟು ಅವಮಾನಿಸಿದ್ದ ತಂದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಕೂಸು ಸೇರಿ ಐವರು ಮೃತಪಟ್ಟ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ಮೃತ ಮಧುಸಾಗರ್ ಬರೆದಿದ್ದಾರೆ ಎನ್ನಲಾದ ಮರಣ ಪತ್ರ ಪೊಲೀಸರಿಗೆ ಸಿಕ್ಕಿದ್ದು, ತಂದೆ ಶಂಕರ್ ಮೇಲೆಯೇ ಇದೀಗ ಅನುಮಾನ ವ್ಯಕ್ತವಾಗುತ್ತಿದೆ.

ತಿಗಳರಪಾಳ್ಯದ ಐಷಾರಾಮಿ ಮನೆಯಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾಕುಮಾರಿ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ನೇಣು ಹಾಕಿಕೊಂಡು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು.

ಘಟನೆ ನಡೆದ ಮನೆಯಲ್ಲಿ ಪೊಲೀಸರು ಭಾನುವಾರ ಶೋಧ ನಡೆಸಿದ್ದರು. ಮೂರು ಮರಣ ಪತ್ರಗಳು ಸಿಕ್ಕಿದ್ದವು. ಮಧುಸಾಗರ್ ಕೊಠಡಿಯಲ್ಲಿ ಸಿಕ್ಕಿರುವ ಮರಣಪತ್ರ, ಪ್ರಕರಣಕ್ಕೆ ಹೊಸ ಆಯಾಮ ನೀಡಿದೆ.

'ನನ್ನ ತಂದೆ ಸ್ವಾರ್ಥಿ. ಐವರು ಮಹಿಳೆಯರ ಜೊತೆ ಅಕ್ರಮ ಸಂಬಂಧವಿಟ್ಟುಕೊಂಡಿದ್ದಾರೆ. ಆ ಪೈಕಿ ಮಹಿಳೆಯೊಬ್ಬರ ಮಗಳನ್ನು ಮದುವೆಯಾಗುವಂತೆ ನನ್ನನ್ನು ಒತ್ತಾಯಿಸುತ್ತಿದ್ದರು' ಎಂದು ಮಧುಸಾಗರ್ ಮರಣಪತ್ರದಲ್ಲಿ ಬರೆದಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

'ವಿಪರೀತ ಕುಡಿಯುತ್ತಿದ್ದ ತಂದೆ, ತಾಯಿ ಜೊತೆ ಜಗಳ ಮಾಡುತ್ತಿದ್ದರು. ಹಲ್ಲೆಯನ್ನೂ ಮಾಡಿದ್ದರು. ಬಾಯಲ್ಲಿ ಚಪ್ಪಲಿ ಇಟ್ಟು ಅವಮಾನಿಸುತ್ತಿದ್ದರು. ನನ್ನ ಅಕ್ಕಂದಿರ ಜೀವನವನ್ನೂ ತಂದೆಯೇ ಹಾಳು ಮಾಡಿದರು' ಎಂಬ ಅಂಶವೂ ಪತ್ರದಲ್ಲಿರುವುದಾಗಿ ಮೂಲಗಳು ತಿಳಿಸಿವೆ.

ಶಂಕರ್, ಅಳಿಯಂದಿರ ವಿಚಾರಣೆ: ಮರಣಪತ್ರಗಳು ಪತ್ತೆಯಾಗುತ್ತಿದ್ದಂತೆ ಪೊಲೀಸರು, ಶಂಕರ್ ಹಾಗೂ ಅವರ ಅಳಿಯಂದಿರಾದ ಪ್ರವೀಣ್ ಹಾಗೂ ಶ್ರೀಕಾಂತ್ ಅವರನ್ನು ಸೋಮವಾರ ವಿಚಾರಣೆಗೆ ಒಳಪಡಿಸಿದರು.

ಮಕ್ಕಳ ಮರಣಪತ್ರದ ಬಗ್ಗೆ ಪ್ರತಿಕ್ರಿಯಿಸಿದ ಹಲ್ಲೇಗೆರೆ ಶಂಕರ್, 'ಘಟನೆಯ ತನಿಖೆ ನಡೆಯುತ್ತಿದೆ. ಪೊಲೀಸ್ ಪ್ರಕ್ರಿಯೆ ಭಾಗವಾಗಿ ವಿಚಾರಣೆಗೆ ಹಾಜರಾಗಿದ್ದೇನೆ. ಮರಣಪತ್ರದಲ್ಲಿ ಇರುವುದು ಸುಳ್ಳು. ಉಳಿದೆಲ್ಲ ಮಾಹಿತಿ ಹಂತಹಂತವಾಗಿ ಎಲ್ಲರಿಗೂ ತಿಳಿಯುತ್ತದೆ' ಎಂದರು.

ಮೂವರು ಸಿಬ್ಬಂದಿ ಮೇಲೆ ಹಲ್ಲೆ: ಬಂಧನ

ಮಂಗಳೂರು: ನಗರದ ಕರಂಗಲ್ಪಾಡಿಯಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ (ಡಯಟ್) ನುಗ್ಗಿದ ವ್ಯಕ್ತಿಯೊಬ್ಬ ಮೂವರು ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದಾನೆ. ಹಲ್ಲೆ ನಡೆಸಿದವನನ್ನು ಕುಂದಾಪುರ ನ್ಯಾಯಾಲಯದ ಗ್ರೂಪ್ 'ಡಿ' ನೌಕರ ನವೀನ್ ಶೆಟ್ಟಿ (31) ಎಂದು ಗುರುತಿಸಲಾಗಿದೆ. ನಿರ್ಮಲಾ, ರೀನಾ ರಾಯ್ ಹಾಗೂ ಗುಣವತಿ ಗಾಯಗೊಂಡವರು. ಇವರಲ್ಲಿ ನಿರ್ಮಲಾ ಅವರಿಗೆ ಗಂಭೀರ ಗಾಯಗಳಾಗಿವೆ.

ಸುರಂಗದಲ್ಲಿ ವೇಶ್ಯಾವಾಟಿಕೆ

ತುಮಕೂರು: ನಗರದ ಕ್ಯಾತ್ಸಂದ್ರ ವಸತಿ ಗೃಹವೊಂದರ ಮೇಲೆ ಸೋಮವಾರ ಪೊಲೀಸರು ದಾಳಿ ನಡೆಸಿ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದು, ಐವರು ಪುರುಷರನ್ನು ಬಂಧಿಸಿದ್ದಾರೆ.

ಈ ಸಮಯದಲ್ಲಿ ಒಬ್ಬ ಮಹಿಳೆ ತಪ್ಪಿಸಿಕೊಂಡಿದ್ದಾರೆ. ವಸತಿ ಗೃಹದಲ್ಲಿ ಸುರಂಗ ಕೊರೆದು ಮಹಿಳೆಯರನ್ನು ಬಚ್ಚಿಟ್ಟು ವೇಶ್ಯಾವಾಟಿಕೆ ನಡೆಸುತ್ತಿರುವುದು ಪತ್ತೆಯಾಗಿದೆ. ಪೊಲೀಸರು ದಾಳಿ ಮಾಡಲು ತೆರಳಿದ ಸಮಯದಲ್ಲಿ ಸೂಚನೆ ನೀಡುವ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಈ ಸೂಚನೆ ಬರುತ್ತಿದ್ದಂತೆ ಮಹಿಳೆಯರು ಹಾಗೂ ಪುರುಷರನ್ನು ಗುಹೆಯಲ್ಲಿ ಬಚ್ಚಿಡಲಾಗುತಿತ್ತು.

ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶುರಾಮ್ ಅವರು ಈ ವಿಚಾರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ತಂದಿದ್ದರು. ಅವರ ನೇತೃತ್ವದಲ್ಲಿ ದಾಳಿ ನಡೆದಿದ್ದು, ವೇಶ್ಯಾವಾಟಿಕೆ ನಡೆಯುತ್ತಿದ್ದು, ಖಚಿತಪಟ್ಟಿದೆ.

ರೈಲು ಎಂಜಿನ್ ಜಖಂ; ಮೂರು ಭಾಗವಾದ ಟಿಪ್ಪರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದಲ್ಲಿ ಸೋಮವಾರ ರಾತ್ರಿ ಮೈಸೂರು-ಚೆನ್ನೈ ಎಕ್ಸ್‌ಪ್ರೆಸ್ ರೈಲು, ಟಿಪ್ಪರ್ ಲಾರಿಯೊಂದಕ್ಕೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ರೈಲು ಎಂಜಿನ್ ಜಖಂಗೊಂಡಿದ್ದು, ಟಿಪ್ಪರ್ ಮೂರು ಭಾಗವಾಗಿದೆ.

ಲೋಕೋ ಪೈಲೆಟ್ ಸಮಯಪ್ರಜ್ಞೆಯಿಂದ ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗಿಲ್ಲ. ರೈಲು ಬರುತ್ತಿದ್ದ ವೇಳೆಯಲ್ಲೇ ಟಿಪ್ಪರ್ ಲಾರಿಯನ್ನು ಹಳಿ ದಾಟಿಸುತ್ತಿದ್ದ ಚಾಲಕ ತಲೆಮರೆಸಿಕೊಂಡಿದ್ದು, ಆತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಕಾರ್ಮೆಲ್ ರಾಮ್ ನಿಲ್ದಾಣದಿಂದ ಹೀಲಲಿಗೆ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಹಳಿ ವೇಳೆ ರೈಲು ಹೊರಟಿತ್ತು ರಾತ್ರಿ 8.30ರ ಸುಮಾರಿಗೆ ಟಿಪ್ಪರ್ ಅಡ್ಡವಾಗಿ ಬಂದಿತ್ತು. ಅದನ್ನು ಗಮನಿಸಿದ್ದ ಲೋಕೋ ಪೈಲೆಟ್, ತುರ್ತು ಬ್ರೇಕ್ ಒತ್ತಿ ದೂರದಿಂದಲೇ ರೈಲು ನಿಲ್ಲಿಸಲು ಯತ್ನಿಸಿದ್ದರು. ವೇಗದ ಮಿತಿ ಕಡಿಮೆಯಾಗುತ್ತಲೇ ರೈಲು ಲಾರಿಗೆ ಡಿಕ್ಕಿ ಹೊಡೆದಿತ್ತು.' ಎಂದು ಮೂಲಗಳು ಹೇಳಿವೆ.

'ಲಾರಿ ಚಾಲಕನ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ. ರೈಲಿನಲ್ಲಿ ಸಾಕಷ್ಟು ಪ್ರಯಾಣಿಕರು ಇದ್ದರು. ಲೋಕೋ ಪೈಲೆಟ್ ಬ್ರೇಕ್ ಹಾಕಿದ್ದರಿಂದ ಅವರ ಜೀವಕ್ಕೆ ಯಾವುದೇ ಹಾನಿಯಾಗಿಲ್ಲ.' ಎಂದೂ ರೈಲ್ವೆ ಅಧಿಕಾರಿಯೊಬ್ಬರು ಹೇಳಿದರು.

ಬೆಲೆ ಏರಿಕೆ: ಕಾಂಗ್ರೆಸ್ ಟೀಕೆಗೆ ಮುಖ್ಯಮಂತ್ರಿ ತಿರುಗೇಟು • ರೈತರಿಗೆ ಅವಮಾನ–ಡಿ.ಕೆ. ಶಿವಕುಮಾರ್

ರೈತರದ್ದು ಪ್ರಾಯೋಜಿತ ಪ್ರತಿಭಟನೆ: ಬೊಮ್ಮಾಯಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ವಿರೋಧಿಸಿ ರೈತರು ವರ್ಷದಿಂದ ನಡೆಸುತ್ತಿರುವ ಪ್ರತಿಭಟನೆ ಪ್ರಾಯೋಜಿತವಾದುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತು ನಿಯಮ 69ರಡಿ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ, ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಸರ್ಕಾರದ ಪರವಾಗಿ ಉತ್ತರ ನೀಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಗತ್ಯ ವಸ್ತುಗಳ ಬೆಲೆ ಎಷ್ಟಿತ್ತು ಎಂಬ ಬಗ್ಗೆ ಅಂಕಿ ಅಂಶಗಳ ಸಮೇತ ಉತ್ತರ ನೀಡಿದರು. 'ನಮ್ಮ ಸರ್ಕಾರದ ಅವಧಿಯಲ್ಲಿ ಮಾತ್ರ ಬೆಲೆ ಏರಿಕೆಯಾಗಿಲ್ಲ' ಎಂದೂ ಅವರು ಸಮರ್ಥಿಸಿಕೊಂಡರು.

'ಹರಿಯಾಣ ಹಾಗೂ ಪಂಜಾಬ್ ರೈತರ ಪ್ರತಿಭಟನೆಗೆ ಎಂಎಸ್‌ಪಿ ರಾಜಕಾರಣವೇ ಕಾರಣ. ಕಮಿಷನ್ ಕೈತಪ್ಪುತ್ತದೆ ಎಂಬ ಕಾರಣಕ್ಕೆ ರೈತರನ್ನು ಛೂ ಬಿಡಲಾಗಿದೆ' ಎಂದು ಕಿಡಿಕಾರಿದರು.

ಈ ಮಾತಿಗೆ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್, 'ಕೇಂದ್ರದ ಕರಾಳ ನೀತಿಯ ವಿರುದ್ಧ ರೈತರು ವರ್ಷದಿಂದ ಹೋರಾಟ ಮಾಡುತ್ತಿದ್ದಾರೆ. ಪ್ರಾಯೋಜಿತ ಹೋರಾಟ ಎನ್ನುವ ಮೂಲಕ ಮುಖ್ಯಮಂತ್ರಿ ಅವರು ರೈತರಿಗೆ ಅವಮಾನ ಮಾಡುತ್ತಿದ್ದಾರೆ' ಎಂದರು.



ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು

ಆಗ ಮಧ್ಯಪ್ರವೇಶಿಸಿದ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, 'ಈ ಹಿಂದೆ ವಿದೇಶಿ ಪ್ರಾಯೋಜಿತ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಪ್ರಾಯೋಜಿತ ಹೋರಾಟ ಎಂದು ಬಿಂಬಿಸಲಾಗುತ್ತಿತ್ತು. ಇದು ಅಂತಹುದೇ ಪ್ರಾಯೋಜಿತ ಹೋರಾಟವೇ' ಎಂದು ಮುಖ್ಯಮಂತ್ರಿ ಅವರನ್ನು ಕೆಣಕಿದರು.

ಬಸವರಾಜ ಬೊಮ್ಮಾಯಿ, 'ವಿದೇಶಿ ಪ್ರಾಯೋಜಿತ ಹೋರಾಟ ಎಂಬ ಆರೋಪ ಇಂದಿರಾ ಗಾಂಧಿ ಕಾಲದಿಂದಲೂ ಇದೆ. ಇದು ನಮ್ಮ ಕಾಲದಲ್ಲಿ ಬಂದಿದ್ದು ಅಲ್ಲ. ರೈತರ ಹೋರಾಟದ ಹಿಂದೆ ವಿದೇಶಿ ಕೈವಾಡವೂ ಸ್ವಲ್ಪ ಮಟ್ಟಿಗೆ ಇರಬಹುದು' ಎಂದು ಹೇಳಿದರು. 'ಈ ಮಾತಿಗೆ ಸದನದ ಹೊರಗೆ ಉತ್ತರ ನೀಡುತ್ತೇವೆ' ಎಂದು ರಮೇಶ್ ಕುಮಾರ್ ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಇಂತಹ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಡುವವರು ಆಡಳಿತ ಪಕ್ಷದ ಜತೆಗೆ ಇದ್ದಾರೆ' ಎಂದು ವ್ಯಂಗ್ಯವಾಡಿದರು.

ಲೂಟಿ ಜಟಾಪಟಿ: ಅಗತ್ಯ ವಸ್ತುಗಳ ಬೆಲೆ ಏರಿಕೆ ಮೂಲಕ ಕೇಂದ್ರ ಸರ್ಕಾರವು ಕ್ರಿಮಿನಲ್ ಲೂಟಿ ಮಾಡುತ್ತಿದೆ ಎಂಬ ವಿಷಯವು ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

'ಬೆಲೆ ಏರಿಕೆಯನ್ನು ಕ್ರಿಮಿನಲ್ ಲೂಟಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. 60ರ ದಶಕದಿಂದಲೂ ಬೆಲೆ ಏರಿಕೆ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಬೆಲೆ ಏರಿಕೆ ಆಗಿದೆ. ಅದನ್ನು ಕಾಂಗ್ರೆಸ್‌ನ ಕ್ರಿಮಿನಲ್ ಲೂಟಿ ಎಂದು ಕರೆಯಬಹುದಲ್ಲವೇ' ಎಂದು ಪ್ರಶ್ನಿಸಿದ ಬೊಮ್ಮಾಯಿ, ಯುಪಿಎ ಸರ್ಕಾರದ ಅವಧಿಯಲ್ಲಿ ಪೆಟ್ರೋಲ್ ಬೆಲೆಯನ್ನು ಶೇ 60ರಷ್ಟು ಏರಿಸಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಶೇ 30ರಷ್ಟು ಮಾತ್ರ ಏರಿಸಲಾಗಿದೆ ಎಂದು ಪ್ರತಿಪಾದಿಸಿದರು.

'ಶೇಕಡಾವಾರು ಲೆಕ್ಕ ಹಾಕುವುದು ಇದ್ಯಾವ ಪದ್ಧತಿ' ಎಂದೂ ಕಾಂಗ್ರೆಸ್ ಸದಸ್ಯರು ಪ್ರಶ್ನಿಸಿದರು.

'ನಿಮ್ಮದೇ ಪಕ್ಷದ ಸುಬ್ರಹ್ಮಣ್ಯ ಸ್ವಾಮಿ ಬೆಲೆ ಏರಿಕೆ ಬಗ್ಗೆ ಮಾತನಾಡಿದ್ದಾರಲ್ಲ' ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರವೇ ಜನರ ಲೂಟಿ ಮಾಡುತ್ತಿದೆ ಎಂದೂ ಆರೋಪಿಸಿದರು. 'ನಿಮ್ಮದು ಭೂತದ ಬಾಯಲ್ಲಿ ಭಗವದ್ಗೀತೆ' ಎಂದು ಮುಖ್ಯಮಂತ್ರಿ ತಿರುಗೇಟು ನೀಡಿದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ನಡೆಯಿತು. ಕಾಂಗ್ರೆಸ್‌ನಿಂದ ಕ್ರಿಮಿನಲ್ ಲೂಟಿ ಎಂದು ಬಿಜೆಪಿ ಸದಸ್ಯರು ದೂರಿದರೆ, ಬಿಜೆಪಿ ಸರ್ಕಾರ ಲೂಟಿ ಮಾಡುತ್ತಿದೆ ಎಂದೂ ಕಾಂಗ್ರೆಸ್ ಸದಸ್ಯರು ಟೀಕಿಸಿದರು.

ಬಸವರಾಜ ಬೊಮ್ಮಾಯಿ, '2014–17ರಿಂದ ಪೆಟ್ರೋಲಿಯಂ ಉತ್ಪನ್ನಗಳಿಂದ ₹36 ಲಕ್ಷ ಕೋಟಿ ವರಮಾನ ಬಂದಿದೆ. ಅದರಲ್ಲಿ ಶೇ 40 ಮೊತ್ತವನ್ನು ರಾಜ್ಯಗಳಿಗೆ ನೀಡಲಾಗಿದೆ' ಎಂದರು. 'ಕೇಂದ್ರ ಸರ್ಕಾರವು ಕೃಷಿ ಸಮ್ಮಾನ್ ಯೋಜನೆ ಜಾರಿ ಮಾಡಿದೆ. ಕೃಷಿ ಉತ್ಪನ್ನಗಳ ಬೆಲೆಯನ್ನೂ ಏರಿಸಲಾಗಿದೆ. ಕೋವಿಡ್ ಅವಧಿಯಲ್ಲಿ ಜನರು ಹಸಿವಿನಿಂದ ಸಾಯದಂತೆ ನೋಡಿಕೊಂಡಿದೆ' ಎಂದೂ ಸಮರ್ಥಿಸಿಕೊಂಡರು.

ಪೆಟ್ರೋಲ್, ಡೀಸೆಲ್‌ಗಳ ಮಾರಾಟ ತೆರಿಗೆಯನ್ನು ಇಳಿಸುವಂತೆ ಈ ಹಿಂದಿನ ಸರ್ಕಾರಗಳ ಮೇಲೂ ಒತ್ತಡ ಇತ್ತು. ಆದರೆ, ಯಾವ ಸರ್ಕಾರವೂ ಈ ಕೆಲಸ ಮಾಡಿಲ್ಲ ಎಂದು ಬೊಮ್ಮಾಯಿ ಟೀಕಿಸಿದರು. ಈಗಲೂ ಅಂತಹ ಪ್ರಸ್ತಾವ ನಮ್ಮ ಸರ್ಕಾರದ ಮುಂದಿಲ್ಲ ಎಂದೂ ಹೇಳಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, 'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಲೀಟರ್‌ಗೆ ₹1.25 ಬೆಲೆ ಏರಿಸಲಾಗಿತ್ತು. ಮತ್ತೆ ₹3 ದರ ಇಳಿಸಿದ್ದೆವು' ಎಂದು ನೆನಪಿಸಿದರು.

ಕಾಂಗ್ರೆಸ್ ಸಭಾತ್ಯಾಗ

ಬೆಲೆ ಏರಿಕೆ ವಿಚಾರವಾಗಿ ಮುಖ್ಯಮಂತ್ರಿಯವರ ಉತ್ತರದಿಂದ ತೃಪ್ತರಾಗದ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು. ಕಾವೇರಿದ ವಾತಾವರಣದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಪರಸ್ಪರ ವಾಗ್ದಾಳಿ ನಡೆಸಿದ್ದೂ ಅಲ್ಲದೆ, ಧಿಕ್ಕಾರ ಮತ್ತಿತರ ಘೋಷಣೆಗಳನ್ನು ಕೂಗಿದರು.

'ಭಾರತ ಮಾತ್ರವಲ್ಲ, ಇಡೀ ವಿಶ್ವವೇ ಕೋವಿಡ್ ಮತ್ತು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರ ಜನರಿಂದ ಸಂಗ್ರಹಿಸಿದ ತೆರಿಗೆಯನ್ನು ಬಡ ಜನರ ಕಲ್ಯಾಣಕ್ಕಾಗಿ ನ್ಯಾಯೋಚಿತವಾಗಿ ಬಳಸಲಾಗುತ್ತಿದೆ. ಯುಪಿಎ ಅವಧಿಯಲ್ಲೂ ತೆರಿಗೆ ಹೊರೆ ವಿಧಿಸಲಾಗಿತ್ತು. ಆಗ ನಾವು ಪ್ರತಿಭಟನೆ ನಡೆಸಿದಾಗ ತೆರಿಗೆ ಪ್ರಮಾಣ ಇಳಿಸಿದ್ದೀರಾ? ಆರ್ಥಿಕ ಶಿಸ್ತು ಕಾಪಾಡಲು ಅನಿವಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮುಂಬರುವ ದಿನಗಳಲ್ಲಿ ತೆರಿಗೆ ಇಳಿಸುವ ವಿಶ್ವಾಸ ಇದೆ' ಎಂದು ಬೊಮ್ಮಾಯಿ ಸಮರ್ಥಿಸಿಕೊಂಡರು.

'ಜನಾರ್ದನ್ ಹೋಟೆಲ್ ದೋಸೆ ಬೆಲೆ ಏರಿಲ್ಲವೇ?'

'ನಗರದ ಜನಾರ್ದನ್ ಹೋಟೆಲ್ ಮಸಾಲೆ ದೋಸೆ ಬೆಲೆ ಏರಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕುತೂಹಲದಿಂದ ಅಲ್ಲಿನ ಬೆಲೆ ಪಟ್ಟಿಯನ್ನು ತರಿಸಿಕೊಂಡೆ. ಅವರು ಹೇಳಿದಂತೆ ಇಡ್ಲಿ ಹಾಗೂ ಮಸಾಲೆ ದೋಸೆ ಬೆಲೆ ದುಪ್ಪಟ್ಟು ಆಗಿಲ್ಲ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'2019 ಹಾಗೂ 20ರಲ್ಲಿ ಮಸಾಲೆ ದೋಸೆ ಬೆಲೆ ₹80 ಇತ್ತು. ಈ ವರ್ಷ ₹90 ಆಗಿದೆ. ಅದು ಸಹಜ ಬೆಲೆ ಏರಿಕೆ. ಸಿದ್ದರಾಮಯ್ಯ ಅವರಿಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ' ಎಂದೂ ಕುಟುಕಿದರು. 'ಮಸಾಲೆ ದೋಸೆ ವಿಷಯ ಪಕ್ಕಕ್ಕೆ ಇಡಿ. ಅಡುಗೆ ಎಣ್ಣೆಗಳ ಬೆಲೆ ಹೆಚ್ಚಾದುದರ ಬಗ್ಗೆ ಮಾತನಾಡಿ' ಎಂದು ಸಿದ್ದರಾಮಯ್ಯ ಕಿವಿಮಾತು ಹೇಳಿದರು.

ನೇಮಕಾತಿ ಅಕ್ರಮ: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕುರಿತು ಆಂತರಿಕ ತನಿಖೆ ಕೈಗೊಳ್ಳಲಾಗಿದೆ ಎಂದು ಅರಣ್ಯ ಸಚಿವ ಉಮೇಶ ಕತ್ತಿ ಸೋಮವಾರ ವಿಧಾನ-ಪರಿಷತ್‌ನಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ನಸೀರ್ ಅಹ್ಮದ್ ಅವರು ಈ ಬಗ್ಗೆ ವಿಷಯ ಪ್ರಸ್ತಾಪಿಸಿ, ಅರಣ್ಯ ವೀಕ್ಷಕ, ಅರಣ್ಯ ರಕ್ಷಕ, ಉಪವಲಯ ಅರಣ್ಯಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ಆರೋಪಗಳಿವೆ ಎಂದು ಹೇಳಿದರು.

ಈ ಅಕ್ರಮಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಅಧಿಕಾರಿಗಳೇ ಪ್ರಭಾವಿ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಇದರಿಂದ, ಸಾಕ್ಷ ನಾಶ ಮಾಡಬಹುದು. ಅವರನ್ನು ತಕ್ಷಣವೇ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಕತ್ತಿ, ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಜುಲೈ 27ರಂದು ಪತ್ರ ಬರೆದು ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ತನಿಖೆ ನಡೆಸಲು ಪೂರ್ವಾನುಮತಿ ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರನ್ನು ಕೋರಿದ್ದಾರೆ. ಆದರೆ, ಇಲಾಖೆಯ ಜಾಗೃತ ದಳಕ್ಕೆ ಪ್ರಾಥಮಿಕ ತನಿಖೆ ನಡೆಸುವಂತೆ ಈಗಾಗಲೇ ಆದೇಶಿಸಲಾಗಿದೆ. 15 ದಿನಗಳಲ್ಲಿ ಈ ವರದಿ ಲಭ್ಯವಾಗಲಿದೆ. ವರದಿ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.



ವಿಧಾನ ಪರಿಷತ್‌ನಲ್ಲಿ ಸೋಮವಾರ ಉಮೇಶ್ ಕತ್ತಿ ಮಾತನಾಡಿದರು

ಈ ಪ್ರಕರಣದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿಯಾಗಿರುವುದು ಕಂಡು ಬಂದಲ್ಲಿ ತಕ್ಷಣವೇ ಅಮಾನತು ಮಾಡಲಾಗುವುದು ಎಂದು ಅವರು ತಿಳಿಸಿದರು.

ಕುಮಾರಸ್ವಾಮಿ ಟೀಕೆಗೆ ಸಿದ್ದರಾಮಯ್ಯ ಎದಿರೇಟು

ಬೆಂಗಳೂರು: 'ಅನ್ನ ಭಾಗ್ಯ ಯೋಜನೆಯಡಿ 7 ಕೆ.ಜಿ. ಅಕ್ಕಿ ನೀಡಲು ಸಿದ್ದರಾಮಯ್ಯ ಹಣ ಎತ್ತಿಡಲಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿದ್ದಾರೆ. ನನ್ನ ಸರ್ಕಾರದ ಅವಧಿಯಲ್ಲಿ ಪ್ರತಿವರ್ಷ 7 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಿದ್ದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, 'ಹಣ ಇಡದ ಕಾರಣ ಯೋಜನೆ ಅನುಷ್ಠಾನಕ್ಕೆ ಸಮಸ್ಯೆ ಆಯಿತು ಎಂದು ಕುಮಾರಸ್ವಾಮಿ ಮೊನ್ನೆ ಹೇಳಿಕೊಂಡರು. ಸರ್ಕಾರ ಯಾವುದಾದರೂ ಹೊಸ ಘೋಷಣೆ ಮಾಡಿದರೆ ಅದನ್ನು ಮುಂದುವರಿಸುವುದು ಮುಂದಿನ ಸರ್ಕಾರದ ಜವಾಬ್ದಾರಿ. ಒಂದು ವೇಳೆ ಅನುದಾನ ಕೊರತೆ ಉಂಟಾದರೆ ಪೂರಕ ಬಜೆಟ್‌ನಲ್ಲಿ ಅದಕ್ಕೆ ವ್ಯವಸ್ಥೆ ಮಾಡಬೇಕು' ಎಂದರು.



ಸಿದ್ದರಾಮಯ್ಯ

ಎಚ್.ಡಿ.ಕುಮಾರಸ್ವಾಮಿ, '17 ಲಕ್ಷ ಮನೆಗಳ ನಿರ್ಮಾಣಕ್ಕೆ ₹29 ಸಾವಿರ ಕೋಟಿಯ ಯೋಜನೆ ರೂಪಿಸಿ ₹3 ಸಾವಿರ ಕೋಟಿ ಮೀಸಲಿಡಲಾಗಿತ್ತು ಎಂಬ ವಾಸ್ತವಾಂಶವನ್ನು ನಾನು ಸದನದ ಮುಂದೆ ಇಟ್ಟೆ. ಹಿಂದಿನ ಸರ್ಕಾರದ ಯೋಜನೆಯನ್ನು ಮುಂದುವರಿಸಬೇಕು ಎಂಬುದು ನಿಜ. ಎಲ್ಲ ದಾಖಲೆಗಳನ್ನು ತರಿಸಿ ಸದನದ ಮುಂದೆ ಇಟ್ಟರೆ ಎಲ್ಲರಿಗೂ ಸತ್ಯಾಂಶ ಗೊತ್ತಾಗುತ್ತದೆ' ಎಂದರು.

ಅತಿಥಿ ಉಪನ್ಯಾಸಕರ ಗೌರವ ಧನ ಪರಿಷ್ಕರಣೆ ಮತ್ತು ಕಾಯಂಗೆ ಒತ್ತಾಯ

ಜೆಡಿಎಸ್ ಸದಸ್ಯರ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರ ಗೌರವ ಧನ ಹೆಚ್ಚಿಸಲು ಮತ್ತು ಕಾಯಂಗೊಳಿಸಲು ಸರ್ಕಾರ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ ಎಂದು ದೂರಿದ ಜೆಡಿಎಸ್ ಸದಸ್ಯರು ಸೋಮವಾರ ವಿಧಾನ ಪರಿಷತ್‌ನಲ್ಲಿ ಸಭಾತ್ಯಾಗ ಮಾಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು, 'ಅತಿಥಿ ಉಪನ್ಯಾಸಕರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಸರ್ಕಾರ ಇವರನ್ನು ಕಾಯಂ ಮಾಡಿಕೊಳ್ಳಲು ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಕೆಲವು ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ ₹50 ಸಾವಿರ ದವರೆಗೂ ಗೌರವ ಧನ ನೀಡಲಾಗುತ್ತಿದೆ. ಬೋಧ ಕೇತರ ಸಿಬ್ಬಂದಿಯನ್ನಾಗಿಯಾದರೂ ನೇಮಿಸಿಕೊಳ್ಳುವ ಮೂಲಕ ಸೇವಾ ಭದ್ರತೆ ಒದಗಿಸಬೇಕು ಮತ್ತು ಗೌರವ ಧನವನ್ನು ಪರಿಷ್ಕರಿಸಬೇಕು. ಕಾಲಮಿತಿ ಒಳಗೆ ಈ ಬಗ್ಗೆ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, 'ಗೌರವ ಧನ ಪರಿಷ್ಕರಿಸುವ ಬಗ್ಗೆ ಪರಿಶೀಲಿಸಲಾಗುವುದು ಮತ್ತು ಈಗಿರುವ ಅತಿಥಿ ಉಪನ್ಯಾಸಕರನ್ನೇ ಮುಂದುವರಿಸಲಾಗುವುದು. ಆದರೆ, ಕಾಯಂಗೊಳಿಸುವ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ' ಎಂದು ಹೇಳಿದರು.

'ಸಚಿವರು ನಿರಾಶಾದಾಯಕ ಉತ್ತರ ನೀಡಿದ್ದಾರೆ. ಅತಿಥಿ ಉಪನ್ಯಾಸಕರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕೆ ಸಭೆ: ಸಚಿವ ನಾಗೇಶ್

ಅನುದಾನಿತ ಪದವಿಪೂರ್ವ ಕಾಲೇಜುಗಳ ಖಾಲಿ ಹುದ್ದೆ ಭರ್ತಿ ಸೇರಿದಂತೆ ಶಿಕ್ಷಣ ಕ್ಷೇತ್ರದ ಮೂರು ಪ್ರಮುಖ ಬೇಡಿಕೆಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿಯಲ್ಲೇ ಉನ್ನತಮಟ್ಟದ ಸಭೆ ನಡೆಸಿ ಪರಿಹಾರ ಕಂಡುಕೊಳ್ಳಲು ಯತ್ನಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಎರಡು ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಅಡಿಯಲ್ಲಿ ಪ್ರಸ್ತಾಪವಾದ ಒಂದು ವಿಷಯಕ್ಕೆ ಉತ್ತರಿಸಿದ ಅವರು, 'ಸಭಾಪತಿ ಹಾಗೂ ವಿಷಯ ಪ್ರಸ್ತಾಪಿಸಿರುವ ಸದಸ್ಯರ ಉಪಸ್ಥಿತಿಯಲ್ಲಿ ಶಿಕ್ಷಣ ಮತ್ತು ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಉನ್ನತಮಟ್ಟದ ಸಭೆ ನಡೆಸುತ್ತೇನೆ. ಈ ಎಲ್ಲ ಸಮಸ್ಯೆಗಳಿಗೂ ತಾರ್ಕಿಕ ಅಂತ್ಯ ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ' ಎಂದರು.

ಗಮನ ಸೆಳೆಯುವ ಸೂಚನೆ ಮಂಡಿಸಿದ ಬಿಜೆಪಿಯ ಎಸ್. ವಿ. ಸಂಕನೂರ, ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಕಾರ್ಯಭಾರ ನಿಗದಿಪಡಿಸಿರುವ ಆದೇಶ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು. ಅನುದಾನಿತ ಹಾಗೂ ಸರ್ಕಾರಿ ಶಾಲಾ, ಕಾಲೇಜುಗಳ ನೌಕರರಿಗೆ ಪಿಂಚಣಿ ಸೌಲಭ್ಯಕ್ಕೆ 2006ರ ಏಪ್ರಿಲ್ 1ಕ್ಕೂ ಮೊದಲಿನ ಸೇವೆಯನ್ನು ಪರಿಗಣಿಸಿ ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ ನೀಡುವಂತೆ ಬಿಜೆಪಿಯ ಆಯನೂರು ಮಂಜುನಾಥ್, ಸಂಕನೂರ, ಅರುಣ್ ಶಹಾಪುರ ಜೆಡಿಎಸ್‌ನ ಮರಿತಿಬ್ಬೇಗೌಡ ಮತ್ತು ಕೆ.ಟಿ. ಶ್ರೀಕಂಠೇಗೌಡ ಆಗ್ರಹಿಸಿದರು.

2000ನೇ ಇಸವಿಗೂ 15–20 ವರ್ಷಗಳ ಮೊದಲಿನಿಂದಲೂ ಅನುದಾನಿತ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ 350ರಿಂದ 400ರಷ್ಟು 'ಡಿ' ದರ್ಜೆ ನೌಕರರ ಸೇವೆಯನ್ನು ಕಾಯಂ ಮಾಡದೇ ಇರುವುದರಿಂದ ಅವರ ಜೀವನಕ್ಕೆ ತೊಂದರೆಯಾಗಿದೆ ಎಂದು ಇದೇ ಸದಸ್ಯರು ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದರು.

'ಈ ಎಲ್ಲ ಬೇಡಿಕೆಗಳ ಕುರಿತು ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿಸಲಾಗುವುದು. ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಮನವರಿಕೆ ಮಾಡಿ, ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲಾಗುವುದು' ಎಂದು ಸಚಿವರು ಉತ್ತರಿಸಿದರು.

5 ಮಸೂದೆಗಳಿಗೆ ಪರಿಷತ್ ಒಪ್ಪಿಗೆ

ಬೆಂಗಳೂರು: ರಾಜ್ಯ ಬಂದೀಖಾನೆ ಅಭಿವೃದ್ಧಿ ಮಂಡಳಿ ಮಸೂದೆ–2021 ಸೇರಿದಂತೆ ವಿಧಾನಸಭೆಯ ಅಂಗೀಕಾರ ಪಡೆದಿದ್ದ ಐದು ಮಸೂದೆಗಳಿಗೆ ವಿಧಾನ ಪರಿಷತ್ ಸೋಮವಾರ ಒಪ್ಪಿಗೆ ನೀಡಿತು.

ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಮಸೂದೆ–2021, ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ (ತಿದ್ದುಪಡಿ) ಮಸೂದೆ– 2021, ಬಂದಿಗಳ ಗುರುತಿಸುವಿಕೆ (ಕರ್ನಾಟಕ ತಿದ್ದುಪಡಿ) ಮಸೂದೆ–2021 ಹಾಗೂ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆ–2021 ವಿಧಾನ ಪರಿಷತ್‌ನ ಅಂಗೀಕಾರ ಪಡೆದಿರುವ ಇತರ ಮಸೂದೆಗಳು.



ರಾಣೆಬೆನ್ನೂರು ನಗರದ ದುರ್ಗಾ ಮಾರುಕಟ್ಟೆಯಲ್ಲಿ ಸೋಮವಾರ ಬೆಳಗಿನ ಜಾವ ಸಂಭವಿಸಿದ ಬೆಂಕಿ ಅವಘಡದಿಂದ ಸುಟ್ಟು ಕರಕಲಾದ ತರಕಾರಿ ಮಳಿಗೆಗಳು

ಬೆಂಕಿ ಅವಘಡ: 97 ಅಂಗಡಿಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ): ನಗರದ ದುರ್ಗಾ ತರಕಾರಿ ಮಾರುಕಟ್ಟೆಯಲ್ಲಿ ಸೋಮವಾರ ಬೆಳಗಿನ ಜಾವ 4 ಗಂಟೆ ವೇಳೆಯಲ್ಲಿ ಬೆಂಕಿ ಬಿದ್ದು 90ಕ್ಕೂ ಹೆಚ್ಚು ಅಂಗಡಿಗಳಿಗೆ ಹಾನಿಯಾಗಿದೆ.

ನಗರಸಭೆ ವ್ಯಾಪ್ತಿಯಲ್ಲಿ ಬರುವ ಈ ಮಾರುಕಟ್ಟೆಯಲ್ಲಿದ್ದ ತಗಡಿನ ಮಳಿಗೆಗಳಿಗೆ ಬೆಂಕಿ ತಗುಲಿ ತರಕಾರಿ, ಹಣ್ಣು, ದಿನಸಿ ಪದಾರ್ಥಗಳು ಸುಟ್ಟು ಭಸ್ಮವಾಗಿವೆ.

ಬೆಂಕಿ ಉರಿಯುತ್ತಿರುವುದನ್ನು ನೋಡಿದ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ, ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಆ ವೇಳೆಗಾಗಲೇ ಬಹಳಷ್ಟು ಮಳಿಗೆಗಳಲ್ಲಿದ್ದ ಪದಾರ್ಥಗಳು ಸುಟ್ಟು ಕರಕಲಾಗಿದ್ದವು. ತಮ್ಮ ಅಂಗಡಿಗಳ ಮುಂದೆ ವ್ಯಾಪಾರಿಗಳ ರೋದನ ಮುಗಿಲು ಮುಟ್ಟಿತ್ತು.

ದುಷ್ಕರ್ಮಿಗಳು ದುರುದ್ದೇಶದಿಂದ ಪೆಟ್ರೋಲ್ ಸುರಿದು ಮಳಿಗೆಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದೆ. ರಾಣೆಬೆನ್ನೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೈಮಾ 2020: 'ಲವ್ ಮಾಕ್ಟೇಲ್' ಅತ್ಯುತ್ತಮ ಚಿತ್ರ

ಪ್ರತಿಷ್ಠಿತ ದಕ್ಷಿಣ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ(ಸೈಮಾ) ಪ್ರದಾನ ಸಮಾರಂಭ ಹೈದರಾಬಾದ್‌ನಲ್ಲಿ ನಡೆದಿದ್ದು, 2020ನೇ ಸಾಲಿನ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿಯನ್ನು ನಟ ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ 'ಲವ್ ಮಾಕ್ಟೇಲ್' ಚಿತ್ರವು ಪಡೆದಿದೆ.



ಧನಂಜಯ್



ಖುಷಿ ರವಿ



ಪೃಥ್ವಿ ಅಂಬರ್



ಪ್ರಜ್ವಲ್ ದೇವರಾಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ದಕ್ಷಿಣ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ(ಸೈಮಾ) ಪ್ರದಾನ ಸಮಾರಂಭ ಹೈದರಾಬಾದ್‌ನಲ್ಲಿ ನಡೆದಿದ್ದು, 2020ನೇ ಸಾಲಿನ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿಯನ್ನು ನಟ ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ 'ಲವ್ ಮಾಕ್ಟೇಲ್' ಚಿತ್ರವು ಪಡೆದಿದೆ.

'ಪಾಪ್‌ಕಾರ್ನ್ ಮಂಕಿ ಟೈಗರ್' ಚಿತ್ರದಲ್ಲಿನ ನಟನೆಗಾಗಿ ನಟ 'ಡಾಲಿ' ಧನಂಜಯ್ ಅವರು ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. 'ಪ್ರತಿ ಹೆಜ್ಜೆಯಲ್ಲೂ ಶಕ್ತಿಯಾಗಿ ನಿಂತಿರುವ ನನ್ನ ಅಭಿಮಾನಿ ಬಳಗಕ್ಕೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ' ಎಂದಿದ್ದಾರೆ ಧನಂಜಯ್. 'ಲವ್ ಮಾಕ್ಟೇಲ್' ಚಿತ್ರದಲ್ಲಿನ ನಟನೆಗಾಗಿ ನಟಿ ಮಿಲನಾ ನಾಗರಾಜ್ ಅವರು ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ. 'ದಿಯಾ' ಚಿತ್ರದಲ್ಲಿನ ನಟನೆಗಾಗಿ ಖುಷಿ ರವಿ ಅವರು ಅತ್ಯುತ್ತಮ ನಟಿ(ಕ್ರಿಟಿಕ್ಸ್) ಪ್ರಶಸ್ತಿ ಪಡೆದಿದ್ದಾರೆ. 'ಜಂಟಲ್‌ಮನ್' ಚಿತ್ರದ ನಾಯಕ ಪ್ರಜ್ವಲ್ ದೇವರಾಜ್ ಅವರು ಅತ್ಯುತ್ತಮ ನಟ(ಕ್ರಿಟಿಕ್ಸ್) ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಇದು ಹೃದಯದಿಂದ ಬರೆದು, ನಿರ್ದೇಶಿಸಿ, ನಟಿಸಿದ ಚಿತ್ರ. ಚಿತ್ರದ 2ನೇ ಭಾಗದ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಪೂರ್ಣಗೊಂಡಿದ್ದು ಶೀಘ್ರ ಬಿಡುಗಡೆಯಾಗಲಿದೆ

–ಡಾರ್ಲಿಂಗ್ ಕೃಷ್ಣ, ನಟ, ನಿರ್ದೇಶಕ



ಬಿ.ಸುರೇಶ್



ರಂಗಾಯಣ ರಘು

2020ನೇ ಸಾಲಿನ ಸೈಮಾ ಪ್ರಶಸ್ತಿ

ಅತ್ಯುತ್ತಮ ಪೋಷಕ ನಟ	ಬಿ.ಸುರೇಶ್ (ಆ್ಯಕ್ಟ್ 1978)
ಅತ್ಯುತ್ತಮ ಪೋಷಕ ನಟಿ	ಅಮೃತ ಅಯ್ಯಂಗಾರ್ (ಲವ್ ಮಾಕ್ಟೇಲ್)
ಅತ್ಯುತ್ತಮ ಹಾಸ್ಯ ನಟ	ರಂಗಾಯಣ ರಘು (ಫ್ರೆಂಚ್ ಬಿರಿಯಾನಿ)
ಅತ್ಯುತ್ತಮ ನಟ(ಚೊಚ್ಚಲ ಸಿನಿಮಾ)	ಪೃಥ್ವಿ ಅಂಬರ್(ದಿಯಾ)
ಅತ್ಯುತ್ತಮ ನಟಿ (ಚೊಚ್ಚಲ ಸಿನಿಮಾ)	ಸಪ್ತಮಿ ಗೌಡ (ಪಾಪ್‌ಕಾರ್ನ್ ಮಂಕಿ ಟೈಗರ್)
ಅತ್ಯುತ್ತಮ ಹಿನ್ನೆಲೆ ಗಾಯಕ	ಸಂಜಿತ್ ಹೆಗ್ಡೆ (ಚಿತ್ರ: ಜೆಂಟಲ್‌ಮೆನ್–ಹಾಡು: ಮರಳಿ ಮನಸಾಗಿದೆ)
ಅತ್ಯುತ್ತಮ ಹಿನ್ನೆಲೆ ಗಾಯಕಿ	ಅದಿತಿ ಸಾಗರ್ (ಚಿತ್ರ: ಫ್ರೆಂಚ್ ಬಿರಿಯಾನಿ– ಹಾಡು: ದಿ ಬೆಂಗಳೂರು)
ಅತ್ಯುತ್ತಮ ಛಾಯಾಗ್ರಹಣ	ವಿಶಾಲ್ ವಿಟ್ಟಲ್ ಹಾಗೂ ಸೌರಭ್ ವಾಗ್ಮರೆ (ದಿಯಾ)
ಅತ್ಯುತ್ತಮ ಸಾಹಿತ್ಯ	ಧನಂಜಯ್ ರಂಜನ್ (ಸೋಲ್ ಆಫ್ ದಿಯಾ: ಚಿತ್ರ–ದಿಯಾ)
ಅತ್ಯುತ್ತಮ ಸಂಗೀತ ನಿರ್ದೇಶಕ	ಬಿ. ಅಜನೀಶ್ ಲೋಕನಾಥ್ (ದಿಯಾ)
ಅತ್ಯುತ್ತಮ ನಿರ್ದೇಶಕ (ಚೊಚ್ಚಲ ಸಿನಿಮಾ)	ರಾಧಾಕೃಷ್ಣ ರೆಡ್ಡಿ (ಮಾಯಾಬಜಾರ್ 2016)
ಅತ್ಯುತ್ತಮ ನಿರ್ಮಾಪಕ (ಚೊಚ್ಚಲ ಚಿತ್ರ)	ಅಂಜನಾದ್ರಿ ಸಿನಿ ಕ್ರಿಯೇಷನ್ಸ್ (ಶಿವಾಜಿ ಸುರತ್ಕಲ್)



ಕೆಎಸ್‌ಆರ್ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದ ತನಕ ಮೆರವಣಿಗೆ ನಡೆಸಿದ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರು –ಪ್ರಜಾವಾಣಿ ಚಿತ್ರ

ಸಾವಿರಾರು ಕಾರ್ಮಿಕರಿಂದ ಬೆಂಗಳೂರಿನಲ್ಲಿ ಪ್ರತಿಭಟನೆ

ಕಾರ್ಮಿಕರ ಹಣ ದುರ್ಬಳಕೆ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಹಣ ದುರುಪಯೋಗದ ಬಗ್ಗೆ ತನಿಖೆಗೆ ಆಗ್ರಹಿಸಿ ಕಟ್ಟಡ ಕಾರ್ಮಿಕರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಕಾರ್ಮಿಕರು ಪಾಲ್ಗೊಂಡಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದ ತನಕ ಮೆರವಣಿಗೆ ನಡೆಸಿದರು. ಉದ್ಯಾನದ ಪಕ್ಕದ ರಸ್ತೆಯಲ್ಲಿ ಮಳೆ ನಡುವೆಯೂ ಧರಣಿ ಸತ್ಯಾಗ್ರಹ ನಡೆಸಿದರು.

'ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡಲೆಂದು ರಚನೆಯಾದ ಕಾರ್ಮಿಕ ಕಲ್ಯಾಣ ಮಂಡಳಿಯು ಮಂತ್ರಿಗಳು ಮತ್ತು ಅಧಿಕಾರಿಗಳ ಕಪಿಮುಷ್ಟಿಗೆ ಸಿಲುಕಿ ಉದ್ದೇಶವೇ ಮಣ್ಣು ಪಾಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾರ್ಮಿಕರಿಗೆ ನೇರ ನಗದು ವರ್ಗಾವಣೆ ಸವಲತ್ತು ನೀಡಲು ಕಾನೂನಿನ ನೂರೆಂಟು ಅಡ್ಡಿಗಳನ್ನು ಒಡ್ಡಲಾಗುತ್ತಿದೆ. ಆದರೆ, ಕಾರ್ಮಿಕರಿಗೆ ಅಗತ್ಯವಿಲ್ಲದ ಟೆಂಡರ್ ಆಧಾರಿತ ಕಾರ್ಯಕ್ರಮಗಳನ್ನು ನಿಯಮ ಮೀರಿ ಜಾರಿಗೆ ತರಲಾಗುತ್ತಿದೆ. ಇದರಿಂದ ಮಂಡಳಿಯ ಹಣ ಕಾರ್ಮಿಕರಿಗೆ ಸಿಗುವ ಬದಲು ಮಂತ್ರಿಗಳು, ಅಧಿಕಾರಿಗಳ ಬಂಗಲೆ ಸೇರುತ್ತಿದೆ' ಎಂದು ದೂರಿದರು.

'21 ಲಕ್ಷ ಕಳಪೆ ದಿನಸಿ ಕಿಟ್, ಸುರಕ್ಷತಾ ಕಿಟ್, ಬೂಸ್ಟರ್ ಕಿಟ್, ಆಂಬುಲೆನ್ಸ್, ಕಾರುಗಳ ಖರೀದಿ, ಕಂಪ್ಯೂಟರ್ ಮತ್ತು ಟಿ.ವಿ ಖರೀದಿ, ಕ್ಯಾಲೆಂಡರ್ ಮುದ್ರಣದ ಬಗ್ಗೆ ಸದನ ಸಮಿತಿಯಿಂದ ತನಿಖೆ ನಡೆಸಬೇಕು. ವಲಸಿಗರ ಹೆಸರಿನಲ್ಲಿ ಭವ್ಯ ಸೌಧ ಕಟ್ಟುವ ಪ್ರಸ್ತಾಪ ಕೈಬಿಡಬೇಕು' ಎಂದು ಒತ್ತಾಯಿಸಿದರು.

'ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಸ್ವೀಕಾರ ಕಾರ್ಯವನ್ನು ಕೂಡಲೇ ಆರಂಭಿಸಬೇಕು. ಕೋವಿಡ್‌ನಿಂದ ಮೃತಪಟ್ಟ ಕಾರ್ಮಿಕರಿಗೆ ₹2 ಲಕ್ಷ ಪರಿಹಾರ ನೀಡಬೇಕು. ಹೆಚ್ಚಿಸಲಾದ ಪಿಂಚಣಿ ಮತ್ತು ಮದುವೆ ಧನ ಸಹಾಯ ಜಾರಿಯಾಗಬೇಕು' ಎಂದು ಆಗ್ರಹಿಸಿದರು.

'ಅರೆ ಕಾಸಿನ ವೈದ್ಯಕೀಯ ಸಹಾಯ ಧನ ಕೈಬಿಟ್ಟು ₹5 ಲಕ್ಷ ವೈದ್ಯಕೀಯ ನೆರವು ಜಾರಿ ಮಾಡಬೇಕು. ಹೆರಿಗೆ ಭತ್ಯೆಯನ್ನು ಪುರುಷ ಫಲಾನುಭವಿಯ ಪತ್ನಿಗೂ ವಿಸ್ತರಿಸಬೇಕು. ಮನೆ ನಿರ್ಮಾಣಕ್ಕೆ ₹5 ಲಕ್ಷ ಸಹಾಯಧನ ನೀಡಬೇಕು. ಪ್ರಕಟಿಸಿರುವ 19 ಸೌಲಭ್ಯಗಳನ್ನು ಜಾರಿಗೆ ತರಬೇಕು' ಎಂದು ಸಮಿತಿಯ ಸಂಚಾಲಕ ಕೆ. ಮಹಾಂತೇಶ್ ಮನವಿ ಮಾಡಿದರು.

ಕಾರ್ಮಿಕ ಮುಖಂಡರಾದ ಎನ್.ಪಿ. ಸ್ವಾಮಿ, ಶಿವಣ್ಣ, ಬಿ. ಉಮೇಶ್, ವೆಂಕಟೇಶ್, ವನಜಾ ಕುಮಾರ್, ಷಣ್ಮುಗಂ, ಪ್ರಭಾಕರ್, ಎಚ್.ಟಿ. ಉಮೇಶ್, ಧನಶೇಖರ್, ಶಾಮಣ್ಣರೆಡ್ಡಿ ಮಾತನಾಡಿದರು.

ಉತ್ತರ, ದಕ್ಷಿಣ ಒಳನಾಡಿನಲ್ಲಿ ಭಾರಿ ಮಳೆ ಸುರಿಯುವ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ನೈರುತ್ಯ ಮುಂಗಾರು ಚುರುಕುಗೊಂಡಿದ್ದು, ಸೆ.21 ಮತ್ತು ಸೆ.22ರಂದು ರಾಜ್ಯದ ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೀದರ್, ಕಲಬುರ್ಗಿ, ರಾಯಚೂರು, ಯಾದಗಿರಿ, ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗುಡುಗು ಹಾಗೂ ಸಿಡಿಲು ಸಹಿತ ಭಾರಿ ಮಳೆ ಸುರಿಯುವ ಮುನ್ಸೂಚನೆ ಇದೆ ಎಂದು ಇಲಾಖೆ ಹೇಳಿದೆ.

ಕರಾವಳಿ ಜಿಲ್ಲೆಗಳಲ್ಲಿ ಪ್ರಸ್ತುತ ಮಳೆಯಾಗುವ ಯಾವ ಸೂಚನೆಯೂ ಇಲ್ಲ. ರಾಜ್ಯದ ಒಳನಾಡಿನಲ್ಲಿ ಮಾತ್ರ ಅಲ್ಲಲ್ಲಿ ಹೆಚ್ಚು ಮಳೆಯಾಗಬಹುದು ಎಂದು ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ಸೋಮವಾರ ಗರಿಷ್ಠ 7 ಸೆಂಟಿ ಮೀಟರ್ ಮಳೆ ದಾಖಲಾಗಿದೆ. ಕೆಜಿಎಫ್ 6, ಮುಳಬಾಗಿಲು 6, ಬೆಂಗಳೂರು ನಗರ, ಬೆಂಗಳೂರು ಎಚ್‌ಎಎಲ್‌ನಲ್ಲಿ ತಲಾ 3, ಕೆ.ಆರ್.ಪೇಟೆ, ಕೋಲಾರದಲ್ಲಿ ತಲಾ 2, ಬೆಂಗಳೂರು ವಿಮಾನ ನಿಲ್ದಾಣ, ಮಾಲೂರಿನಲ್ಲಿ ತಲಾ 1 ಸೆಂಟಿ ಮೀಟರ್ ಮಳೆಯಾಗಿದೆ.

ಜೀವ ಕಳೆದುಕೊಂಡ ಸುಮಾ ಸಹೋದರಿ ನೇತ್ರಾವತಿ ಹೇಳಿಕೆ

‘ಇನ್ನೊಂದು ದಿನ ಇದ್ದಿದ್ದರೆ 3 ಜೀವ ಉಳಿಯುತ್ತಿದ್ದವು’

• ಡಿ.ಕೆ.ಬಸವರಾಜು

ದಾವಣಗೆರೆ: ‘10 ದಿನಗಳಿಂದ ಜತೆಯಲ್ಲೇ ಇದ್ದೇ. ಭಾನುವಾರ ಒಂದು ದಿವಸ ಈ ಮನೆಯಲ್ಲೇ ಇದ್ದಿದ್ದರೆ ಮೂರು ಜೀವಗಳು ಉಳಿಯುತ್ತಿದ್ದವು.’

ಇಲ್ಲಿನ ಶೇಖರಪ್ಪ ನಗರದಲ್ಲಿ ಮೃತಪಟ್ಟವರ ಸುಮಾ ಅವರ ತಂಗಿ ನೇತ್ರಾವತಿ ಅವರು ನೋವಿನಿಂದ ಹೇಳಿದ ಮಾತುಗಳಿವು.


‘ನನ್ನ ಅಕ್ಕನಿಗೆ ಮಾನಸಿಕ ಸಮಸ್ಯೆ ಇತ್ತು. ಹಲವು ದಿನಗಳಿಂದ ಈ ಸಮಸ್ಯೆ ಇದ್ದು, ನಾನು ಆರೈಕೆ ಮಾಡಿದೆ. ಆದರೆ, ನನ್ನನ್ನು ಊರಿಗೆ ಕಳುಹಿಸಿದ್ದ ಕಾರಣ ಗೊತ್ತಾಗಲಿಲ್ಲ’ ಎಂದು ಕಣ್ಣಾಲಿ ತುಂಬಿಕೊಂಡರು.

ನೇತ್ರಾವತಿ ಅವರನ್ನು ಅವರ ಭಾವ ಕೃಷ್ಣ ನಾಯ್ಕ ಭಾನುವಾರ ಬೆಳಿಗ್ಗೆ ಸ್ವಂತ ಗ್ರಾಮವಾದ ಚಿತ್ರದುರ್ಗ ಜಿಲ್ಲೆಯ ಧರಮಪುರದ ಅರಬಗಟ್ಟಕ್ಕೆ ಕಳುಹಿಸಿದ್ದರು. ಅವರು ಊರಿಗೆ ಹೋದ ಬಳಿಕ ಆತ್ಮಹತ್ಯೆಗೆ ಶರಣಾಗಿದ್ದಾರೆ.

ನವೋದಯ ಶಾಲೆಯಲ್ಲಿ 2ನೇ ತರಗತಿ ಓದುತ್ತಿದ್ದ ಏಳು ವರ್ಷದ ಪುತ್ರ ಧ್ರುವನನ್ನು ನಿಟುವಳ್ಳಿಯಲ್ಲಿರುವ ಕೃಷ್ಣ ನಾಯ್ಕ ಅವರ ಅಕ್ಕನ ಮನೆಯಲ್ಲಿ ಬಿಡಲಾಗಿತ್ತು. ಭಾನುವಾರ ರಾತ್ರಿ 8.30ರ ವೇಳೆಗೆ ಆಟವಾಡುತ್ತಿದ್ದ ಮಗನನ್ನು ಶೇಖರಪ್ಪ ನಗರದ ಮನೆಗೆ ಕರೆದುಕೊಂಡು ಬರಲಾಗಿತ್ತು. ಲಾಕ್‌ಡೌನ್ ಇದ್ದುದರಿಂದ ಒಂದು ವರ್ಷದಿಂದ ನಿಟುವಳ್ಳಿಯಲ್ಲಿಯೇ ಬಿಟ್ಟಿದ್ದ ಪುತ್ರನನ್ನು ಭಾನುವಾರ ದಿಢೀರನೆ ಕರೆದುಕೊಂಡು ಬಂದಿದ್ದು ಏಕೆ ಎನ್ನುವುದು ನಿಗೂಢವಾಗಿದೆ.

ಕೆಲಸದಿಂದ ತೆಗೆದು ಹಾಕಿದ್ದರು: ‘ಆರೋಗ್ಯ ಕಾರ್ಯಾಲಯವೊಂದರಲ್ಲಿ 15 ವರ್ಷಗಳಿಂದ ಲಾರಿ ಚಾಲಕರಾಗಿದ್ದ ಕೃಷ್ಣ ನಾಯ್ಕ ಅವರು ಪತ್ನಿಯ ಆರೈಕೆಗಾಗಿ ಆಗಾಗ್ಗೆ ರಜಾ ತೆಗೆದುಕೊಳ್ಳುತ್ತಿದ್ದರು ಎಂಬ ಕಾರಣಕ್ಕೆ ಅವರನ್ನು 3 ತಿಂಗಳ ಹಿಂದೆ ಕೆಲಸದಿಂದ ತೆಗೆದುಹಾಕಲಾಗಿತ್ತು’ ಎಂದು ಮಹಾನಗರ ಪಾಲಿಕೆ ಸದಸ್ಯ ಆರ್. ಎಲ್. ಶಿವಪ್ರಕಾಶ್ ತಿಳಿಸಿದರು.

ಆರ್ಥಿಕ ಸಮಸ್ಯೆ: ‘ಆರ್ಥಿಕ ಸಮಸ್ಯೆಯಿಂದಾಗಿ ಕೃಷ್ಣ ನಾಯ್ಕ ಕಾರ್ಖಾನೆಯ ಮಾಲೀಕರ ಬಳಿ ₹2 ಲಕ್ಷ ಕೊಡಿಸುವಂತೆ ನನ್ನ ಬಳಿ ಮನವಿ ಮಾಡಿದ್ದರು. ನಾನು ಮಾಲೀಕರ ಜೊತೆ ಮಾತನಾಡಿದ್ದೆ. ಮೂರು ದಿನಗಳ ಹಿಂದೆ ₹20 ಸಾವಿರವನ್ನು ಕೊಟ್ಟಿದ್ದರು. ಅವರಿಗೆ ಹಣಕಾಸಿನ ಸಮಸ್ಯೆ ಇತ್ತು’ ಎಂದು ಶಿವಪ್ರಕಾಶ್ ಹೇಳಿದರು.


ಆತ್ಮಹತ್ಯೆಗೆ ಶರಣಾದ ಕೃಷ್ಣ ನಾಯ್ಕ, ಪುತ್ರ ಧ್ರುವ ಹಾಗೂ ಪತ್ನಿ ಸುಮಾ

ಪತ್ನಿ, ಮಗನಿಗೆ ವಿಷವುಣಿಸಿರುವ ಶಂಕೆ

ದಾವಣಗೆರೆ: ಇಲ್ಲಿನ ಶೇಖರಪ್ಪ ನಗರದಲ್ಲಿ ಪತ್ನಿ ಅನಾರೋಗ್ಯ ಕಾರಣದಿಂದ ಬೇಸತ್ತು ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಲಾರಿ ಚಾಲಕ ಕೃಷ್ಣ ನಾಯ್ಕ (44), ಪತ್ನಿ ಸುಮಾ (32) ಹಾಗೂ ಪುತ್ರ ಧ್ರುವ ನಾಯ್ಕ (7) ಮೃತಪಟ್ಟವರು.

‘ಪತ್ನಿ ಹಾಗೂ ಪುತ್ರನಿಗೆ ಊಟದಲ್ಲಿ ವಿಷ ಬೆರೆಸಿ ಕೊಂದ ಬಳಿಕ ಕೃಷ್ಣ ನಾಯ್ಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು’ ಎಂದು ಆಸ್ಪತ್ರೆಯ ನಿವಾಸಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

‘ತನಿಖೆಯ ಬಳಿಕವೇ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಪ್ರತಿಕ್ರಿಯಿಸಿದ್ದಾರೆ.

ಸುಮಾ ಅವರು ಅನಾರೋಗ್ಯದಿಂದ ಬಳಲುತ್ತಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದರೂ ಗುಣಮುಖರಾಗಿರಲಿಲ್ಲ. ಚಿಕಿತ್ಸೆ ವೆಚ್ಚ ಭರಿಸಲು ಹಣವಿಲ್ಲದೇ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಆರ್.ಎಂ.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಓದಿನ ನಡುವೆ ಗಿಟಾರ್ ಅಭ್ಯಾಸ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮಗನ ಮೇಲೆ ಯಾವ ಒತ್ತಡವನ್ನೂ ಹಾಕುತ್ತಿರಲಿಲ್ಲ. ಆತ ಓದುವುದರ ಜೊತೆಗೆ ಆಗಾಗ ಗಿಟಾರ್ ಅಭ್ಯಾಸವನ್ನೂ ಮಾಡುತ್ತಿದ್ದ’ ಎಂದು ಎಚ್.ಕೆ.ಮೇಘನ್ ಅವರ ತಂದೆ ಕೃಷ್ಣಯ್ಯ ತಿಳಿಸಿದರು.

ಇಲ್ಲಿನ ರಾಮಕೃಷ್ಣನಗರದ ನಿವಾಸಿಯಾಗಿರುವ ಕೃಷ್ಣಯ್ಯ ಕೆ.ಆರ್. ನಗರ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ಅವರ ಪತ್ನಿ ಲೀಲಾವತಿ, ನೃಪತುಂಗ ಕನ್ನಡ ಮಾಧ್ಯಮ ವಿಜ್ಞಾನ ಪಿಯು ಕಾಲೇಜಿನ ಪ್ರಾಂಶುಪಾಲೆ.

ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ಪಿಯು ವ್ಯಾಸಂಗ ಮಾಡಿದ ಮೇಘನ್ 500 ಅಂಕಗಳಿಗೆ 494 ಅಂಕ ಗಳಿಸಿದ್ದರು. ಎನ್‌ಟಿಎಸ್‌ಇ ಸ್ಕಾಲರ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ, ಕಿಶೋರ್ ವೈಜ್ಞಾನಿಕ್ ಪ್ರೋತ್ಸಾಹನ್ ಯೋಜನೆ (ಕೆವೈಪಿವೈ) ಪರೀಕ್ಷೆಯಲ್ಲಿ 29ನೇ ರ್‍ಯಾಂಕ್, ಜೆಇಇಯಲ್ಲಿ ಶೇ 99.73ರಷ್ಟು ಅಂಕ, ಅಂತರರಾಷ್ಟ್ರೀಯ ಜೀವವಿಜ್ಞಾನ ಒಲಂಪಿಯಾಡ್‌ನ ಎರಡು ಹಂತಗಳಲ್ಲಿ ಅರ್ಹತೆ ಪಡೆದಿದ್ದಾರೆ.

‘ರ್‍ಯಾಂಕ್ ಪಡೆಯುವುದಕ್ಕಿಂತಲೂ ಉತ್ತಮವಾಗಿ ಓದಬೇಕು ಎನ್ನವುದಷ್ಟೇ ಆತನ ಗುರಿಯಾಗಿತ್ತು. ಅದಕ್ಕಾಗಿ ಆತ ಪ್ರತ್ಯೇಕ ವೇಳಾಪಟ್ಟಿ ಹಾಕಿಕೊಂಡು ಸತತ ಅಭ್ಯಾಸ ಮಾಡುತ್ತಿದ್ದ. ಎರಡು ವರ್ಷದ ಮುಂಚೆಯೇ ರಸಾಯನ ವಿಜ್ಞಾನವನ್ನು ಸಂಪೂರ್ಣ ಮನವರಿಕೆ ಮಾಡಿಕೊಟ್ಟಿದ್ದೆವು’ ಎಂದು ಲೀಲಾವತಿ ಹೇಳಿದರು.



ಎಚ್‌.ಕೆ.ಮೇಘನ್‌ಗೆ ತಾಯಿ ಲೀಲಾವತಿ ಮುತ್ತು ನೀಡಿ ಸಂಭ್ರಮಿಸಿದರು

‘ಕಠಿಣ ಅಭ್ಯಾಸಕ್ಕೆ ದೊರೆತ ಫಲ’

ಮಂಗಳೂರು: ‘ರ್‍ಯಾಂಕ್ ಬರುವ ನಿರೀಕ್ಷೆ ಇತ್ತು. ಆದರೆ, ಎರಡನೇ ರ್‍ಯಾಂಕ್ ಬರಬಹುದೆಂದು ಊಹಿಸಿರಲಿಲ್ಲ’ ಎಂದು ರೀತಮ್ ಬಿ. ಪ್ರತಿಕ್ರಿಯಿಸಿದರು.

ಬಿ.ಎಸ್ಸಿ (ಕೃಷಿ)ಯಲ್ಲಿ 2ನೇ ರ್‍ಯಾಂಕ್, ನಿಸರ್ಗ ಚಿಕಿತ್ಸೆ ಮತ್ತು ಯೋಗ ವಿಜ್ಞಾನ, ಪಶು ವಿಜ್ಞಾನ ಮತ್ತು ‘ಬಿ’ ಫಾರ್ಮಾ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದಿರುವ ರೀತಮ್, ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನ ವಿದ್ಯಾರ್ಥಿ. ಅವರು ಕೋಲಾರದಲ್ಲಿ ರೇಡಿಯಾಲಜಿಸ್ಟ್ ಆಗಿರುವ ಡಾ. ಬಯ್ಯಪ್ಪ-ರೆಡ್ಡಿ ಮತ್ತು ಭಾರತಿ ದಂಪತಿ ಪುತ್ರ.

‘ಕೋವಿಡ್–19 ಕಾರಣಕ್ಕೆ ಆನ್‌ಲೈನ್ ಕೋಚಿಂಗ್ ಪಡೆಯುತ್ತಿದ್ದೆ. ಕಾಲೇಜಿನಲ್ಲಿ ನಿರಂತರವಾಗಿ ನಡೆಸುತ್ತಿದ್ದ ಅಣಕು ಪರೀಕ್ಷೆ ನೆರವಾಯಿತು. ದಿನಕ್ಕೆ 8–10 ತಾಸು ಅಭ್ಯಾಸ ಮಾಡುತ್ತಿದ್ದೆ. ನೀಟ್ ಪರೀಕ್ಷೆ ಬರೆದಿದ್ದು, ಅದರಲ್ಲೂ ಒಳ್ಳೆಯ ರ್‍ಯಾಂಕ್ ಬರುವ ನಿರೀಕ್ಷೆ ಇದೆ. ವೈದ್ಯನಾಗುವ ಆಸೆ ಇದೆ. ಸಾಧನೆ ಮಾಡಲು ಬಯಸುವವರು ಪ್ರಥಮ ಪಿಯುಸಿಯಿಂದಲೇ ಕಠಿಣ ಅಭ್ಯಾಸ ಆರಂಭಿಸಬೇಕು’ ಎಂಬು ಸಲಹೆ ನೀಡಿದರು.


ರೀತಮ್ ಬಿ

‘ಪೋಷಕರು, ಶಿಕ್ಷಕರ ಸಹಕಾರದಿಂದ ಸಾಧನೆ’

ಬೆಂಗಳೂರು: ‘ಕಾಲೇಜಿನ ಪ್ರಾಂಶುಪಾಲರು, ಶಿಕ್ಷಕರು ಹಾಗೂ ಪೋಷಕರ ಬೆಂಬಲದಿಂದ ಸಾಧನೆ ಸಾಧ್ಯವಾಗಿದೆ’ ಎಂದು ಮಾರತಹಳ್ಳಿಯ ಶ್ರೀ ಚೈತನ್ಯ ಟೆಕ್ನೊ ಶಾಲೆ ವಿದ್ಯಾರ್ಥಿ ವರುಣ್ ಆದಿತ್ಯ ಹೇಳಿದರು.

ಸಿಂಗಸಂದ್ರ ನಿವಾಸಿಯಾಗಿರುವ ವರುಣ್, ಸಾಫ್ಟ್‌ವೇರ್ ಎಂಜಿನಿಯರ್ ಶ್ರೀಧರ್ ಹಾಗೂ ಭಾವನಾ ಅವರ ಮಗ. ಅವರು ಯೋಗ ಮತ್ತು ನ್ಯಾಚುರೋಪತಿ, ಪಶುವೈದ್ಯಕೀಯ ವಿಷಯಗಳಲ್ಲಿ ದ್ವಿತೀಯ ರ್‍ಯಾಂಕ್ ಹಾಗೂ ಬಿ.ಫಾರ್ಮಾ ವಿಷಯದಲ್ಲಿ ಐದನೇ ರ್‍ಯಾಂಕ್ ಗಳಿಸಿದ್ದಾರೆ.

‘ಪ್ರತಿನಿತ್ಯ 6ರಿಂದ 8ಗಂಟೆ ಓದುತ್ತಿದ್ದೆ. ಬಿಡುವಿನ ಸಮಯದಲ್ಲಿ ಸ್ನೇಹಿತರೊಂದಿಗೆ ಕ್ರಿಕೆಟ್, ಬ್ಯಾಡ್ಮಿಂಟನ್ ಆಡುತ್ತಿದ್ದೆ. ವಾರಾಂತ್ಯದಲ್ಲಿ ಸಿನಿಮಾಗಳನ್ನೂ ವೀಕ್ಷಿಸುತ್ತಿದ್ದೆ. ಇದರಿಂದ ಒತ್ತಡ ದೂರವಾಗುತ್ತಿತ್ತು. ಕಷ್ಟ ಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಅಭ್ಯಾಸ ಮಾಡಬೇಕೆಂಬ ಸೂತ್ರ ಅನುಸರಿಸಿದ್ದೆ. ಎಂಬಿಬಿಎಸ್ ಓದುವುದು ನನ್ನ ಧ್ಯೇಯ’ ಎಂದರು.


ವರುಣ್ ಆದಿತ್ಯ

ಸಿಇಟಿ: ಮೇಘನ್ ದಾಖಲೆ

ಒಂದನೇ ಪುಟದಿಂದ

ವೈದ್ಯಕೀಯ ಕೋರ್ಸ್ ಪ್ರವೇಶ: ‘ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೀಟ್) ಫಲಿತಾಂಶ ಬಂದ ನಂತರ ಅದರ ಅಂಕಗಳ ಆಧಾರದ ಮೇಲೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಮತ್ತು ಭಾರತೀಯ ವೈದ್ಯ ಪದ್ಧತಿ ಹಾಗು ಹೋಮಿಯೋಪಥಿ ಕೋರ್ಸುಗಳ ಪ್ರವೇಶಕ್ಕೆ ಪರಿಗಣಿಸಲಾಗುವುದು.

ನ್ಯಾಷನಲ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಆರ್ಕಿಟೆಕ್ಚರ್ (ಎನ್‌ಎಟಿಎ--2021) ಪರೀಕ್ಷೆಯ ಅಂಕಗಳ ಆಧಾರದಲ್ಲಿ ಆರ್ಕಿಟೆಕ್ಚರ್ ಕೋರ್ಸುಗಳ ಪ್ರವೇಶಕ್ಕೆ ರ್‍ಯಾಂಕ್ ಪ್ರಕಟಿಸಲಾಗುವುದು’ ಎಂದೂ ಸಚಿವರು ತಿಳಿಸಿದರು.

ಈ ಲಿಂಕ್‌ನಲ್ಲಿ ಸಿಇಟಿ ಫಲಿತಾಂಶ ಲಭ್ಯವಿದೆ– http://kea.kar.nic.in ಮತ್ತು http://karresults.nic.in.

ಅಂಕಿ–ಅಂಶ

2,01,834 ಸಿಇಟಿಗೆ ನೋಂದಾಯಿಸಿದ್ದ ವಿದ್ಯಾರ್ಥಿಗಳು

1,93,447 ಹಾಜರಾದ ಒಟ್ಟು ವಿದ್ಯಾರ್ಥಿಗಳು

95,462 ವಿದ್ಯಾರ್ಥಿಗಳು

97,985 ವಿದ್ಯಾರ್ಥಿನಿಯರು

530 ಪರೀಕ್ಷೆ ನಡೆದ ಕೇಂದ್ರಗಳು

30ರಿಂದ ದಾಖಲಾತಿ ಪರಿಶೀಲನೆ

ಒಂದನೇ ಪುಟದಿಂದ

‘ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಮೂಲ ದಾಖಲಾತಿಗಳ ವಿವರ ನೀಡಲಾಗಿದೆ. ಸೌಲಭ್ಯ ಕೇಂದ್ರಗಳಲ್ಲಿ ತಂತ್ರಾಂಶದ ನೆರವಿನಿಂದ ಮೂಲಕ ದಾಖಲಾತಿಗಳನ್ನು ಪರಿಶೀಲಿಸಲಾಗುವುದು. ದಾಖಲಾತಿ ಪರಿಶೀಲನೆ ನಂತರ ನಂತರ ಕೌನ್ಸೆಲಿಂಗ್ ಮೂಲಕ ಸೀಟು ಹಂಚಿಕೆ ನಡೆಯಲಿದೆ’ ಎಂದು ಮಾಹಿತಿ ನೀಡಿದರು.

‘54 ಸಾವಿರ ಸಿಇಟಿ ಸೀಟು ಸೇರಿದಂತೆ 1.09 ಲಕ್ಷ ಸೀಟುಗಳು ಲಭ್ಯವಿದೆ. ಅದರಲ್ಲಿ ಕಾಮೆಡ್-ಕೆ, ಆಡಳಿತಮಂಡಳಿ ಕೋಟಾದ ಸೀಟುಗಳು ಸೇರಿವೆ. ಕಳೆದ ವರ್ಷ 35 ಸಾವಿರ ಎಂಜಿನಿಯರಿಂಗ್ ಸೀಟು ಮಾತ್ರ ಭರ್ತಿಯಾಗಿದ್ದು, ಸುಮಾರು 20 ಸಾವಿರ ಉಳಿದಿತ್ತು. ಈ ವರ್ಷ ಹೆಚ್ಚಿನ ಸೀಟು ಭರ್ತಿಯಾಗುವ ನಿರೀಕ್ಷೆಯಿದೆ’ ಎಂದರು.

ಅರ್ಹತೆ ಪಡೆದವರು

ವಿಭಾಗ	ವಿದ್ಯಾರ್ಥಿಗಳು
ಎಂಜಿನಿಯರಿಂಗ್	1,83,231
ನ್ಯಾಚುರೋಪಥಿ ಮತ್ತು ಯೋಗವಿಜ್ಞಾನ	1,55,910
ಪಶು ವೈದ್ಯಕೀಯ	1,52,518
ಬಿ-ಫಾರ್ಮಾ	1,86,638
ಡಿ-ಫಾರ್ಮಾ	1,86,638

ವಿಷಯವಾರು ಪರೀಕ್ಷೆ ಬರೆದವರು

ಪಿಸಿಎಂ	31,460
ಪಿಸಿಬಿ	3,836
ಪಿಸಿಎಂ-ಪಿಸಿಬಿ	1,58,151

ಪಾಕ್ ನಂಟು: ಜಿತೇಂದರ್ ಸೆರೆ

ಒಂದನೇ ಪುಟದಿಂದ

ಯುವತಿ ಸೋಗಿನಲ್ಲಿ ‘ಫೇಸ್‌ಬುಕ್’ ಸ್ನೇಹ; ‘ಬಟ್ಟೆ ವ್ಯಾಪಾರವನ್ನೇ ವೃತ್ತಿ ಮಾಡಿಕೊಂಡಿರುವ ಜಿತೇಂದರ್ ಸಿಂಗ್, ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಖಾತೆ ತೆರೆದಿದ್ದಾನೆ. ಕೆಲ ತಿಂಗಳ ಹಿಂದಷ್ಟೇ ಪಾಕ್ ಐಎಸ್‌ಐ ಅಧಿಕಾರಿಯೊಬ್ಬ, ವಿದೇಶಿ ಯುವತಿ ಹೆಸರಿನಲ್ಲಿ ‘ನೇಹಾ @ ಪೂಜಾಜಿ’ ನಕಲಿ ಖಾತೆ ತೆರೆದು ಜಿತೇಂದರ್ ಸಿಂಗ್‌ಗೆ ರಿಕ್ವೆಸ್ಟ್ ಕಳುಹಿಸಿದ್ದ. ಸುಂದರ ಯುವತಿ ನೋಡಿದ್ದ ಜಿತೇಂದರ್, ರಿಕ್ವೆಸ್ಟ್ ಸ್ವೀಕರಿಸಿದ್ದ. ನಂತರ, ಪರಸ್ಪರ ಮಾತುಕತೆ ಆರಂಭವಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಭಾರತವನ್ನು ಹೊಗಳಿದ್ದ ಯುವತಿ, ‘ಭಾರತ ಎಂದರೆ ತುಂಬಾ ಇಷ್ಟ. ಸದ್ಯದಲ್ಲೇ ನಾನು ಭಾರತಕ್ಕೆ ಬಂದು ನಿನ್ನನ್ನು ವೈಯಕ್ತಿಕವಾಗಿ ಭೇಟಿಯಾಗುತ್ತೇನೆ. ಈಗ ನಾನು, ಭಾರತೀಯ ಸೇನಾ ನೆಲೆ ಹಾಗೂ ವಾಹನಗಳನ್ನು ನೋಡಬೇಕು. ದಯವಿಟ್ಟು, ಸೇನೆ ಬಳಿ ಹೋಗಿ ಫೋಟೊ ತೆಗೆದು ಕಳುಹಿಸು’ ಎಂದು ಕೇಳಿದ್ದಳು. ಅದಕ್ಕೆ ಒಪ್ಪಿದ್ದ ಜಿತೇಂದರ್, ಸೇನಾಧಿಕಾರಿ ವೇಷ ತೊಟ್ಟು ಸೇನಾ ನೆಲೆ ಹಾಗೂ ಸೇನೆ ವಾಹನಗಳ ಫೋಟೊ ತೆಗೆದು ಫೇಸ್‌ಬುಕ್ ಮೆಸೆಂಜರ್ ಮೂಲಕ ಕಳುಹಿಸಿದ್ದ.’

‘ಪಾಕಿಸ್ತಾನದ ವ್ಯಕ್ತಿಯೊಬ್ಬರ ಜೊತೆ ಭಾರತೀಯನೊಬ್ಬ ಚಾಟಿಂಗ್ ಮಾಡಿದ್ದ ಸುಳಿವು ಸೇನೆಗೆ ಸಿಕ್ಕಿತ್ತು. ಈ ಬಗ್ಗೆ ಪರಿಶೀಲಿಸಿದಾಗ, ಆರೋಪಿಯ ಫೇಸ್‌ಬುಕ್ ಚಾಟಿಂಗ್ ಮಾಹಿತಿ ಸಿಕ್ಕಿತ್ತು. ಹಲವು ಬಾರಿ ಫೋಟೊ ರವಾನಿಸಿದ್ದೂ ಗೊತ್ತಾಗಿತ್ತು. ಆ ಸುಳಿವು ಆಧರಿಸಿಯೇ ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

6 ನೆಲೆಗಳ ಮಾಹಿತಿ ರವಾನೆ: ‘ಆರೋಪಿ ಜಿತೇಂದರ್ ಸಿಂಗ್, ದೇಶದ 6 ಸೇನಾ ನೆಲೆಗಳ ರಹಸ್ಯ ಮಾಹಿತಿಯನ್ನು ಪಾಕ್ ಐಎಸ್‌ಐಗೆ ಕಳುಹಿಸಿದ್ದಾನೆ. ಆತನ ಮೊಬೈಲ್ ಜಪ್ತಿ ಮಾಡಿ ಪರಿಶೀಲನೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ಹೇಳಿವೆ.

‘ಆರೋಪಿ ಖಾತೆಗಳಿಗೆ ವಿದೇಶಿ ವ್ಯಕ್ತಿಗಳಿಂದ ಹಣ ಸಂದಾಯವಾಗಿರುವ ದಾಖಲೆಗಳು ಸಿಕ್ಕಿವೆ. ಫೇಸ್‌ಬುಕ್‌ನಲ್ಲಿ ಯುವತಿ ಸೋಗಿನಲ್ಲಿ ಸ್ನೇಹ ಬೆಳೆಸಿದ್ದ ಪಾಕ್ ಅಧಿಕಾರಿಯೇ ಹಣ ಕೊಟ್ಟು ಆರೋಪಿ ಕಡೆಯಿಂದ ಕೆಲಸ ಮಾಡಿಸಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ಮುಂದುವರಿದಿದೆ’ ಎಂದೂ ತಿಳಿಸಿವೆ.


‘ಫೇಸ್‌ಬುಕ್‌ಗೆ ಸೇನಾಧಿಕಾರಿ ವೇಷದ ಫೋಟೊ’

‘ಸೇನಾಧಿಕಾರಿ ಆಗಬೇಕೆಂದು ಆಸೆ ಇಟ್ಟುಕೊಂಡಿದ್ದ ಜಿತೇಂದರ್ ಸಿಂಗ್, ಕೊನೆಗೆ ಬಟ್ಟೆ ವ್ಯಾಪಾರಿ ಆಗಿದ್ದ. ಬೆಂಗಳೂರಿಗೆ 2 ತಿಂಗಳ ಹಿಂದಷ್ಟೇ ಬಂದಿದ್ದ. ಇಲ್ಲಿಯ ಬೀದಿ–ಬದಿ ವ್ಯಾಪಾರಿಗಳಿಗೆ ಸಗಟು ದರದಲ್ಲಿ ಬಟ್ಟೆಗಳನ್ನು ಪೂರೈಸುತ್ತಿದ್ದ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಸೇನಾಧಿಕಾರಿ ವೇಷದಲ್ಲೇ ಫೋಟೊ ತೆಗೆಸಿಕೊಂಡಿದ್ದ ಆರೋಪಿ, ಅದನ್ನೇ ಪ್ರೊಫೈಲ್‌ನಲ್ಲಿ ಹಾಕಿ ಫೇಸ್‌ಬುಕ್ ಖಾತೆ ತೆರೆದಿದ್ದ’ ಎಂದೂ ಹೇಳಿವೆ.

24 ಭಾಷೆಗಳ ಅನುವಾದಿತ ಕೃತಿಗಳು ಪ್ರಶಸ್ತಿಗೆ ಆಯ್ಕೆ

ನಟರಾಜ ಬೂದಾಳುಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯು ಅನುವಾದಿತ ಕೃತಿಗಳಿಗೆ ನೀಡುವ 2020ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಸಂಸ್ಕೃತಿ ಚಿಂತಕ, ಸಂಶೋಧಕ ಎಸ್. ನಟರಾಜ ಬೂದಾಳು ಅವರ ‘ಸರಹಪಾದ’ ಕೃತಿ ಕನ್ನಡ ವಿಭಾಗದಿಂದ ಆಯ್ಕೆಯಾಗಿದೆ.

ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾಗಿ ನಿವೃತ್ತರಾಗಿರುವ ನಟರಾಜ ಬೂದಾಳು ಅವರು, ಬೌದ್ಧ ಪರಂಪರೆಯ ಮಹಾಸಿದ್ಧರು ಎಂದೇ ಹೆಸರಾದ ಸರಹಪಾದರ ಬರವಣಿಗೆಯನ್ನು ಈ ಕೃತಿಯಲ್ಲಿ ತಂದಿದ್ದಾರೆ. ಬೌದ್ಧದಾರ್ಶನಿಕತೆಯು ಕನ್ನಡದಲ್ಲಿ ಮರುಹುಟ್ಟು ಪಡೆಯಲು ಬೂದಾಳರು ಮಾಡಿರುವ ಸೃಜನಶೀಲ ಯತ್ನವೇ ಈ ಕೃತಿ.

ಬೌದ್ಧ ಚಿಂತನೆ–ಪರಿಕಲ್ಪನೆಗಳನ್ನು ಆಧರಿಸಿ ‘ಬುದ್ಧನಡೆ’ ಎಂಬ ಹೊರ ಪರಿಭಾಷೆಯನ್ನೇ ಕನ್ನಡಕ್ಕೆ ಕೊಟ್ಟಿರುವ ಬೂದಾಳು ಅವರು, ‘ನಾಗಾರ್ಜುನನ ಮೂಲಮಾಧ್ಯಮಕ ಕಾರಿಕಾ’, ‘ನಾಗಾರ್ಜುನ- ಅಲ್ಲಮಪ್ರಭು’ , ‘ಕನ್ನಡ ಕಾವ್ಯಮೀಮಾಂಸೆ’, ‘ಪ್ರತ್ಯೇಕ ಬುದ್ಧ ಅಲ್ಲಮಪ್ರಭು’, ‘ಹಿಂದಣ ಹೆಜ್ಜೆಯನರಿತಲ್ಲದೆ’, ‘ಮಾತಿನ ಮೊದಲು’ ಮತ್ತು ‘ಸಂಸ್ಕೃತಿ ಮೀಮಾಂಸೆ’ ಎಂಬ ಕೃತಿಗಳನ್ನು ರಚಿಸಿದ್ದಾರೆ.

ತಾವೊನ ದರ್ಶನವನ್ನು, ನಾಗಾರ್ಜುನನ ನುಡಿಗತೆಗಳನ್ನು ಹಾಗೂ ಸರಹಪಾದನ ಚರ್ಯಾಗೀತೆಗಳನ್ನು ಕನ್ನಡಕ್ಕೆ ತಂದಿರುವುದರ ಜತೆಗೆ, ಇನ್ನೂರಕ್ಕೂ ಹೆಚ್ಚಿನ ತತ್ವಪದಕಾರರ ಪದಗಳನ್ನು ಹಲವು ಸಂಪುಟಗಳಲ್ಲಿ ಸಂಪಾದಿಸಿದ್ದಾರೆ.

ಚಂದ್ರಕಾಂತ ಪೋಕಳೆ, ಲಕ್ಷ್ಮೀ ಚಂದ್ರಶೇಖರ್,ಓ .ಎಲ್. ನಾಗಭೂಷಣ ಸ್ವಾಮಿ ಅವರು ಕನ್ನಡ ವಿಭಾಗದ ಕೃತಿಗಳ ತೀರ್ಪುಗಾರರಾಗಿದ್ದರು.

ಕಂಬಾರ, ಪೈ ಕೃತಿಗಳಿಗೂ ಪ್ರಶಸ್ತಿ: ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರ ‘ಶಿಖರ ಸೂರ್ಯ’ ಕನ್ನಡ ಕೃತಿಯ ಮಲಯಾಳಂ ಅನುವಾದ ‘ಶಿಖರಸೂರ್ಯನ್’ (ಲೇಖಕ: ಸುಧಾಕರನ್ ರಾಮಂಥಲಿ) ಪ್ರಶಸ್ತಿಗೆ ಆಯ್ಕೆಯಾಗಿದೆ.

ಕನ್ನಡದ ವಿವೇಕ ಶಾನಭಾಗ ಅವರ ‘ಘಾಚಾರ್ ಘೋಚರ್’ನ ಇಂಗ್ಲಿಷ್‌ಗೆ ಅನುವಾದ (ಲೇಖಕ: ಶ್ರೀನಾಥ ಪೆರೂರ್) ಹಾಗೂ ಗೋಪಾಲಕೃಷ್ಣ ಪೈ ಅವರ ‘ಸ್ವಪ್ನ ಸಾರಸ್ವತ’ದ ಕೊಂಕಣಿ ಅನುವಾದ (ಲೇಖಕಿ: ಜಯಶ್ರೀ ಶಾನಭಾಗ್), ಶಾಂತಿನಾಥ ದೇಸಾಯಿ ಅವರ ‘ಓಂಣಮೋ’ ಕೃತಿಯ ತೆಲುಗು ಅನುವಾದ (ಲೇಖಕ: ರಂಗನಾಥ ರಾಮಚಂದ್ರರಾವ್) ಪುರಸ್ಕಾರಕ್ಕೆ ಆಯ್ಕೆಯಾದ ಕನ್ನಡ ಮೂಲದ ಇತರ ಕೃತಿಗಳಾಗಿವೆ. ಒಟ್ಟು 24 ಭಾಷೆಗಳ ಅನುವಾದಿತ ಕೃತಿಗಳು ಪ್ರಶಸ್ತಿಗೆ ಆಯ್ಕೆಯಾಗಿದ್ದು, ₹ 50,000 ನಗದು, ತಾಮ್ರಪತ್ರ ಒಳಗೊಂಡಿವೆ.




ವ್ಯರ್ಥವ್ಯಥೆ ವ್ಯರ್ಥ...

ರಘು ವಿ.

ಬದುಕಿನ ಅನೇಕ ಸಮಸ್ಯೆಗಳು ತೆರೆದುಕೊಳ್ಳುವುದು ಮನದ ಬಾಗಿಲಿನ ಮೂಲಕ. ಬಹುತೇಕ ವ್ಯಥೆ ಅಥವಾ ಚಿಂತೆಗಳು ಭ್ರಮಾತ್ಮಕವಾದವು. ಮನಸ್ಸು ಸದಾ ಭೂತ ಅಥವಾ ವರ್ತಮಾನದಲ್ಲಿ ಚಲಿಸುವುದರಿಂದ ಈ ಸಮಸ್ಯೆ. ಚಿಂತಕ, ಫ್ರೆಂಚ್ ನವೋದಯ ಕಾಲದ ತತ್ತ್ವಜ್ಞಾನಿ ಮಿಕೆಲ್ ಡು ಮೊಂಟೇನ್ ಹೇಳುತ್ತಾನೆ: ‘ನನ್ನ ಬದುಕು ಅನೇಕ ದುರ್ಘಟನೆಗಳಿಂದ ತುಂಬಿದೆ. ಆದರೆ ಇವುಗಳಲ್ಲಿ ಬಹುತೇಕವಾದವು ಘಟಿಸಲೇ ಇಲ್ಲ!’ ಈ ಮಾತುಗಳ ಹಿಂದಿರುವ ವ್ಯಂಗ್ಯವನ್ನು, ಅದು ವ್ಯಕ್ತಪಡಿಸುವ ಆಶಯವನ್ನು ಅರ್ಥಮಾಡಿಕೊಳ್ಳಬೇಕು ನಾವು. ‘ಯಾರು ಹೆದರುವರೋ ಅವರು ಸಂಕಟಪಡುತ್ತಾರೆ. ಅವರು ಅದಾಗಲೇ ಭಯದ ಕಾರಣದಿಂದ ಹೆದರಿಕೆಯ ಫಲಾನುಭವಿಗಳಾಗಿರುತ್ತಾರೆ’ ಎಂಬುವವೂ ಕೂಡ ಅವನ ಮಾತುಗಳೇ. ವ್ಯಥೆಯಿಂದ ಚಿಂತೆ. ಚಿಂತೆಯಿಂದ ಚಿತೆ.

ವರ್ತಮಾನದಲ್ಲಿ ಬದುಕುವುದೇ ಈ ಸಮಸ್ಯೆಗೆ ಪರಿಹಾರವಾದರೂ ಅದು ಸುಲಭವಲ್ಲ. ಸತತ ಪ್ರಯತ್ನದಿಂದ ಅದು ಸಿದ್ಧಿಸುವುದು. ವರ್ತಮಾನದಲ್ಲಿ ಬದುಕುವುದೆಂದರೆ ಯಾರಿಗೂ ಯಾವುದಕ್ಕೂ ಅಂಟಿಕೊಳ್ಳದೆ ಇರುವುದು. ಒಬ್ಬ ಸಾಧುವಿಗೆ ಮಹಾರಾಜನೊಬ್ಬ ವಜ್ರವೊಂದನ್ನು ದಾನಮಾಡಿದ. ಆ ಸಾಧು

> ಶತ್ರುಗಳು ಲಗ್ಗೆಯಿಕ್ಕುವುದು ದುರ್ಬಲ ಕೋಟೆಗಳಿಗೆ. ಬಲಿಷ್ಠವಾದ ದೇಹ ಮತ್ತು ದೃಢಮನಸ್ಸೇ ಚಿಂತೆಗಳಿಗೆಲ್ಲ ಪರಿಹಾರ



ಅದನ್ನು ತನ್ನ ಜೋಳಿಗೆಯಲ್ಲಿರಿಸಿಕೊಂಡು ಹೊರಟ. ಅವನ ಪಾಲಿಗೆ ಅದೊಂದು ಕಲ್ಲು ಅಷ್ಟೆ. ಮಾರ್ಗಮಧ್ಯದಲ್ಲಿ ಅವನು ಜೋಳಿಗೆಯನ್ನು ಬುಡಮೇಲು ಮಾಡಬೇಕಾದ ಸಂದರ್ಭದಲ್ಲಿ ಅದು ಕಳ್ಳನೊಬ್ಬನ ಕಣ್ಣಿಗೆ ಬಿತ್ತು. ಅವನು ಅದನ್ನು ಅಪಹರಿಸಬೇಕೆಂದು ಸಾಧುವನ್ನು ಹಿಂಬಾಲಿಸುತ್ತ ಹೊರಟ. ಜನನಿಬಿಡ ಪ್ರದೇಶ ತಲುಪಿದ ಬಳಿಕ ಸಾಧುವಿನ ಮುಂದೆ ಹಾರಿ ತನ್ನ ಕತ್ತಿಯನ್ನು ಅವನ ಕೊರಳಿಗಿಟ್ಟು ವಜ್ರವನ್ನು ತನಗೆ ನೀಡುವಂತೆ ಗದರಿಸಿದ. ಸಾಧು ಮರುಮಾತಾಡದೆ ಶಾಂತನಾಗಿಯೇ ಅದನ್ನು ತೆಗೆದು ಕಳ್ಳನ ಕೈಗಿತ್ತು ಹಾದಿಯಲ್ಲಿ ಮುಂದುವರೆದ. ಅತ್ತ ಕಳ್ಳ ಪರಮಾನಂದದಿಂದ ಹೊರಟನಾದರೂ ಅವನ ಮನಸ್ಸಿನಲ್ಲಿ ಒಂದು ಅಲೆ ಎದ್ದಿತು. ಹೀಗೆ ಅನಾಯಾಸವಾಗಿ ಕೊಟ್ಟುಬಿಡುವ ಮನಸ್ಸು ಹೇಗೆ ಬರಲು ಸಾಧ್ಯ? ಮೂರು ದಿನ ಕಳೆಯಿತು. ಕಳ್ಳ ಮತ್ತೆ ಸಾಧುವನ್ನು ಅರಸುತ್ತ ಹೊರಟ. ಅವನೆದುರು ನಿಂತ. ಸಾಧು ಕಳ್ಳನನ್ನು ಕಂಡು ಮತ್ತೇನು ಬೇಕು ಎಂದು ಪ್ರಶ್ನಿಸಿದಾಗ, ತಾನು ಪಡೆದ ವಜ್ರವನ್ನು ಅವನ ಬಳಿಯಿಟ್ಟು, ‘ಸ್ವಾಮಿ, ನನಗೇನೂ ಬೇಡ. ಆದರೆ ಇಷ್ಟು ಸಲೀಸಾಗಿ ವಸ್ತುಗಳನ್ನು ಒಪ್ಪಿಸಿ ನಿರ್ಲಿಪ್ತನಾಗಿ ನಡೆಯುವ ಮಾರ್ಗವನ್ನು ತೋರಿಸಿಬಿಡಿ, ಅಷ್ಟೇ ಸಾಕು’ ಎಂದ. ದಾಸಪರಂಪರೆಯಲ್ಲಿ ನಾವು ಕಾಣುವ ಅಥವಾ ಜಗತ್ತಿನ ಎಲ್ಲ ಭಕ್ತಿಪಂಥದವರಲ್ಲಿ ನಾವು ಕಾಣುವುದು ಇದನ್ನೇ. ನಾವೆಲ್ಲ ಕಳ್ಳರೇ; ಆದರೆ ಅಂತಹ ಸಾಧು ದೊರೆಯುವವರೆಗೆ ಕಾಯಬೇಕು. ಆ ಪರಿವರ್ತನೆಯ ಕ್ಷಣ ಬರಬೇಕು.

ಚಿಂತೆಯ ಸ್ವರೂಪವನ್ನು ಅರ್ಥ ಮಾಡಿಕೊಂಡಾಗ ಅದು ಹೇಗೆ ನಮ್ಮ ಮೇಲೆ ಪ್ರಭಾವ ಬೀರಬಹುದೆಂಬ ಸ್ಪಷ್ಟ ಅರಿವಾಗುವುದು. ಮೂಲದಲ್ಲಿ ಅದೊಂದು ಸಣ್ಣ ಹನಿಯಾಗಿ ತೊಟ್ಟಿಕ್ಕಿ ಝರಿಯಾಗಿ ಬದಲಾಗಿ ಕೊನೆಗೆ ನದಿಯಾಗಿ ನಮ್ಮನ್ನು ಕೊಚ್ಚಿಹಾಕುತ್ತದೆ. ಇದೊಂದು ರಮ್ಯಚಿತ್ರವೆನಿಸಿದರೂ ಚಿಂತಿತರಾದವರ ಪರಿಸ್ಥಿತಿ ಬಹಳ ನೋವಿನಿಂದ ಕೂಡಿರುತ್ತದೆ. ಅದು ಮನಸ್ಸಿನ, ದೇಹದ ಎಲ್ಲ ಶಕ್ತಿಯನ್ನೂ ಚೈತನ್ಯವನ್ನೂ ಹೀರಿಬಿಡುವುದು. ‘ಚಿಂತೆ ಎಂಬುದು ಮನಸ್ಸಿನೊಳಗಿನ ಭಯದ ಸಣ್ಣ ಹರಿವು. ಅದನ್ನು ಬೆಳೆಯಗೊಟ್ಟರೆ ಅದು ನಮ್ಮ ಉಳಿದೆಲ್ಲ ಆಲೋಚನೆಗಳಿಗೆ ನಾಲೆ ಕೊರೆದು, ನಿರ್ವಿಣ್ಣರನ್ನಾಗಿಸುವುದು’ ಎನ್ನುತ್ತಾನೆ, ಅಮೆರಿಕದ ಬರಹಗಾರ ಆರ್ಥರ್ ಸೊಮರ್ಸ್ ರೋಚ್. ಮನಶ್ಶಾಸ್ತ್ರಜ್ಞರು ಕೂಡ ಇದನ್ನೇ ಅನುಮೋದಿಸುತ್ತಾರೆ.

ಚಿಂತೆ ವ್ಯಾಪಿಸಿಕೊಂಡು ಅದು ಮನೋರೋಗವಾದರೂ ಆದೀತು. ಆದುದರಿಂದ ಅದನ್ನು ಸಮರ್ಥವಾಗಿ ಎದುರಿಸುವ ಉಪಾಯಗಳನ್ನು ಅರಿತಿರಬೇಕು. ಒಳ್ಳೆಯ ಸಕಾರಾತ್ಮಕ ಆಲೋಚನೆಗಳನ್ನು ಮನಸ್ಸಿನಲ್ಲಿ ಬಿತ್ತುವುದು ಇದರ ಮೊದಲ ಹೆಜ್ಜೆ. ನಾವು ನಿರೀಕ್ಷಿಸಿದ ಚಿಂತೆಯ ಅತಿ ಕೆಟ್ಟ ಫಲಿತಾಂಶ ಏನಿರಬಹುದು ಎಂದು ಆಲೋಚಿಸಿ ಅದಕ್ಕೆ ಸಿದ್ಧರಾಗಿರುವುದು ಎರಡನೆಯ ಹೆಜ್ಜೆ. ನಿರ್ಧಾರಗಳನ್ನು ತಳೆಯುವ ಕುರಿತೇ ಹೆಚ್ಚಿನ ಚಿಂತೆಗಳಿರುತ್ತವೆ. ಮತ್ತು ನಿರ್ಧಾರ ಹೊಂದಲು ಬೇಕಾದ ಪೂರ್ಣಪ್ರಮಾಣದ ಮಾಹಿತಿ ಪಡೆಯದೆ ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತೂ ಹೆಚ್ಚಿನ ಚಿಂತೆಗೆ ಕಾರಣವಾಗುವುದು. ಸಂಪೂರ್ಣ ಮಾಹಿತಿ ಕಲೆಹಾಕಿ, ಆಳವಾದ ವಿಮರ್ಶೆ ಮಾಡಿದ ಬಳಿಕ ನಿರ್ಧಾರ ಕೈಗೊಳ್ಳುವುದೇ ಇದಕ್ಕೆ ಇರುವ ಪರಿಹಾರ, ಇದು ಮೂರನೆಯ ಹೆಜ್ಜೆ. ಚಿಂತೆಗೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ ಒಂದೊಂದಾಗಿ ತಾರ್ಕಿಕವಾಗಿ ಅವುಗಳನ್ನು ಇಲ್ಲವಾಗಿಸುವುದು ನಾಲ್ಕನೆಯ ಹೆಜ್ಜೆ. ಚಿಂತೆ ನಮ್ಮ ದೈನಂದಿನ ಕೆಲಸಗಳಿಗೆ ತೊಂದರೆ ನೀಡದಂತೆ ಸಕ್ರಿಯವಾಗಿ ಸದಾ ಕೆಲಸದಲ್ಲಿ ಮುಳುಗುವುದು ಚಿಂತೆಯನ್ನು ಇಲ್ಲವಾಗಿಸುವ ಐದನೆಯ ಹೆಜ್ಜೆ. ಬದುಕು ನಾವಂದುಕೊಂಡಷ್ಟು ದೀರ್ಘವೂ ಅಲ್ಲ, ಸಂಕೀರ್ಣವೂ ಅಲ್ಲ. ಆದುದರಿಂದ ಇದ್ದುದನ್ನು ಇದ್ದಂತೆ ಸ್ವೀಕರಿಸಲು ಕಲಿಯುವುದು ಆರನೆಯ ಹೆಜ್ಜೆ. ಬದುಕು ನಾವಂದುಕೊಂಡಂತೆ ಇಲ್ಲ, ಅದನ್ನು ಹೀಗೆ ಹಾಗೆ ತಿದ್ದಬೇಕು ಎಂದು ಚಿಂತಿತರಾಗುವುದರಲ್ಲಿ ಅರ್ಥವೇ ಇಲ್ಲ. ಆದರೆ ನಮ್ಮೊಳಗಿನ ಅನಂತ ಸಾಧ್ಯತೆಯ ಪರಿಷ್ಕರಣೆ, ಅನಾವರಣಗಳತ್ತ ಮನಸ್ಸು ಓಡಿದಾಗ ಚಿಂತೆ ಇಲ್ಲವಾಗುವುದು. ಇದು ಏಳನೆಯ ಹೆಜ್ಜೆ. ತನ್ನ ಬಗೆಗಿನ ಸ್ವಾನುಕಂಪ ಅಥವಾ ಸ್ವಾನುತಾಪವೇ ಚಿಂತೆಯ ಬಳ್ಳಿ ಹರಡಲು ಆಧಾರವಾಗುವ ಚಪ್ಪರ. ಆದುದರಿಂದ ಅದನ್ನು ಕತ್ತರಿಸಿಹಾಕಿ ಆತ್ಮವಿಶ್ವಾಸದಿಂದ ನಡೆಯುವುದು ಎಂಟನೆಯ ಹೆಜ್ಜೆ. ಭಯದ ಕಾರಣದಿಂದ ಚಿಂತೆ. ಭಯಕ್ಕೆ ಕಾರಣ ಆತ್ಮವಿಶ್ವಾಸದ ಕೊರತೆ.

ಶತ್ರುಗಳು ಲಗ್ಗೆಯಿಕ್ಕುವುದು ದುರ್ಬಲ ಕೋಟೆಗಳಿಗೆ. ಬಲಿಷ್ಠವಾದ ದೇಹ ಮತ್ತು ದೃಢಮನಸ್ಸೇ ಚಿಂತೆಗಳಿಗೆಲ್ಲ ಪರಿಹಾರ. ಸ್ವಾಮಿ ವಿವೇಕಾನಂದರ ನುಡಿ ನಮಗೆ ಮಾರ್ಗದರ್ಶಕವಾಗಲಿ. ‘ಕಬ್ಬಿಣದಂತಹ ಮಾಂಸಖಂಡ, ಉಕ್ಕಿನ ನರಮಂಡಲ, ಮಿಂಚಿನಂತಹ ಮಸ್ತಿಷ್ಕ’ ನಮ್ಮ ಗುರಿಯಾಗಲಿ.

ಕೇಶದಲ್ಲಿದೆ ಆರೋಗ್ಯದ ಸೌಂದರ್ಯ

ಕೂದಲು ನಮ್ಮ ಸೌಂದರ್ಯವರ್ಧಕ ಮಾತ್ರವಲ್ಲ, ಆರೋಗ್ಯಸೂಚಕ ಕೂಡ ಹೌದು. ಕೂದಲಿನ ಆರೋಗ್ಯಕ್ಕೂ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೂ ನೇರ ಸಂಬಂಧವಿದೆ.



ಡಾ. ಪ್ರಸನ್ನ ಸಂತೇಕಡೂರು

ತಲೆಯ ಕೂದಲು ಪ್ರತಿಯೊಬ್ಬರ ಸೌಂದರ್ಯವನ್ನು ಹೆಚ್ಚಿಸುವುದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದೇ ಇರುವ ವಿಷಯ. ತಲೆಯ ಉದ್ದ ಕೂದಲು ಮಹಿಳೆಯರಿಗೆ ತಮ್ಮ ಸೌಂದರ್ಯವನ್ನು ಹೆಚ್ಚಿಸಬಹುದು. ಪುರುಷರಿಗೂ ದಟ್ಟವಾದ ತಲೆಯ ಕೂದಲು ಒಂದು ಸುಂದರ ರೂಪ ಕೊಡಬಹುದು. ಎಷ್ಟೋ ಮದುವೆಯ ಸಂಬಂಧಗಳು ಕೂಡ ತಲೆಯ ಕೂದಲಿನ ವಿಚಾರವಾಗಿ ನಿಂತು ಹೋಗಿರುವ ಸಂಭವವೂ ಇದೆ. ನೀಳವೇಣಿ, ನಾಗವೇಣಿ, ತ್ರಿವೇಣಿ, ಫಣಿವೇಣಿ – ಎಂಬ ಪದಗಳು ಸ್ತ್ರೀಯರ ಸೌಂದರ್ಯವನ್ನು ವರ್ಣಿಸುವಾಗ ಬಳಕೆಯಾದರೆ, ‘ಬೊಕ್ಕತಲೆ’, ‘ನೆರೆತ ತಲೆ’ ಎಂಬ ಪದಗಳು ಪುರುಷನ ತಲೆಯಲ್ಲಿ ಕೂದಲು ಇಲ್ಲದಿರುವುದು ಅಥವಾ ಕೂದಲು ಬಿಳಿಯಾಗಿರುವುದನ್ನು ಸೂಚಿಸಲು ಬಳಕೆಯಾಗುತ್ತಿರುತ್ತವೆ.


ಹಿಂದೆ ವೃದ್ಧಾಪ್ಯ ಹತ್ತಿರವಾಗುವ ಸಮಯದಲ್ಲಿ ಕೂದಲು ಬಿಳಿಯಾಗುವುದು ತುಂಬಾ ಸಹಜವಾಗಿತ್ತು. ವಯಸ್ಕರಲ್ಲಿ ಅಥವಾ ನಡುವಯಸ್ಸಿನವರಲ್ಲಿ ಕೂದಲು ಕಪ್ಪಾಗಿಯೇ ಇರುತಿತ್ತು. ಬೊಕ್ಕತಲೆಯವರು ಅಲ್ಲಿ ಇಲ್ಲಿ ಎಲ್ಲೋ ಒಬ್ಬರು ಇಬ್ಬರು ಅಪರೂಪಕ್ಕೆ ಕಾಣುತ್ತಿದ್ದರು. ಆದರೆ ಇತ್ತೀಚೆಗೆ ಒತ್ತಡದ ಜೀವನ ಶೈಲಿಯಿಂದ ಕೆಲವರಿಗೆ ಕೂದಲು ಚಿಕ್ಕ ವಯಸ್ಸಿಗೆ ಬಿಳಿಯಾಗುವುದು, ಉದುರುವುದು, ಬೊಕ್ಕತಲೆಯಾಗುವುದನ್ನು ಕಾಣುತ್ತಿದ್ದೇವೆ. ಈ ರೀತಿಯಾಗಲು ಕಾರಣ ಏನಿರಬಹುದು? ತಜ್ಞರನ್ನು ಕೇಳಿದರೆ ಅವರು ಕೊಡುವ ಕಾರಣಗಳು ಹಲವು. ಕೆಲವರಿಗೆ ವಂಶಪಾರಂಪರ್ಯವಾಗಿ ವಂಶವಾಹಿನಿಗಳ ಕಾರಣವಿದ್ದರೆ, ಇನ್ನು ಕೆಲವರಿಗೆ ಅನಾರೋಗ್ಯಕರ ಆಹಾರಪದ್ಧತಿಯಿಂದ ಮತ್ತು ಕೆಟ್ಟ ಜೀವನಶೈಲಿಯಿಂದ ಎಂದು ಹೇಳುತ್ತಾರೆ. ಇಲ್ಲಿ ಕೆಲವು ಪುರುಷರಿಗೆ ವಯಸ್ಸಾದಂತೆ ಆಂಡ್ರೋಜನ್ ಹಾರ್ಮೋನಿನ ಕಾರ್ಯನಿರ್ವಹಣೆಯಲ್ಲಿ ವ್ಯತಿರಿಕ್ತ ಪರಿಣಾಮಗಳಾಗುವುದರಿಂದ ಬೊಕ್ಕ ತಲೆಯಾಗುತ್ತದೆ. ಮಹಿಳೆಯರಲ್ಲೂ ಅಪರೂಪಕ್ಕೆ ಈ ಸಮಸ್ಯೆಯನ್ನು ಕಾಣಬಹುದು. ಇದು ನಿಧಾನವಾಗಿ ಸಾಗುವ ಪ್ರಕ್ರಿಯೆ.

ಇನ್ನು ಕೆಲವೊಮ್ಮೆ ಮಹಿಳೆಯರಲ್ಲಿ ಗರ್ಭಿಣಿಯರಾದಾಗ, ಹೆರಿಗೆಯ ಸಮಯದಲ್ಲಿ ಅಥವಾ ಮುಟ್ಟು ನಿಲ್ಲುವ ಕಾಲದಲ್ಲಿ ತಾತ್ಕಾಲಿಕವಾಗಿ ಕೂದಲು ಉದುರುವುದನ್ನು ಕಾಣಬಹುದು. ಇದು ಕೂಡ ಮಹಿಳೆಯರ ದೇಹದಲ್ಲಿನ ಬೇರೆ ಬೇರೆ ಹಾರ್ಮೋನುಗಳ ಕಾರಣದಿಂದ ಎಂದು ಹೇಳಬಹುದು. ಜೊತೆಗೆ ಇಂದು ವಿಶ್ವವ್ಯಾಪಿ ಸಮಸ್ಯೆಯಾಗಿರುವ ಥೈರಾಯ್ಡ್ ಹಾರ್ಮೋನಿನ ಅಸಮತೋಲನದಿಂದ ಕೂಡ ಈ ರೀತಿ ಆಗಬಹುದು. ಇನ್ನು ಕೆಲವೊಮ್ಮೆ ಚರ್ಮಕ್ಕೆ ತಗಲುವ ಹುಳುಕಡ್ಡಿ ಎಂಬ ಶಿಲೀಂಧ್ರಗಳ ಸೋಂಕಿನಿಂದ ಕೂಡ ಕೂದಲು ಉದುರಬಹುದು.

ಕೆಲವೊಮ್ಮೆ ಕ್ಯಾನ್ಸರ್, ಸಂಧಿವಾತ, ಹೃದಯಸಂಬಂಧಿ ಕಾಯಿಲೆಗಳು, ಅಧಿಕ ರಕ್ತದ ಒತ್ತಡ, ಖಿನ್ನತೆ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಸೇವಿಸುವ ಔಷಧಗಳು ದೇಹದ ಮೇಲೆ ಮಾಡುವ ವ್ಯತಿರಿಕ್ತ ಪರಿಣಾಮದಿಂದ ಕೂದಲು ಉದುರುವ ಸಂಭವ ಹೆಚ್ಚು. ಕೆಲವು ಕ್ಯಾನ್ಸರ್ ರೋಗಿಗಳ ತಲೆಗೆ ವಿಕಿರಣ ಚಿಕಿತ್ಸೆ ನೀಡಿದಾಗ ಶಾಶ್ವತವಾಗಿ ಕೂದಲು ಬೆಳೆಯದೆ ಇರಬಹುದು. ಕೆಲವೊಮ್ಮೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಭಾವನಾತ್ಮಕ ಆಘಾತವಾದಾಗ ಕೂಡ ಕೂದಲು ಉದುರುತ್ತದೆ. ಆದರೆ ಇದು ತಾತ್ಕಾಲಿಕವಾಗಿ ಮಾತ್ರ ಎಂದು ವೈದ್ಯರು ಹೇಳುತ್ತಾರೆ. ಆ ವ್ಯಕ್ತಿಗಳು ಮತ್ತೇ ಲವಲವಿಕೆಯಿಂದ ಮೊದಲಿನಂತಾದಾಗ ಕೂದಲು ಮತ್ತೆ ಚೆನ್ನಾಗಿ ಬೆಳೆಯುತ್ತದೆ.

ಹಾಗಾದರೆ, ಹಿಂದೆ ವಯೋವೃದ್ಧರಲ್ಲಿ ಕಾಣುತ್ತಿದ್ದ ನೆರೆತ ಕೂದಲುಗಳು ಇಂದು ಚಿಕ್ಕ ವಯಸ್ಸಿನವರಲ್ಲಿಯೇ ಕಾಣುತ್ತಿರುವುದು ಏಕೆ?

ನಮಗೆ ಹೆಚ್ಚು ಹೆಚ್ಚು ವಯಸ್ಸಾಗುತ್ತ ಹೋದ ಮೇಲೆ ನಮ್ಮ ಕೂದಲುಗಳ ಬೇರಿನಲ್ಲಿರುವ ಕೆಲವು ಜೀವಕೋಶಗಳು ಸತ್ತು ಹೋಗುತ್ತವೆ. ಹಿಂದೆ ಇದು ವಯೋಮಾನಕ್ಕೆ ತಕ್ಕ ಹಾಗೆ ಆಗುತ್ತಿದ್ದ ದೈಹಿಕ ಬದಲಾವಣೆ. ಈ ಜೀವಕೋಶಗಳು ನಮ್ಮ ಕೂದಲಿನ ಬಣ್ಣವನ್ನು ನಿಯಂತ್ರಿಸುವುದರಿಂದ ಮತ್ತು ಅವುಗಳು ಮೆಲನಿನ್ ಎಂಬ ವರ್ಣದ್ರವ್ಯವನ್ನು(pigment) ಸೂಸುವುದರಿಂದ ನಮ್ಮ ಕೂದಲು ಕಪ್ಪಾಗಿರುತ್ತದೆ. ಅವುಗಳು ಬಹುಬೇಗ ಸತ್ತುಹೋದರೆ ಅಥವಾ ಅವುಗಳಿಗೆ ಬೇಕಾದ ಆಹಾರ ಮತ್ತು ಆಮ್ಲಜನಕ ರಕ್ತದ ಮೂಲಕ ಸಾಗಣೆಯಾಗದಿದ್ದರೆ ಅವುಗಳು ತಮ್ಮ ಕಾರ್ಯವನ್ನು ಬೇಗನೆ ನಿಲ್ಲಿಸಿ ಕೂದಲುಗಳು ಬೆಳ್ಳಗಾಗುತ್ತವೆ. ಕೆಲವೊಮ್ಮೆ ಬ್ಯಾಕ್ಟೀರಿಯಗಳು ಮತ್ತು ಶಿಲಿಂಧ್ರಗಳ ಸೋಂಕಿನಿಂದಲೂ ಈ ಜೀವಕೋಶಗಳು ತಮ್ಮ ಕಾರ್ಯವನ್ನು ನಿಲ್ಲಿಸಬಹುದು. ಕೆಲವು ರಾಸಾಯನಿಕಗಳು ಕೂಡ ಈ ಜೀವಕೋಶಗಳ ಕಾರ್ಯವನ್ನು ನಿಲ್ಲಿಸಿ ನಮ್ಮ ಕೂದಲ ಬೆಳವಣಿಗೆಗೆ ಅಡ್ಡಿಯಾಗಬಹುದು. ಈ ರಾಸಾಯನಿಕಗಳು ನಾವು ಕೂದಲನ್ನು ಕಪ್ಪಾಗಿಸಲು ಬಳಸುವ ಹೇರ್‌ಡೈಗಳಲ್ಲೂ ಇರಬಹುದು.



ಆಧುನಿಕ ಜೀವನಶೈಲಿಯಿಂದ ಕೆಲವು ಹಾರ್ಮೋನುಗಳ, ಅದರಲ್ಲೂ ಮುಖ್ಯವಾಗಿ ಕಾರ್ಟಿಸೋಲ್ (Cortisol) ಎಂಬ ಹಾರ್ಮೋನಿನ ಕಾರ್ಯನಿರ್ವಹಣೆಯಲ್ಲಿ ವ್ಯತಿರಿಕ್ತತೆ ಉಂಟಾಗಿ ‘ಮೆಲನಿನ್’ ಎಂಬ ವರ್ಣದ್ರವ್ಯವನ್ನು ಸೂಸುವ ಜೀವಕೋಶಗಳಲ್ಲಿನ ಕೆಲವು ವಂಶವಾಹಿನಿಗಳು ಕಾರ್ಯವನ್ನು ನಿಲ್ಲಿಸಬಹುದು. ಇನ್ನು ಕೆಲವು ಸಲ ನಾವು ತಿನ್ನುವ ಆಹಾರದಲ್ಲಿ ಕೂದಲ ಬೆಳವಣಿಗೆಗೆ ಬೇಕಾಗುವ ವಿಟಮಿನ್‌ಗಳ ಅಥವಾ ಅಮೈನೊ ಆಮ್ಲಗಳ ಕೊರತೆಯಿಂದ ಕೂಡ ಕೂದಲು ಬೆಳೆಯದೆ ಇರಬಹುದು. ಈ ಎಲ್ಲಾ ಕಾರಣಗಳಿಂದ ಕೂದಲು ಬಹುಬೇಗ ಬಿಳಿಯಾಗಬಹುದು ಅಥವಾ ಉದುರಬಹುದು.

ಈ ರೀತಿ ಆಗುವುದನ್ನು ನಾವು ಹೇಗೆ ತಡೆಗಟ್ಟಬಹುದು?

ಉತ್ತಮ ಕೂದಲ ಬೆಳವಣಿಗೆಗೆ ಕೆಲವು ಸಲಹೆಗಳು:

- ಉತ್ತಮ ಸಮತೋಲನ ಆಹಾರ.
- ಉತ್ತಮ ಜೀವನಶೈಲಿ.
- ಸಮಯಕ್ಕೆ ಸರಿಯಾಗಿ ನಿದ್ರೆ ಮಾಡಿ ಸಮಯಕ್ಕೆ ಸರಿಯಾಗಿ ಏಳುವುದು.
- ಒತ್ತಡವನ್ನು ನಿಯಂತ್ರಿಸಿಕೊಳ್ಳಲು ಧ್ಯಾನ, ಯೋಗ, ವಾಯುವಿಹಾರ, ಸೂರ್ಯನಮಸ್ಕಾರಗಳನ್ನು ಮಾಡುವುದು.
- ಕೂದಲನ್ನು ಬಾಚುವಾಗ ನಿಧಾನವಾಗಿ ಮೆತ್ತಗೆ ಬಾಚುವುದು.
- ಧೂಮಪಾನ ಮತ್ತು ಮದ್ಯಪಾನವನ್ನು ಮಾಡದಿರುವುದು.
- ತಲೆಯನ್ನು ಸದಾ ಶುಚಿಯಾಗಿಟ್ಟುಕೊಳ್ಳುವುದು.
- ನೆತ್ತಿಯ ಮಾಲೀಷು.
- ನೀರನ್ನು ಹೆಚ್ಚು ಕುಡಿಯುವುದು.


ಬೆನ್ನುನೋವೇ? ವಿಟಮಿನ್ ‘ಡಿ’ ಕೊರತೆ ಇರಬಹುದು

ಡಾ. ವಿನಯ ಶ್ರೀನಿವಾಸ್

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಎಲ್ಲ ಕೆಲಸಗಳನ್ನೂ ಮನೆಯಿಂದಲೇ ಮಾಡುವುದು ಸುಲಭಸಾಧ್ಯವಾಗಿದೆ. ಮೊದಲಿನಂತೆ ಅಗತ್ಯ ಸಾಮಾನು-ಸರಂಜಾಮುಗಳನ್ನು ತರಲು ಅಂಗಡಿಗಳಿಗೇ ಹೋಗಬೇಕೆಂದೇನಿಲ್ಲ, ಮನೆಯಿಂದಲೇ ಆನ್‌ಲೈನ್‌ನಲ್ಲಿ ಆದೇಶ ಮಾಡಿದರೆ ಸರಿ, ವಸ್ತುಗಳು ಮನೆಯನ್ನು ತಲುಪುತ್ತವೆ. ವಿದ್ಯುಚ್ಛಕ್ತಿ, ದೂರವಾಣಿ ಮೊದಲಾದುವುಗಳ ಹಣ ಪಾವತಿಸುವುದೂ ಮನೆಯಿಂದಲೇ ಸಾಧ್ಯವಾಗಿದೆ. ಹಣವನ್ನು ತರಲು ಬ್ಯಾಂಕಿಗೇ ಹೋಗಬೇಕಾಗಿಲ್ಲ; ಮೊಬೈಲ್‌ನಲ್ಲಿ ಲಭ್ಯವಿರುವ ವಿವಿಧ ಆ್ಯಪ್‌ಗಳ ಮೂಲಕ ಹಣಕಾಸಿನ ವ್ಯವಹಾರವೂ ಮನೆಯಿಂದ ಹೊರಗೆ ಕಾಲಿಡದೆಯೇ ಸಲೀಸಾಗಿದೆ. ಹಿಂದಿನ ದಿನಗಳಂತೆ ಸಿನಿಮಾ ನೋಡಲೂ ಥಿಯೇಟರ್‌ಗಳತ್ತ ಹೆಜ್ಜೆ ಹಾಕಬೇಕಾಗಿಲ್ಲ. ಮನೆಯಲ್ಲಿಯೇ ಅಂತರ್ಜಾಲದ ನೆರವಿನಿಂದ ಮೊಬೈಲ್, ಟ್ಯಾಬ್ ಅಥವಾ ಟಿವಿಯಲ್ಲಿ ನಾವು ಇಷ್ಟ ಪಡುವ ಸಿನಿಮಾ ನೋಡುವ ಖುಷಿಯಲ್ಲಿ ನಾವಿದ್ದೇವೆ.

ನೆನಪಿಡಿ
ಡಿ ಜೀವಸತ್ವದ ಕೊರತೆಯು ಮಕ್ಕಳಲ್ಲಿ ರಿಕೆಟ್ಸ್ ಮತ್ತು ದೊಡ್ಡವರಲ್ಲಿ ಮೂಳೆಗಳು ಮೆದುವಾಗುವ ಆಸ್ಟಿಯೋಮಲೆಸಿಯಾ ಎಂಬ ಕಾಯಿಲೆಗೆ ಕಾರಣವಾಗಬಹುದು.

ಇದೀಗ ಕೋವಿಡ್‌ನಿಂದಾಗಿ ಬಹುತೇಕ ಎಲ್ಲಾ ಕ್ಷೇತ್ರದವರೂ ಆಫೀಸ್ ಕೆಲಸಗಳನ್ನು ಮನೆಯಿಂದಲೇ ಮಾಡಲು ಶುರು ಮಾಡಿ ವರ್ಷಗಳೇ ಕಳೆದಿವೆ. ಶಾಲಾಕಾಲೇಜುಗಳೂ ಸುಮಾರು ಒಂದೂವರೆ ವರ್ಷಗಳ ಕಾಲ ಆನ್‌ಲೈನ್‌ನ ಮೂಲಕ ಮನೆಯಲ್ಲಿಯೇ ನಡೆದಿದೆ. ಒಟ್ಟಾರೆ, ಬರುಬರುತ್ತಾ ವ್ಯಕ್ತಿ ಮನೆಯಿಂದ ಹೊರ ಹೋಗುವುದು ಮತ್ತು ಸೂರ್ಯನ ಬಿಸಿಲಿಗೆ ದೇಹವನ್ನು ಒಡ್ಡುವುದು ಕಡಿಮೆಯಾಗುತ್ತಿದೆ. ಇನ್ನು ಕೆಲವರಂತೂ ಸೂರ್ಯನ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಸನ್‌ಸ್ಕ್ರೀನ್ ಔಷಧಗಳನ್ನು ಮುಖ-ಕೈ-ಕಾಲುಗಳಿಗೆ ಲೇಪಿಸಿಕೊಂಡೇ ಹೊರಗೆ ಕಾಲಿಡುತ್ತಾರೆ. ಇದೆಲ್ಲದರ ಪರಿಣಾಮವಾಗಿ ಇತ್ತೀಚಿನ ದಿನಗಳಲ್ಲಿ ‘ಡಿ’ ಜೀವಸತ್ವದ ಕೊರತೆಯು ಜನಸಾಮಾನ್ಯರನ್ನು ಹೆಚ್ಚು ಹೆಚ್ಚು ಬಾಧಿಸುತ್ತಿದೆ.



> ‘ಡಿ’ ಜೀವಸತ್ವವು ನಮ್ಮ ಶರೀರದ ಚರ್ಮದಲ್ಲಿಯೇ ತಯಾರಾಗುವಂತಹದ್ದು. ಆದರೆ ಅದಕ್ಕೆ ಸೂರ್ಯನ ಕಿರಣಗಳು ಅತ್ಯಗತ್ಯ.

ವಿಟಮಿನ್ ಅಥವಾ ಜೀವಸತ್ವಗಳು ಶರೀರದ ವಿವಿಧ ಚಯಾಪಚಯ ಕ್ರಿಯೆಗಳಿಗೆ ಅತ್ಯಗತ್ಯ. ತರಕಾರಿ, ಹಣ್ಣು, ಬೇಳೆಕಾಳುಗಳ ಸೇವನೆಯಿಂದ ದೇಹಕ್ಕೆ ಇತರ ಜೀವಸತ್ವಗಳು ದೊರಕುತ್ತವೆ. ಆದರೆ, ಡಿ ಜೀವಸತ್ವವು ನಮ್ಮ ಶರೀರದ ಚರ್ಮದಲ್ಲಿಯೇ ತಯಾರಾಗುವಂತಹದ್ದು. ಆದರೆ ಅದಕ್ಕೆ ಸೂರ್ಯನ ಕಿರಣಗಳು ಅತ್ಯಗತ್ಯ. ಸೂರ್ಯನ ರಶ್ಮಿಯಲ್ಲಿರುವ ‘ಬಿ’ ಬಗೆಯ ಅತಿ ನೇರಳೆಕಿರಣಗಳು ಚರ್ಮದ ಮೇಲೆ ಬಿದ್ದಾಗ, ಚರ್ಮದ ಜೀವಕೋಶಗಳಲ್ಲಿನ 7- ಡಿ ಹೈಡ್ರೋ ಕೊಲೆಸ್ಟೆರಾಲ್ ಎಂಬ ವಸ್ತುವು ‘ಡಿ’ ಜೀವಸತ್ವವಾಗಿ ಪರಿವರ್ತನೆಗೊಳ್ಳುತ್ತದೆ. ನಂತರ ರಕ್ತದ ಮೂಲಕ ಯಕೃತ್ತು ಮತ್ತು ಮೂತ್ರಪಿಂಡಗಳಲ್ಲಿ ಪುನಃ ಮಾರ್ಪಾಡಾಗಿ ತನ್ನ ಕಾರ್ಯಕ್ಷಮತೆಯನ್ನು ತೋರುತ್ತದೆ. ಆದ್ದರಿಂದಲೇ, ನಾವು ಸೂರ್ಯನ ಬಿಸಿಲಿಗೆ ತೆರಳದಿದ್ದರೆ ಡಿ ಜೀವಸತ್ವದ ತಯಾರಿಕೆಯಲ್ಲಿ ತೊಡಕುಂಟಾಗುತ್ತದೆ.

ಡಿ ಜೀವಸತ್ವವು ನಮ್ಮ ಶರೀರದ ಹಲವಾರು ಕ್ರಿಯೆಗಳಿಗೆ ಅತ್ಯಗತ್ಯ. ಅವೆಂದರೆ:

- ಶರೀರದಲ್ಲಿ ಕ್ಯಾಲ್ಸಿಯಂ ಮತ್ತು ರಂಜಕದ ಮಟ್ಟವನ್ನು ಸಾಮಾನ್ಯ ಮಿತಿಯಲ್ಲಿಡಲು ಮತ್ತು ಆ ಮೂಲಕ ಮೂಳೆ-ಸ್ನಾಯು ಮತ್ತು ಹಲ್ಲುಗಳ ಆರೋಗ್ಯವನ್ನು ಕಾಪಾಡಲು.
- ಕರುಳುಗಳಲ್ಲಿ ಕ್ಯಾಲ್ಸಿಯಂ, ಮೆಗ್ನೀಷಿಯಂ ಮತ್ತು ರಂಜಕದ ಹೀರಿಕೊಳ್ಳುವಿಕೆಯಲ್ಲಿ.
- ದೇಹದ ರೋಗನಿರೋಧಕ ವ್ಯವಸ್ಥೆಯನ್ನು ಸದೃಢಗೊಳಿಸಲು.
- ಮೆದುಳು ಮತ್ತು ನರವ್ಯೂಹ ವ್ಯವಸ್ಥೆಯನ್ನು ರಕ್ಷಿಸಲು.
- ಶರೀರದ ಇನ್‌ಸುಲಿನ್ ಮಟ್ಟವನ್ನು ನಿಯಂತ್ರಿಸಲು.
- ಹೃದಯ ಮತ್ತು ಶ್ವಾಸಕೋಶಗಳ ಕಾರ್ಯಕ್ಷಮತೆಗೆ.
- ಮಧುಮೇಹದ ಪರಿಣಾಮಕಾರಿ ನಿರ್ವಹಣೆಗೆ.
- ಕೆಲವು ಬಗೆಯ ಕ್ಯಾನ್ಸರ್ (ದೊಡ್ಡ ಕರುಳು, ಸ್ತನ, ಮೇದೋಜೀರಕ ಗ್ರಂಥಿ, ಪ್ರೋಸ್ಟೇಟ್...) ತಡೆಗಟ್ಟಲು.

ಕೊರತೆಯಾದಾಗ ಕಂಡುಬರುವ ಲಕ್ಷಣಗಳೇನು?

- ಪದೇ ಪದೇ ಸೋಂಕಿಗೆ ಪೀಡಿತರಾಗುವುದು.
- ನಿಶ್ಶಕ್ತಿ, ಆಯಾಸ, ಬಳಲಿಕೆ.
- ಮೂಳೆಗಳಲ್ಲಿ ನೋವು, ಬೆನ್ನುನೋವು
- ಗಾಯಗಳ ವಾಸಿಯಾಗುವಿಕೆಯಲ್ಲಿ ತೊಡಕು
- ಕೂದಲು ಉದುರುವಿಕೆ
- ಖಿನ್ನತೆಯ ಮನಃಸ್ಥಿತಿ
- ಶರೀರ–ಮನಸ್ಸುಗಳಲ್ಲಿ ಲವಲವಿಕೆ ಇಲ್ಲದಿರುವುದು
- ಗರ್ಭಿಣಿಯರಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಅವಧಿಪೂರ್ವ ಮಗುವಿನ ಜನನ, ಯೋನಿಯ ಉರಿಯೂತ.
- ಮಕ್ಕಳಲ್ಲಿ ರಕ್ತದೊತ್ತಡ ಹೆಚ್ಚಾಗಬಹುದು. ಅಲರ್ಜಿಗೆ ತುತ್ತಾಗುವ ಅಪಾಯ ಹೆಚ್ಚಾಗಬಹುದು.
- ಸ್ನಾಯುಗಳಲ್ಲಿ ನೋವು.

ಯಾರಲ್ಲಿ ಹೆಚ್ಚು?

- ಸೂರ್ಯನ ಬಿಸಿಲಿಗೆ ದೇಹವನ್ನು ಹೆಚ್ಚಾಗಿ ಒಡ್ಡದಿರುವವರಲ್ಲಿ.
- ಮನೆಯಿಂದ ಹೊರ ಹೋಗುವಾಗ ಸನ್‌ಸ್ಕ್ರೀನ್ ಔಷಧಗಳನ್ನು ಅತಿಯಾಗಿ ಬಳಸುವವರಲ್ಲಿ.
- ಮನೆಯಿಂದ ಹೊರಹೋದಾಗ ದೇಹವನ್ನು ಪೂರ್ತಿಯಾಗಿ ಬಟ್ಟೆಯಿಂದ ಮುಚ್ಚಿಕೊಂಡಿರುವವರಲ್ಲಿ.
- ಎದೆ ಹಾಲುಣಿಸುವ ತಾಯಂದಿರಲ್ಲಿ.
- ಗಾಢ ಬಣ್ಣದ ಚರ್ಮವನ್ನು ಹೊಂದಿರುವವಲ್ಲಿ (ಮೆಲನೋಸೈಟ್ ಜೀವಕೋಶಗಳು ಡಿ ಜೀವಸತ್ವ ತಯಾರಿಕೆಯಲ್ಲಿ ತಡೆಯೊಡ್ಡುವುದರಿಂದ).

ಡಿ ಜೀವಸತ್ವದ ಕೊರತೆಯಿಂದ ಪಾರಾಗಲು ಹೀಗೆ ಮಾಡಿ:

- ಡಿ ಜೀವಸತ್ವದ ತಯಾರಿಕೆಗೆ ಬೆಳಗಿನ ಹನ್ನೊಂದು ಗಂಟೆಯಿಂದ ಮೂರು ಗಂಟೆಯವರೆಗಿನ ಬಿಸಿಲು ಸೂಕ್ತ. ಈ ಸಮಯದಲ್ಲಿ ಸುಮಾರು ಐದರಿಂದ ಹತ್ತು ನಿಮಿಷಗಳವರೆಗೆ ಸೂರ್ಯನ ಬಿಸಿಲನಲ್ಲಿ ಅಡ್ಡಾಡಿ. ವಾರದಲ್ಲಿ ಕನಿಷ್ಠ ಮೂರರಿಂದ ನಾಲ್ಕು ಬಾರಿಯಾದರೂ ಹೀಗೆ ಮಾಡಿ.
- ಡಿ ಜೀವಸತ್ವವನ್ನು ಹೊಂದಿರುವ ಆಹಾರ ಪದಾರ್ಥಗಳಾದ ಮೊಟ್ಟೆ, ಹಾಲು, ಮೊಸರು ಮತ್ತು ಇತರ ಹಾಲಿನ ಉತ್ಪನ್ನಗಳು, ಮೀನು, ಕೆಲವು ಬಗೆಯ ಅಣಬೆಗಳನ್ನು ಆಹಾರದಲ್ಲಿ ಯಥೇಚ್ಛವಾಗಿ ಬಳಸಿ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 62

841. ದೊಡ್ಡರಂಗೇಗೌಡ ಅವರ ಕಾವ್ಯನಾಮ ಏನು?
ಎ) ತನುಜ ಬಿ) ಅನುಜ
ಸಿ) ಮನುಜ ಡಿ) ದೊರೆ

842. ಕನ್ನಡದ ಮೊದಲ ರಾಷ್ಟ್ರಕವಿ ಯಾರು?
ಎ) ಕುವೆಂಪು
ಬಿ) ಮಂಜೇಶ್ವರ ಗೋವಿಂದ ಪೈ
ಸಿ) ಭೈರಪ್ಪ
ಡಿ) ದ.ರಾ. ಬೇಂದ್ರೆ

843. ಕರ್ನಾಟಕಕ್ಕೆ ಕಾಫಿ ಬೀಜ ತಂದವರು ಯಾರು?
ಎ) ಬಾಬಾ ಬುಡನ್
ಬಿ) ಟಿಪ್ಪು ಸುಲ್ತಾನ್
ಸಿ) ಅಬ್ದುಲ್ ರಜಾಕ್
ಡಿ) ಹು ಯೆನ್ ತ್ಸಾಂಗ್

844. ಸಂಸತ್ತಿನಲ್ಲಿ ಮೊದಲು ಕನ್ನಡ ಮಾತನಾಡಿದ ಕರ್ನಾಟಕದ ಸಂಸದ ಯಾರು?
ಎ) ಮಲ್ಲಿಕಾರ್ಜುನ ಖರ್ಗೆ
ಬಿ) ಜೆ.ಎಚ್. ಪಟೇಲ್
ಸಿ) ಸುರೇಶ ಅಂಗಡಿ
ಡಿ) ಸುಮಲತಾ ಅಂಬರೀಷ್

845. ಕರ್ನಾಟಕದ ಮೊದಲ ಉಪ ಮುಖ್ಯಮಂತ್ರಿ ಯಾರು?
ಎ) ಸಿದ್ದರಾಮಯ್ಯ
ಬಿ) ಯಡಿಯೂರಪ್ಪ
ಸಿ) ಧರ್ಮಸಿಂಗ್
ಡಿ) ಎಸ್.ಎಂ. ಕೃಷ್ಣ

846. ‘The Most Incredible Olympic Stories’ ಕೃತಿಯ ಲೇಖಕರು ಯಾರು?
ಎ) ಮಾಯಾ ಜಸಾನಾಫ್
ಬಿ) ಡಾಮನ್ ಗಾಲ್ಗಟ್
ಸಿ) ಸಂಜೀವ್ ಸಹೋಟಾ
ಡಿ) ಲೂಸಿಯಾನೊ ವೆರ್ನಿಕೆ

847. ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ನಾಮನಿರ್ದೇಶನಗೊಂಡ ಮೊದಲ ಮುಸ್ಲಿಂ ಯಾರು?
ಎ) ಇಲ್ಹಾನ್ ಒಮರ್
ಬಿ) ರಶಾದ್ ಹುಸೇನ್
ಸಿ) ಅಬು ಅಮ್ಮರ್ ಯಾಸಿರ್ ಖಾದಿ
ಡಿ) ರಶೀದಾ ತಲೈಬ್

848. ಮಿಶ್ರಿತ 4x100 ಮೀ ಮೆಡ್ಲೆ ರಿಲೇನಲ್ಲಿ ವಿಶ್ವ ದಾಖಲೆ ಹೊಂದಿರುವ ದೇಶ ಯಾವುದು?
ಎ) ಭಾರತ ಬಿ) ಬ್ರಿಟನ್
ಸಿ) ಅಮೆರಿಕ ಡಿ) ಚೀನಾ

849. ಹತ್ತಿ, ಮೆಣಸಿನಕಾಯಿ, ಜೋಳ ಇವುಗಳನ್ನು ಹೆಚ್ಚಾಗಿ ಯಾವ ಮಣ್ಣಿನಲ್ಲಿ ಬೆಳೆಯಲಾಗುತ್ತದೆ?
ಎ) ಕಪ್ಪುಮಣ್ಣು
ಬಿ) ಜಂಬಿಟ್ಟಿಗೆ ಮಣ್ಣು
ಸಿ) ಮೆಕ್ಕಲು ಮಣ್ಣು
ಡಿ) ಕೆಂಪುಮಣ್ಣು

850. ಚಿತ್ರದುರ್ಗ ಇಂಗಳರಾಯ ಪ್ರದೇಶದಲ್ಲಿ ಪ್ರಮುಖವಾಗಿ ಯಾವ ನಿಕ್ಷೇಪ ದೊರೆಯುತ್ತದೆ.
ಎ) ತಾಮ್ರ ಬಿ) ಕಬ್ಬಿಣ
ಸಿ) ಬಾಕ್ಸೈಟ್ ಡಿ) ಮ್ಯಾಂಗನೀಸ್

851. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳುವ ಅರ್ಹತೆ ಪಡೆಯಲು ಒಬ್ಬ ವ್ಯಕ್ತಿಯು ಹೈಕೋರ್ಟ್‌ನಲ್ಲಿ ಎಷ್ಟು ಕಾಲ ಸೇವೆ ಸಲ್ಲಿಸಬೇಕು?
ಎ) 10 ವರ್ಷ ಬಿ) 12 ವರ್ಷ
ಸಿ) 15 ವರ್ಷ ಡಿ) 20 ವರ್ಷ

852. ಅಸ್ಪೃಶ್ಯತೆಯ ಕುರಿತು ಹೇಳುವ ಮೂಲಭೂತ ಹಕ್ಕು ಯಾವುದು?
ಎ) ಸ್ವಾತಂತ್ರ್ಯದ ಹಕ್ಕು
ಬಿ) ಸಮಾನತೆಯ ಹಕ್ಕು
ಸಿ) ಶೋಷಣೆಯ ವಿರುದ್ಧದ ಹಕ್ಕು
ಡಿ) ಮೇಲಿನ ಯಾವುದೂ ಅಲ್ಲ

853. ಭಾರತದ ಸಂವಿಧಾನದ ಪೋಷಕ ಯಾರು?
ಎ) ಭಾರತದ ಪ್ರಧಾನ ಮಂತ್ರಿ
ಬಿ) ರಾಜ್ಯ ನಿರ್ದೇಶಕ ತತ್ವಗಳು
ಸಿ) ಲೋಕಸಭೆ
ಡಿ) ಭಾರತದ ಸರ್ವೋಚ್ಚ ನ್ಯಾಯಾಲಯ

854. ಭಾರತದ ಸಂವಿಧಾನದಲ್ಲಿ ಯಾವ ಉದ್ದೇಶಕ್ಕಾಗಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿದೆ?
ಎ) ರಾಜಕೀಯ ಪ್ರಜಾಪ್ರಭುತ್ವ
ಬಿ) ಸಾಮಾಜಿಕ ಪ್ರಜಾಪ್ರಭುತ್ವ
ಸಿ) ಗಾಂಧಿವಾದದ ಪ್ರಜಾಪ್ರಭುತ್ವ
ಡಿ) ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವ

855. ಕೆಳಕಂಡ ಯಾವ ವಿಧಿ ಪ್ರಾಥಮಿಕ ಶಿಕ್ಷಣವನ್ನು ಮಾತೃ ಭಾಷೆಯಲ್ಲಿ ನೀಡುವುದರ ಕುರಿತು ಇದೆ?
ಎ) ವಿಧಿ-349 ಬಿ) ವಿಧಿ-350
ಸಿ) ವಿಧಿ 350-ಎ ಡಿ) ವಿಧಿ-351

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 61ರ ಉತ್ತರಗಳು: 831. ಸಿ, 832. ಸಿ, 833. ಬಿ, 834. ಡಿ, 835. ಬಿ, 836. ಸಿ, 837. ಎ, 838. ಎ, 839. ಬಿ, 840. ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಮನುಷ್ಯನ ಜೀವನವೆಲ್ಲಾ ಒಂದು ಕುಸ್ತಿಯಲ್ಲದೆ ಮತ್ತೇನು?
-ಬೀಚಿ

ಪಠ್ಯಪುಸ್ತಕ ಪರಿಶೀಲನೆ ಕಸರತ್ತು ಓಲೈಕೆಯ ರಾಜಕಾರಣ ಸಲ್ಲದು

ಸಾರ್ವಜನಿಕ ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳ ಪರಿಶೀಲನೆಗೆ ಹೊಸ ಸಮಿತಿ ರಚಿಸಿರುವ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ನಡೆ, ಶೈಕ್ಷಣಿಕ ವಲಯದಲ್ಲಿ ಹಲವು ಅನುಮಾನಗಳಿಗೆ ಕಾರಣವಾಗಿದೆ. ಪಠ್ಯದಲ್ಲಿ ಪಕ್ಷದ ಅಜೆಂಡಾ ತುರುಕುವ ಯತ್ನ ನಡೆಯಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಪಠ್ಯ ಪುಸ್ತಕಗಳ ಪರಿಷ್ಕರಣೆ ನಿರಂತರ ಪ್ರಕ್ರಿಯೆ ಎನ್ನುವುದು ನಿಜ. ಆದರೆ, ವಿಷಯ ತಜ್ಞರು ಮಾಡಬೇಕಾದ ಕೆಲಸವನ್ನು ಹಿಂದುತ್ವ ವಿಚಾರಧಾರೆಯ ಪ್ರಬಲ ಪ್ರತಿಪಾದಕರಿಗೆ ವಹಿಸಲಾಗಿದೆ. ಇದರಿಂದಾಗಿ ಪರಿಷ್ಕರಣೆಯ ಹಿಂದಿನ ಉದ್ದೇಶದ ಬಗ್ಗೆ ಪ್ರಶ್ನೆಗಳು ಮೂಡಿವೆ. 1ರಿಂದ 10ನೇ ತರಗತಿಯ ವರೆಗಿನ ಸಮಾಜ ವಿಜ್ಞಾನ, ಪರಿಸರ ವಿಜ್ಞಾನ ಮತ್ತು ಭಾಷಾ ವಿಷಯಗಳ ಪಠ್ಯಗಳಲ್ಲಿ ಇರಬಹುದಾದ ಕೆಲವು ಆಕ್ಷೇಪಗಳ ಪರಿಶೀಲನೆಗಾಗಿ ಸಮಿತಿಯನ್ನು ಸರ್ಕಾರ ರಚಿಸಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ಹಿಂದುತ್ವ ವಿಚಾರಧಾರೆಯ ಪ್ರಬಲ ಪ್ರತಿಪಾದಕ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸಿರುವ ಬಗ್ಗೆ ಶೈಕ್ಷಣಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಮಾಹಿತಿ ದೋಷಗಳು ಇದ್ದಲ್ಲಿ ಅವುಗಳನ್ನು ಸರಿಪಡಿಸುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಕಾಲದ ಅಗತ್ಯಕ್ಕೆ ತಕ್ಕಂತೆ ಹೊಸ ಪಠ್ಯಗಳ ಸೇರ್ಪಡೆಯೂ ಅಪೇಕ್ಷಣೀಯ. ಆಕ್ಷೇಪಗಳು ಕೇಳಿಬಂದಾಗ ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಸರಿಪಡಿಸುವುದಕ್ಕೂ ಅವಕಾಶವಿದೆ. ಆದರೆ, ಪಠ್ಯಗಳನ್ನು ಪರಿಷ್ಕರಿಸುವ ಕೆಲಸವನ್ನು ವಿಷಯ ತಜ್ಞರು ಮಾಡಬೇಕೇ ಹೊರತು, ಧರ್ಮ ಮತ್ತು ರಾಜಕಾರಣದ ಹೆಸರಿನಲ್ಲಿ ಸಂಘರ್ಷಕ್ಕೆ ಇಳಿದವರಲ್ಲ.



> ಇತಿಹಾಸವನ್ನು ತಿರುಚುವ ಪ್ರಯತ್ನ ನಡೆದಲ್ಲಿ ಅದನ್ನು ಶಿಕ್ಷಣ ಕ್ಷೇತ್ರದ ತಜ್ಞರು ದೃಢವಾಗಿ ವಿರೋಧಿಸಬೇಕು

ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ 172 ಸದಸ್ಯರನ್ನೊಳಗೊಂಡ 27 ವಿಷಯವಾರು ಸಮಿತಿಗಳ ಶಿಫಾರಸಿನ ಮೇರೆಗೆ 2017ರಲ್ಲಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗಿತ್ತು. ನೂರಾರು ಪುಟಗಳ ಆಕ್ಷೇಪಗಳನ್ನು ಪರಿಶೀಲಿಸಿದ್ದ ಸಮಿತಿ, ಪಠ್ಯಪುಸ್ತಕಗಳನ್ನು ವೈಜ್ಞಾನಿಕ ನೆಲೆಗಟ್ಟಿನೊಂದಿಗೆ ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯದ ಹಿನ್ನೆಲೆಯಲ್ಲಿ ರಚಿಸಲು ಪ್ರಯತ್ನಿಸಿತ್ತು. 35 ಸಂಘ–ಸಂಸ್ಥೆಗಳ ಜೊತೆ ಮಾತುಕತೆ ನಡೆಸಿ, ಪಠ್ಯಗಳನ್ನು ಅಂತಿಮಗೊಳಿಸಿತ್ತು. ಪಠ್ಯಗಳ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಶಿಕ್ಷಕರೂ ಭಾಗಿಯಾಗಿದ್ದರು. ಪ್ರಜಾಸತ್ತಾತ್ಮಕ ನೆಲೆಯಲ್ಲಿ ರೂಪುಗೊಂಡ ಪಠ್ಯಗಳಲ್ಲಿ ತೊಡಕು ಕಂಡುಬಂದಲ್ಲಿ ಅದನ್ನು ಪರಿಷ್ಕರಿಸುವುದಕ್ಕಾಗಿ ವಿಷಯತಜ್ಞರ ಸಮಿತಿಯನ್ನು ರಚಿಸುವುದು ಸರ್ಕಾರದ ಜವಾಬ್ದಾರಿ. ಆದರೆ, ಅದು ಯಾವುದೇ ಪಕ್ಷದ ಕಾರ್ಯಸೂಚಿ ಜಾರಿಗೆ ಅನುವು ಮಾಡಿಕೊಡುವ ಯತ್ನದಂತೆ ಕಾಣಬಾರದು. ಸರ್ಕಾರದ ಚುಕ್ಕಾಣಿ ಹಿಡಿಯುವ ಪಕ್ಷಗಳು ಬದಲಾದಂತೆ ಪಠ್ಯಪುಸ್ತಕಗಳನ್ನು ಬದಲಿಸುವ ಕೆಟ್ಟ ಪರಂಪರೆಗೆ ಅವಕಾಶ ಕಲ್ಪಿಸುವ ನಡವಳಿಕೆಯೂ ಇದಾಗಿದೆ. ಈಗಿನ ಸಮಿತಿ ಸೂಚಿಸುವ ಪರಿಷ್ಕರಣೆಗಳನ್ನು ಒಳಗೊಂಡ ಪಠ್ಯಪುಸ್ತಕಗಳ ಬಗ್ಗೆ ಮತ್ತೆ ಯಾರಾದರೂ ಆಕ್ಷೇಪ ಎತ್ತಿದಲ್ಲಿ, ಆಗ ಹೊಸತಾಗಿ ಮತ್ತೊಂದು ಸಮಿತಿಯನ್ನು ಸರ್ಕಾರ ರಚಿಸುತ್ತದೆಯೇ? ಇತಿಹಾಸವನ್ನು ಅದು ಇದ್ದಂತೆಯೇ ಬೋಧಿಸಬೇಕೇ ವಿನಾ ಯಾವುದೋ ಸಿದ್ಧಾಂತ ಅಥವಾ ಸಮುದಾಯಕ್ಕೆ ಇಷ್ಟವಾಗುವ ರೀತಿಯಲ್ಲಲ್ಲ. ಅಪ್ರಿಯವಾದ ಸಂಗತಿಗಳು ಇತಿಹಾಸದಲ್ಲಿರುವುದು ಸಹಜ. ಅಂಥ ಸಂಗತಿಗಳು ವಿದ್ಯಾರ್ಥಿಗಳಿಗೆ ತಿಳಿದಿರಬೇಕು ಹಾಗೂ ವರ್ತಮಾನವನ್ನು ಜೀವಪರವಾಗಿ ಕಟ್ಟುವ ನಿಟ್ಟಿನಲ್ಲಿ ಅವು ವಿಮರ್ಶಾ ಮಾನದಂಡಗಳಾಗಿ ಒದಗಬೇಕು. ಮೌಢ್ಯವನ್ನು ಒಳಗೊಂಡ ಆಚರಣೆಗಳು, ಅಸ್ಪೃಶ್ಯತೆಯಂತಹ ಸಾಮಾಜಿಕ ಅನಿಷ್ಟಗಳು ವರ್ತಮಾನದಲ್ಲಿ ಕೆಲವರಿಗೆ ಅಹಿತಕರ ಎನ್ನಿಸಬಹುದು. ಹಾಗೆಂದು ಇತಿಹಾಸವನ್ನು ತಿರುಚುವುದು ಅಥವಾ ಮುಚ್ಚಿಡುವುದರಿಂದ ಉಪಯೋಗವಿಲ್ಲ. ಇತಿಹಾಸದ ಕಟುಸತ್ಯಗಳನ್ನು ಒಪ್ಪಿಕೊಂಡು ಮುಂದುವರಿಯುವುದು ಅನಿವಾರ್ಯ.

ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದ ನಡವಳಿಕೆಯಲ್ಲಿ ಕೆಲವೊಮ್ಮೆ ಮಕ್ಕಳ ಬಗೆಗಿನ ಕಾಳಜಿ ಅಥವಾ ಶೈಕ್ಷಣಿಕ ಬದ್ಧತೆಗಿಂತ ಸಮುದಾಯ ಮತ್ತು ಧರ್ಮಗಳ ಓಲೈಕೆಯ ರಾಜಕಾರಣವು ಕಾಣಿಸುತ್ತದೆ. 6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ 'ಹೊಸ ಧರ್ಮಗಳ ಉದಯ' ಎನ್ನುವ ಅಧ್ಯಾಯವು ಬ್ರಾಹ್ಮಣ ಸಮುದಾಯದ ಭಾವನೆಗಳಿಗೆ ನೋವನ್ನುಂಟು ಮಾಡುತ್ತದೆ ಎಂದು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಆರೋಪಿಸಿದಾಗ, ಆ ಪಠ್ಯವನ್ನು ಮಕ್ಕಳಿಗೆ ಬೋಧಿಸದಂತೆ ಶಿಕ್ಷಕರಿಗೆ ಸರ್ಕಾರ ಸೂಚಿಸಿತ್ತು. ಟಿಪ್ಪು ಸುಲ್ತಾನ್ ಮತ್ತು ಹೈದರಾಲಿಗೆ ಸಂಬಂಧಿಸಿದ ವಿಷಯಗಳನ್ನು ಪಠ್ಯದಿಂದ ಸಂಪೂರ್ಣವಾಗಿ ಕೈಬಿಡಬೇಕು ಎಂದು ಕೆಲವರು ಸರ್ಕಾರವನ್ನು ಒತ್ತಾಯಿಸಿದ್ದರು. ಟಿಪ್ಪು ಹಾಗೂ ಹೈದರಾಲಿ ಕೆಲವರ ಮೇಲೆ ಎಸಗಿರುವ ದೌರ್ಜನ್ಯವನ್ನು ನಿರಾಕರಿಸುವುದು ಹೇಗೆ ಸಾಧ್ಯವಿಲ್ಲವೋ, ಸ್ವಾತಂತ್ರ್ಯ ಚಳವಳಿ ಆರಂಭವಾಗುವ ಮೊದಲೇ ಬ್ರಿಟಿಷರ ವಿರುದ್ಧ ಅವರು ಸಂಘರ್ಷ ಸಾರಿದ್ದರು ಎನ್ನುವುದನ್ನೂ ಮರೆಯುವಂತಿಲ್ಲ. ಟಿಪ್ಪು ಮತ್ತು ಹೈದರಾಲಿಯನ್ನು ಉಲ್ಲೇಖಿಸದೇ ಹೋದರೆ ಚರಿತ್ರೆ ಅಪೂರ್ಣವಾಗುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆಯ ನಿಕಟಪೂರ್ವ ಸಚಿವ ಎಸ್. ಸುರೇಶ್ ಕುಮಾರ್ ಅವರು ಟಿಪ್ಪು-ಹೈದರ್ ಅವರನ್ನು ಪಠ್ಯದಿಂದ ಕೈಬಿಡುವ ಬೇಡಿಕೆಗಳಿಗೆ ಒಪ್ಪಿಕೊಂಡಿರಲಿಲ್ಲ. ಆದರೆ, ಅವರ ಅವಧಿಯಲ್ಲೇ ಪಠ್ಯಪುಸ್ತಕ ಪರಿಶೀಲನೆಯ ಹೊಸ ಸಮಿತಿ ರಚನೆಯಾಗಿತ್ತು. ಆ ಆದೇಶಕ್ಕೆ ಈಗಿನ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಚಾಲನೆ ನೀಡಿದ್ದಾರೆ. ವರದಿ ಸಲ್ಲಿಸುವ ಮೊದಲೇ ಶಿಕ್ಷಣ ತಜ್ಞರು ಯಾವುದೇ ನಿರ್ಣಯಕ್ಕೆ ಬರಬಾರದು ಎಂದು ಹೊಸ ಸಮಿತಿಯ ಅಧ್ಯಕ್ಷರು ಹೇಳಿದ್ದಾರೆ. ಇದೇನೇ ಇರಲಿ, ಇತಿಹಾಸವನ್ನು ತಿರುಚುವ ಯಾವುದೇ ಪ್ರಯತ್ನ ನಡೆದಲ್ಲಿ ಅದನ್ನು ಪ್ರಜ್ಞಾವಂತರು ಅದರಲ್ಲೂ ಶಿಕ್ಷಣ ಕ್ಷೇತ್ರದ ತಜ್ಞರು ದೃಢವಾಗಿ ವಿರೋಧಿಸಲೇಬೇಕು. ಅಂತಹ ಪ್ರಯತ್ನಗಳನ್ನು ಪ್ರಜ್ಞಾವಂತರು ವಿರೋಧಿಸದೇ ಹೋದರೆ, ನಾಡಿನ ಮಕ್ಕಳಿಗೆ ದ್ರೋಹ ಬಗೆದಂತಾಗುತ್ತದೆ.

ದಿನದ ಟ್ವೀಟ್

ಇದೆಂಥಾ ವ್ಯವಸ್ಥೆ?



ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕವನ್ನು ಹೆಚ್ಚಿಸುವ ಮೂಲಕ ಕೇಂದ್ರದ ವರಮಾನವು ಹಿಂದಿನ ವರ್ಷ ₹ 1.3 ಲಕ್ಷ ಕೋಟಿಯಷ್ಟು ಹೆಚ್ಚಾಗಿ, ₹ 4.2 ಲಕ್ಷ ಕೋಟಿಗೆ ತಲುಪಿತು. ಇದರಲ್ಲಿ ಶೇಕಡ 40ರಷ್ಟನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಿತ್ತು. ಆದರೆ, ಈ ಹೆಚ್ಚುವರಿ ಆದಾಯವು ಕೇಂದ್ರ ಸರ್ಕಾರದ ಸೆಸ್ ಮೂಲಕ ಬಂದಿರುವ ಕಾರಣ ಇವುಗಳನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ಇದು ಮೋದಿ ಶೈಲಿಯ ಸಹಕಾರ ಒಕ್ಕೂಟ ವ್ಯವಸ್ಥೆ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

ಕಿಡಿನುಡಿ



ಕಾಂಗ್ರೆಸ್‌ಗಾಗಲೀ ಅಥವಾ ಇತರ ಪಕ್ಷಗಳಿಗಾಗಲೀ ಆಪತ್ತು ಬಂದಾಗ ಮಾತ್ರ ದಲಿತರು ನೆನಪಾಗುತ್ತಾರೆ.

ಮಾಯಾವತಿ, ಬಿಎಸ್‌ಪಿ ಅಧ್ಯಕ್ಷೆ

25 ವರ್ಷಗಳ ಹಿಂದೆ

ಶನಿವಾರ, 21-9-1996

• ವೈದ್ಯ ಸೀಟು ನಿಗದಿ ಅಧಿಕಾರ ಸರ್ಕಾರಕ್ಕಿಲ್ಲ

ಬೆಂಗಳೂರು, ಸೆ. 20– ವೈದ್ಯಕೀಯ ಶಿಕ್ಷಣ ಕುರಿತಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಯಾವುದೇ ರೀತಿಯಲ್ಲಿ ಕಾರ್ಯಾಂಗದ ಮೂಲಕ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ವೈದ್ಯಕೀಯ ಕಾಲೇಜುಗಳ ಪ್ರವೇಶ ಸಂಖ್ಯೆಯನ್ನು ಭಾರತ ವೈದ್ಯಕೀಯ ಮಂಡಲಿ (ಐಎಂಸಿ) ನಿಗದಿ ಮಾಡಿದ ಮೇಲೆ ಯಾವುದೇ ಕಾಲೇಜು ಅದಕ್ಕಿಂತ ಹೆಚ್ಚಿಗೆ ಪ್ರವೇಶ ನೀಡುವಂತಿಲ್ಲ. ಆದರೆ ಕೇಂದ್ರ ಕಾಯ್ದೆಯ 10ಎ ಅಥವಾ 10ಸಿ ವಿಧಿ ಪ್ರಕಾರ ಕೇಂದ್ರ ಸರ್ಕಾರ ಅನುಮತಿ ನೀಡಿದಲ್ಲಿ ಮಾತ್ರ ಹೆಚ್ಚುವರಿ ಪ್ರವೇಶ ನೀಡಬಹುದು ಎಂದು ಸೂಚಿಸಿತು.

• ಕಿರಿಯ ವೈದ್ಯರ ಸಂಪು: ರೋಗಿಗಳ ಪರದಾಟ

ಬೆಂಗಳೂರು, ಸೆ. 20– ರಾಜ್ಯದ ನಾಲ್ಕು ಸರ್ಕಾರಿ ವೈದ್ಯ ಕಾಲೇಜುಗಳ ಕಿರಿಯ ವೈದ್ಯರು ಇಂದು ಅನಿರ್ದಿಷ್ಟ ಮುಷ್ಕರ ಆರಂಭಿಸಿದ್ದರಿಂದ ಈ ಕಾಲೇಜುಗಳಿಗೆ ಹೊಂದಿಕೊಂಡ ಆಸ್ಪತ್ರೆಗಳಲ್ಲಿ ಕೆಲಸ ಕಾರ್ಯ ಅಸ್ತವ್ಯಸ್ತಗೊಂಡಿದ್ದು, ರೋಗಿಗಳಿಗೆ ತೊಂದರೆಯಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 21-9-1971

• ಬಾಂಗ್ಲಾ ದೇಶಕ್ಕೆ ವಿಶ್ವ ಮಾನ್ಯತೆಗೆ ತೀವ್ರ ಆಗ್ರಹ

ನವದೆಹಲಿ, ಸೆ. 20– ಬಾಂಗ್ಲಾ ದೇಶಕ್ಕೆ ವಿಶ್ವದ ಸರ್ಕಾರಗಳು ಮಾನ್ಯತೆ ನೀಡಿ ಅದಕ್ಕೆ ಕೂಡಲೇ ಪರಿಣಾಮಕಾರಕ ನೆರವು ಒದಗಿಸಬೇಕೆಂದು ಬಾಂಗ್ಲಾ ದೇಶಕ್ಕೆ ಸಂಬಂಧಿಸಿದ ಮೂರು ದಿನಗಳ ಅಂತರ-ರಾಷ್ಟ್ರೀಯ ಸಮ್ಮೇಳನವು ಇಂದು ಮನವಿ ಮಾಡಿಕೊಂಡಿದೆ.

ಪರಿಹಾರಕ್ಕಾಗಿ ಸಾಮಗ್ರಿಗಳನ್ನು ಅಥವಾ ವಿಮೋಚನಾ ಸಮರದಲ್ಲಿ ವಿಜಯ ಗಳಿಸುವುದಕ್ಕಾಗಿ ಸೈನಿಕ ನೆರವನ್ನು ಬಾಂಗ್ಲಾದೇಶ ಸರ್ಕಾರಕ್ಕೆ ಒದಗಿಸಬೇಕೆಂದು ಸಮ್ಮೇಳನವು ಒಂದು ನಿರ್ಣಯದಲ್ಲಿ ಕರೆ ಕೊಟ್ಟಿದೆ.

• 400 ಮಂದಿ ಪಾಕ್ ಸೈನಿಕರ ಸಾವು

ಮುಜೀಬ್‌ನಗರ, ಸೆ. 20– ಕೊಮಿಲಾ, ನೌಖಾಲಿ ಮತ್ತು ಕುಷ್ಟಿಯ ಪ್ರದೇಶದಲ್ಲಿ ಕಳೆದ ಐದು ದಿನಗಳಲ್ಲಿ ಮುಕ್ತಿವಾಹಿನಿ ಅವರು ನಡೆಸಿದ ಕಮಾಂಡೊ ದಾಳಿಯಲ್ಲಿ ಸುಮಾರು 400 ಮಂದಿ ಪಾಕಿಸ್ತಾನಿ ಸೈನಿಕರು ಮರಣ ಹೊಂದಿದರೆಂದು ಇಂದು ಇಲ್ಲಿ ಅಧಿಕೃತವಾಗಿ ವರದಿಯಾಗಿದೆ.

ನಾಯಿಗಳಿಂದ ಕಂಟಕ ಎದುರಿಸುತ್ತಿರುವ ಕೆಲವು ವನ್ಯಜೀವಿಗಳು ಅವನತಿಯತ್ತ ಸಾಗುತ್ತಿವೆ

ಮಲೆನಾಡಿನಲ್ಲಿ ಶ್ವಾನ ಸುನಾಮಿ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮಲೆನಾಡಿನ ವನ್ಯಜೀವಿಗಳಿಗೆ ಆಪತ್ತು ತಪ್ಪಿದ್ದಲ್ಲ. ಮಾಂಸಕ್ಕಾಗಿ ಮತ್ತು ಚರ್ಮಕ್ಕಾಗಿ ಜಿಂಕೆ, ಕಡವೆ, ಕಾನುಕುರಿಯಂತಹ ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ. ಸಿಗುವ ಮುಷ್ಟಿ ಮಾಂಸಕ್ಕಾಗಿ ಹಾರುಬೆಕ್ಕು, ಕಬ್ಬೆಕ್ಕುಗಳು, ಪಕ್ಷಿಗಳು ಅಳಿಯುತ್ತಿವೆ. ಮರದ ಪೊಟರೆ ಹೊಕ್ಕ ಉಡವನ್ನು ಕೊಲ್ಲಲು ಇಡೀ ಮರಕ್ಕೆ ಬೆಂಕಿ ಹಚ್ಚಲಾಗುತ್ತದೆ. ರಾತ್ರಿ ವೇಳೆ ಸಂಚರಿಸುವ ಜಿಂಕೆಗಳನ್ನು ಬೇಟೆಯಾಡಲು ಹಲವು ತಂತ್ರಗಳನ್ನು ಬಳಸಲಾಗುತ್ತದೆ. ಅದರಲ್ಲಿ ಉರುಳು ಹಾಕುವುದು, ಹೊಂಚು ಕುಳಿತು ಬೇಟೆಯಾಡುವುದು, ನೆಲಕ್ಕೆ ಬಿದ್ದ ಹಣ್ಣುಗಳನ್ನು ತಿನ್ನಲು ಬರುವ ಕಾನುಕುರಿಗಳನ್ನು ಹೊಡೆದು ತಿನ್ನುವುದು... ಹೀಗೆ ಮನುಷ್ಯ ತನ್ನ ಬಾಯಿ ಚಪಲಕ್ಕಾಗಿ ಏನೆಲ್ಲಾ ಮಾಡುತ್ತಾನೆ.

ಮಲೆನಾಡಿನ ಕೆಲ ಭಾಗಗಳಲ್ಲಿ, ಸಾಕಿದ ಜಾನುವಾರುಗಳ ಕೊರಳಿಗೆ ಗಂಟೆ ಕಟ್ಟಿ ರಾತ್ರಿ ಕಾಡಿಗೆ ಬಿಡುತ್ತಾರೆ. ಅಪಾಯಕಾರಿಯಲ್ಲದ ದನ ಮೇಯಲು ಬಂದಿದೆ ಎಂದಷ್ಟೇ ವನ್ಯಜೀವಿಗಳಿಗೆ ತಿಳಿಯುತ್ತದೆ. ದನದ ಪಕ್ಕದಲ್ಲೇ ಕೋವಿ ಹಿಡಿದ ಬೇಟೆಗಾರನಿದ್ದಾನೆ ಎಂಬ ಅರಿವಿಲ್ಲದ ಜಿಂಕೆ ಗುಂಡಿಗೆ ಬಲಿಯಾಗುತ್ತದೆ. ನಾಯಿಗಳನ್ನು ಸಾಕಿ ಅವುಗಳಿಗೆ ಬೇಟೆಯಾಡುವ ತರಬೇತಿ ಕೊಡುವುದು ಮತ್ತೊಂದು ವಿಧ.


ಮನೆಯಲ್ಲಿ ಸಾಕಿದ ನಾಯಿಗಳಿಗೆ ಹೊತ್ತಿಗೆ ಸರಿಯಾಗಿ ಆಹಾರ ಸಿಗುತ್ತದೆ. ಆದರೆ ಬೀಡಾಡಿ ನಾಯಿಗಳು ತಮ್ಮ ಆಹಾರವನ್ನು ತಾವೇ ಹುಡುಕಿಕೊಳ್ಳಬೇಕು. ಮಹಾನಗರ, ನಗರ, ಪೇಟೆ ಪಟ್ಟಣಗಳಲ್ಲಿ ಮನುಷ್ಯ ಬಿಸಾಡಿದ ಆಹಾರವಾದರೂ ಸಿಕ್ಕೀತು, ಮಾಂಸದ ಅಂಗಡಿಗಳ ಉಳಿಕೆ ತಿಂದು ಬದುಕುವ ಗಡವ ನಾಯಿಗಳು ಚಿಕ್ಕ ಮಕ್ಕಳನ್ನು ಹಿಡಿದು ತಿಂದ ಉದಾಹರಣೆಗಳು ಬೆಂಗಳೂರಿನಲ್ಲಿ ಸಿಗುತ್ತವೆ. ಹಳ್ಳಿ ಪ್ರದೇಶಗಳಲ್ಲಿ ಮಾತ್ರ ಪರಿಸ್ಥಿತಿ ಕೊಂಚ ಗಂಭೀರವಾಗಿದೆ. ಮೂರು– ನಾಲ್ಕು ನಾಯಿಗಳು ಕಾಡಿಗೆ ನುಗ್ಗಿ ಆಹಾರ ಹುಡುಕುತ್ತವೆ. ಆಕಸ್ಮಿಕವಾಗಿ ಜಿಂಕೆಯೋ ಕಾನುಕುರಿಯೋ ಎದುರಾದರೆ, ಅದರ ಕಥೆ ಮುಗಿದಂತೆ.

ಗುಂಡಿನೇಟಿಗೆ ಬಲಿ ನೆಲಕ್ಕೆ ಬೀಳುತ್ತಿದ್ದಂತೆ, ಸಾಕಿದ ಬೇಟೆನಾಯಿಗಳು ಹೋಗಿ ಕತ್ತಿಗೆ ಬಾಯಿ ಹಾಕಿ ಕೊಲ್ಲುತ್ತವೆ. ಮಂಗಗಳ ಹಾವಳಿಯನ್ನು ತಡೆಯಲು ರೈತರು ಅವುಗಳನ್ನು ಬೆದರಿಸಲು ಮತ್ತು ಕೊಲ್ಲಲು ತಳವಾರ ಎಂಬುವವನನ್ನು ನೇಮಿಸಿಕೊಳ್ಳುತ್ತಾರೆ. ದಿನವಿಡೀ ತೋಟ ಮತ್ತು ತೋಟದ ಮೇಲ್ಭಾಗದಲ್ಲಿ ತಿರುಗಾಡುವ ಈ ತಳವಾರನೆಂಬ ಬೇಟೆಗಾರ ಮಂಗನನ್ನು ಮಾತ್ರ ಕೊಲ್ಲುವುದಿಲ್ಲ. ಅವನ ಕೋವಿಯ ನೇರಕ್ಕೆ ಸಿಕ್ಕ ಇತರ ವನ್ಯಪ್ರಾಣಿಗಳ ಹತ್ಯೆಯೂ ಆಗುತ್ತದೆ. ತನ್ನ ಅನುಕೂಲಕ್ಕಾಗಿ ತಳವಾರನೂ ಒಂದು ಅಥವಾ ಎರಡು ಬೇಟೆನಾಯಿಗಳನ್ನು ಸಾಕಿಕೊಂಡಿರುತ್ತಾನೆ.

ನಾಯಿಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಕೆಲವೊಮ್ಮೆ ಜಿಂಕೆ, ಕಾಡುಕುರಿಗಳು ಊರಿಗೆ ಬರುವುದಿದೆ. ಆಗ ಯಾರಾದರೂ ಆ ಪ್ರಾಣಿಯನ್ನು ರಕ್ಷಣೆ ಮಾಡಬಹುದು ಅಥವಾ ಅನಾಯಾಸವಾಗಿ ಲಭಿಸಿದ ಪ್ರಾಣಿಯು ಅವರ ಒಲೆಯ ಮೇಲಿನ ಎಸರೂ ಆಗಬಹುದು. ಹೆಗ್ಗೋಡಿನ ಸಮೀಪದ ಆಶ್ರಮವೊಂದರಲ್ಲಿ ತೋಳಗಳು ಬಂದು ಜಿಂಕೆಯನ್ನು ಹಿಡಿದಿವೆ, ಜಿಂಕೆ ಸತ್ತುಹೋಗಿದೆ, ದಯವಿಟ್ಟು ಅರಣ್ಯ ಇಲಾಖೆಗೆ ಮಾಹಿತಿ ಕೊಡಿ ಎಂದೊಬ್ಬರು ಇತ್ತೀಚೆಗೆ ಕರೆ ಮಾಡಿದರು. ನಮ್ಮಲ್ಲಿ ತೋಳಗಳು ಇಲ್ಲವೇ ಇಲ್ಲ. ತೋಳದಂತಹ ಬೀಡಾಡಿ ನಾಯಿಯೋ ಅಥವಾ ಸಾಕಿದ ಬೇಟೆನಾಯಿಯೋ ಜಿಂಕೆಯನ್ನು ಕೊಂದಿರಬೇಕು ಎಂದು ಊಹಿಸಿ, ಇಲಾಖೆಗೆ ಕರೆ ಮಾಡಿ ವಿಷಯ ತಿಳಿಸಿದೆ. ನಿಯಮದ ಪ್ರಕಾರ, ಜಿಂಕೆಯ ಮರಣೋತ್ತರ ಪರೀಕ್ಷೆ ನಡೆಸಿ, ಅದನ್ನು ಸುಟ್ಟು ಹಾಕಿದರು ಅನ್ನಿ.

ವನ್ಯಜೀವಿ ಬೇಟೆ ಪ್ರಕರಣಗಳಲ್ಲಿ ಪತ್ತೆಯಾಗಿ ವರದಿಯಾಗುವುದು ಶೇ 1ರಷ್ಟು ಮಾತ್ರ. ಇನ್ನುಳಿದ ಶೇ99ರಷ್ಟು ಪ್ರಕರಣಗಳು ಪತ್ತೆಯಾಗುವುದೇ ಇಲ್ಲ ಅಥವಾ ಸೀಮಿತವಾಗಿ ಪತ್ತೆಯಾದರೂ ಅವು ವರದಿಯಾಗುವುದಿಲ್ಲ. ವನ್ಯಜೀವಿಗಳನ್ನು ಕೊಲ್ಲುವುದು ಅಪರಾಧವಾದ್ದರಿಂದ, ಹಳ್ಳಿಯಲ್ಲಿ ಅದರ ಕುರಿತು ಯಾರೂ ವಿಷಯ ಬಹಿರಂಗ ಮಾಡುವುದಿಲ್ಲ. ಶಿವಮೊಗ್ಗದ ಮಂಡಗದ್ದೆ ಮೀಸಲು ಅರಣ್ಯದ ಸುತ್ತಮುತ್ತಲ ಪುರದಾಳು, ಕವಲಪುರ, ಉಂಬ್ಳೆಬೈಲ್ ಗಣೇದಾಳು, ಮಾರಿದಿಬ್ಬ, ಲಕ್ಕಿನಕೊಪ್ಪ, ಕಡೇಕಲ್ ಊರುಗಳಲ್ಲಿ ಬೇಟೆಯಾಡಲು ಹೊಸದೊಂದು ವಿಧಾನವನ್ನೇ ಕಂಡುಕೊಂಡಿದ್ದಾರೆ. ಪಳಗಿಸಿದ ಬೇಟೆ ನಾಯಿಗಳನ್ನು ಕಾಡಿನೊಳಕ್ಕೆ ಕರೆದೊಯ್ಯುತ್ತಾರೆ. ಗೊರಸುಳ್ಳ ಪ್ರಾಣಿಗಳಾದ ಜಿಂಕೆ, ಕಾನುಕುರಿ, ಹಂದಿ ಇವುಗಳ ಇರುವನ್ನು ಪತ್ತೆ ಹಚ್ಚುವ ನಾಯಿಗಳ ದಂಡು, ಬಲಿಪ್ರಾಣಿಯ ಮೇಲೆ ಮುಗಿಬಿದ್ದು ಕತ್ತಿಗೇ ಬಾಯಿಹಾಕುತ್ತದೆ. ಅದು ಜೀವ ಬಿಡುವುದರೊಳಗಾಗಿ ಬೇಟೆಗಾರರು ಬಲಿಪ್ರಾಣಿಯನ್ನು ಕತ್ತರಿಸುತ್ತಾರೆ. ಗುಂಡಿನ ಶಬ್ದವಿಲ್ಲ, ಅರಣ್ಯಾಧಿಕಾರಿಗಳ ಭಯವಿಲ್ಲ. ಆಕಸ್ಮಿಕವಾಗಿ ಸಿಕ್ಕಿಬಿದ್ದರೂ ಸಾಕಿದ ನಾಯಿಗಳು ಹಿಡಿದಿವೆ ಎಂದು ತಪ್ಪಿಸಿಕೊಳ್ಳುವ ಹುನ್ನಾರ. ಹಲವು ಬಾರಿ ಇಲಾಖೆಯ ತಳಮಟ್ಟದ ನೌಕರರು ಅದರಲ್ಲಿ ಪಾಲು ಪಡೆದುಕೊಂಡು ಅವರನ್ನು ಬಿಡುವುದೂ ಇದೆ.

ಸಾಕಿದ ಬೇಟೆನಾಯಿಗಳಾಗಲೀ ಬೀದಿ ನಾಯಿಗಳಾಗಲೀ ಕೆನೈನ್ ವೈರಲ್ ಡಿಸೀಸ್ (ಸಿ.ವಿ.ಡಿ.) ರೋಗವನ್ನು ಕಾಡುಪ್ರಾಣಿಗಳಿಗೆ ಹಬ್ಬಿಸುವ ಬಹುದೊಡ್ಡ ಅಪಾಯವಿದೆ. ಇತ್ತೀಚೆಗೆ, ಇದೇ ರೋಗದಿಂದ ಗುಜರಾತಿನಲ್ಲಿ 12 ಸಿಂಹಗಳು ಸತ್ತಿದ್ದನ್ನು ಸ್ಮರಿಸಬಹುದು. ಬಲುಬೇಗ ಸಾಂಕ್ರಾಮಿಕಗೊಳ್ಳುವ ಈ ರೋಗ ಒಂದು ಪ್ರದೇಶದ ವನ್ಯಸಂತತಿಯನ್ನೇ ನಿರ್ನಾಮ ಮಾಡುವಷ್ಟು ಅಪಾಯಕಾರಿಯಾಗಿದೆ.



ಮಹಾನಗರಗಳಲ್ಲಿ ನಾಯಿಗಳನ್ನು ಸಾಕುವವರು ಕೆಲವು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ನಾಯಿಯನ್ನು ವಾಯುವಿಹಾರಕ್ಕೆ ಚೈನ್ ಹಾಕಿಯೇ ಕರೆದೊಯ್ಯಬೇಕು. ಕಾಲಕಾಲಕ್ಕೆ ರೇಬಿಸ್ ಚುಚ್ಚುಮದ್ದು ಕೊಡಿಸುವುದು, ಅದನ್ನು ಮನೆಯ ಸದಸ್ಯನೆಂದೇ ಪರಿಗಣಿಸುವುದು ಇವೆಲ್ಲಾ ನಿಯಮಗಳಲ್ಲಿ ಇವೆ. ಬಿಡಿ, ಇವೆಲ್ಲಾ ಮಹಾನಗರಗಳಲ್ಲಿ ಸಾಕಿದ ಗಣ್ಯ ನಾಯಿಗಳ ಕಥೆಯಾಯಿತು. ಬೀದಿನಾಯಿಗಳ ಪಾಡೇನು? ಭಾರತದಲ್ಲಿ ಹತ್ತಿರ ನಾಲ್ಕು ಕೋಟಿ ಬೀಡಾಡಿ ನಾಯಿಗಳಿವೆ ಎಂದು ವರದಿ ಹೇಳುತ್ತದೆ. ಹಾಗೆಯೇ ರೇಬಿಸ್ ಕಾಯಿಲೆಯಿಂದ ವಿಶ್ವದಲ್ಲೇ ಅತಿ ಹೆಚ್ಚು ಬಲಿಯಾಗುವವರ ಸಂಖ್ಯೆ ಭಾರತದ್ದೇ ಆಗಿದೆ. ವರ್ಷಕ್ಕೆ 20 ಸಾವಿರ ಸಾವುಗಳು ರೇಬಿಸ್‌ನಿಂದ ಸಂಭವಿಸುತ್ತವೆ. ಇದರಲ್ಲಿ, ಅರ್ಧಭಾಗ ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವರದು.

ಹಿಂದೆಲ್ಲಾ ಬೀಡಾಡಿ ನಾಯಿಗಳ ಸಂಖ್ಯೆ ಮಿತಿಮೀರಿದಾಗ, ಸ್ಥಳೀಯ ಆಡಳಿತದವರು ಅವುಗಳನ್ನು ಬಹಳ ಕ್ರೂರತನದಿಂದ ಕೊಲ್ಲಿಸುತ್ತಿದ್ದರು. ಬೀಡಾಡಿ ನಾಯಿಗೆ ಆಹಾರದ ಆಮಿಷ ತೋರಿಸಿ, ಹತ್ತಿರ ಬರುತ್ತಿದ್ದಂತೆ, ದೊಣ್ಣೆಯಿಂದ ಅದರ ತಲೆಗೆ ಬಲವಾಗಿ ಹೊಡೆಯುತ್ತಿದ್ದರು, ಬಳಿಕ ಶವವನ್ನು ಗಾಡಿಗೆ ಎಸೆಯುತ್ತಿದ್ದರು. ಹತ್ತಾರು ಶವಗಳನ್ನು ಊರಿನ ಹೊರಭಾಗದಲ್ಲಿ ಹುಗಿಯಲಾಗುತ್ತಿತ್ತು. ಪ್ರಾಣಿಪ್ರಿಯರ ಆಕ್ರೋಶದ ನಂತರದಲ್ಲಿ ನೋವಿಲ್ಲದೇ ಸಾಯಿಸುವ ವಿಧಾನ ಬಂತು. ಬಹಳ ಚಾಕಚಕ್ಯತೆಯಿಂದ ನಾಯಿಯ ಕೊರಳಿಗೆ ಹಗ್ಗ ಹಾಕಿ ಹಿಡಿದುಕೊಳ್ಳುವುದು, ಮತ್ತೊಬ್ಬ ಅದರ ಹಿಂಭಾಗಕ್ಕೆ ಸಾವಿನ ಚುಚ್ಚುಮದ್ದು ಕೊಡುವುದು. ಇದೂ ತಪ್ಪು ಎಂಬ ಆಕ್ರೋಶ ವ್ಯಕ್ತವಾದ ನಂತರ ಸಂತಾನ ಶಕ್ತಿಹರಣ ಚಿಕಿತ್ಸಾ ಪದ್ಧತಿ ಜಾರಿಗೆ ಬಂತು. ಶಸ್ತ್ರಚಿಕಿತ್ಸೆ ನಂತರ ಅದರ ಗಾಯ ಮಾಯುವ ತನಕ ಸಾಕುವ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯ ಮೇಲೆ ಬಿತ್ತು. ಎಚ್ಚರವಾದ ನಂತರದಲ್ಲಿ ಬೀಡಾಡಿ ನಾಯಿಗಳು ಬಹಳ ಆಕ್ರಮಣಕಾರಿ ವರ್ತನೆ ತೋರುತ್ತವೆ. ಆಹಾರ ನೀಡಲು ಹೋದವರನ್ನೇ ಕಚ್ಚಿದ ಉದಾಹರಣೆಗಳೂ ಇವೆ. ಈ ಪದ್ಧತಿಯೂ ಹೆಚ್ಚಿನ ಫಲ ನೀಡಲಿಲ್ಲ.

ಸಾಕುನಾಯಿಗಳ ನಿಯಂತ್ರಣ ಮತ್ತು ನಿರ್ವಹಣೆ ಹಳ್ಳಿಗಾಡಿನ ಮಟ್ಟಕ್ಕೂ ವಿಸ್ತರಣೆಯಾಗಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಕು ಮತ್ತು ಬೀಡಾಡಿ ನಾಯಿ ನಿರ್ವಹಣಾ ಸಮಿತಿ ರಚನೆಯಾಗಬೇಕು. ಮೀಸಲು ಅರಣ್ಯ, ರಕ್ಷಿತಾರಣ್ಯ, ಅಭಯಾರಣ್ಯಗಳಲ್ಲಿ ವನ್ಯಜೀವಿ ನಿರ್ವಹಣೆ ಕಾರ್ಯಸೂಚಿಯಲ್ಲಿ ನಾಯಿ ದಾಳಿ ಮತ್ತು ಅದರಿಂದಾಗುವ ವನ್ಯಸಂಪತ್ತಿನ ನಾಶದ ಕುರಿತಾಗಿ, ಬೇಟೆ ಮತ್ತು ಬೀಡಾಡಿ ನಾಯಿಗಳ ನಿಯಂತ್ರಣಕ್ಕಾಗಿ ಪ್ರತ್ಯೇಕ ಶಾಸನ ರೂಪಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಶ್ವಾನ ಸುನಾಮಿಯಿಂದಾಗಿ ವನ್ಯಜೀವಿಗಳ ಅದರಲ್ಲೂ ಗೊರಸುಳ್ಳ ಪ್ರಾಣಿಗಳ ಸಂಖ್ಯೆ ವಿಪರೀತ ಕಡಿಮೆಯಾಗಲಿದೆ.

ಕಾಡಿನ ಸ್ವಾಭಾವಿಕ ಬೇಟೆಪ್ರಾಣಿಗಳಾದ ಹುಲಿ, ಚಿರತೆ, ಹೈನಾ, ತೋಳಗಳಿಗೆ ಬಲಿಪ್ರಾಣಿಗಳ ಕೊರತೆಯಾಗಿ ಮತ್ತಷ್ಟು ಮಾನವ-ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗುವ ಅಪಾಯವಿದೆ.

ಚುರುಮುರಿ



ಮದುವೆ ಮಾತು

• ಲಿಂಗರಾಜು ಡಿ.ಎಸ್.

'ದುಸರಾ ಮಾತಾಡದೇ ಟ್ಯಾಕ್ಸು ಕಟ್ಟಿದರೆ ಮಾತ್ರ ಅನುಕೂಲ ಕೊಟ್ಟಾರಂತೆ! 'ಮದುವೆಗೆ ಗದ್ದೆ-ಹೊಲ ಆಗಕುಲ್ಲ ಏರ್‍ಕಂಡೀಶನ್ ಚೌಲ್ಟ್ರೀನೇ ಬೇಕು ಅಂತೀರಾ, ಟ್ಯಾಕ್ಸು ಕಟ್ಟಕೇನು ಮಲ್ಲಾಗರ ನಿಮಗೆ' ಅಂತ ಘನವಾದ ಮಾತಾಡವ್ರೆ ದೊಡ್ಡೋರು' ಅಂದೆ ನ್ಯೂಸ್ ನೋಡಿಕ್ಯಂಡು.

'ಮಂತೆ ಎಲ್ಲಾ ಪುಗಸಟ್ಟೆ ಬಂದದಾ? ಬಿಗ್ ಫ್ಯಾಟ್ ಇಂಡಿಯನ್ ವೆಡ್ಡಿಂಗ್ ಐಭೋಗ ಅಂದ್ರೆ ಸುಮ್ಮನೇನಾ? ಇದು ವರ್ಷಕ್ಕೆ 20-25 ಸಾವಿರ ಕೋಟಿ ಯವಾರ ಕಯ್ಯಾ! ಮದುವೇಗೆ ದೊಡ್ಡ ಏರ್‍ಕಂಡೀಶನ್ ಚೌಲ್ಟ್ರಿ, ಕಾರ್ಡಿಗೆ ಕೋಟಿ, ಬರೋರಿಗೆ ಚಾರ್ಟರ್ಡ್ ಫ್ಲೈಟಿಗೆ ಒಸಿ ಆಯ್ತುದಾ. ಟೋಲು, ಟ್ಯಾಕ್ಸು ಮಾತ್ರ ಕೊಡಿಕಿಲ್ಲ ಅಂತೀರಿ!' ಅಂತ ಮಕ್ಕುಗಿದರು.

'ದೊಡ್ಡೋರಂಗೆ ನಾವು ನೂರಾರು ಕೋಟಿ ಖರ್ಚಿನ ಮದುವೆ ಮಾಡಕಾದದೇ? ಹರಿದೋಗಿರ ಚಡ್ಡಿ ಬುಟ್ರೆ ಇನ್ನೇನದೋ ನಮ್ಮತಾವು. ಎಲ್ಲಾನೂ ಮಿಳ್ಳೆ-ಚಟಾಕಲ್ಲಿ ತಂದು ಹೊಲದಗೋ, ಸಣ್ಣ ಚೌಲ್ಟ್ರಿಯಾಗೋ ಮದುವೆ ಮಾಡಿ, ಮುದ್ರಿಕೆ ಮಾತು ಹೇಳಿಕ್ಯಂದು ಗಂಡು-ಹೆಣ್ಣಿಗೆ ಅಕ್ಷತೆ ಹಾಕ್ಸಿ ಉಸೂರಂತೀವಿ!' ಯಂಟಪ್ಪಣ್ಣ ನೋವು ಆಚೆಗೆ ಕೆಡಗ್ತು.

'ದೊಡ್ಡೋರ ಮದುವೆಗೆ ಬರೋರ ಫ್ಲೈಟು, ಬೈಕು, ಕಾರು, ಬಸ್ಸಿಗೆ ಡಿಜೇಲು, ಪೆಟ್ರೋಲು, ಕ್ವಾಟ್ರು ಎಲ್ಲಾತ್ಕೂ ಟ್ಯಾಕ್ಸು ನಾವೇ ಕಟ್ಟಬೇಕ್ರಾ. ಒಡವೆ-ಸೀರೆ ಅಂಗಡಿಯೋರು, ಅಡುಗೆ ಭಟ್ಟರು, ತೊಳೆಯೋರು, ಒರಸೋರು, ದೋಸರು, ನೆರವಿ ಊಟಕೆ ಮರಿ ಕೊಟ್ಟೋರು, ಮರಿ ಹೊಡದೋರು, ಕತ್ತರಿಸಿದೋರು, ಅಡುಗೆ ಮಾಡೋರು ಎಲ್ಲಾ ಉದ್ಧಾರಾತರೆ ಬುಡಿ ಸಾ' ಅಂದೆ.

'ಹ್ಞೂಂ ಕಯ್ಯಾ, ಸರಳ ವಿವಾಹ, ಆನ್‌ಲೈನ್ ಮದುವೆ, ಜೂಂ ಮದುವೆ ಮಾಡಿಕ್ಯಂತ್ರೆ ನೀವು ಉದ್ಧಾರಾಯ್ತಿರಿ, ದೇಸಕ್ಕೇನು ಉಪಕಾರ ಆದದು. ಸಾಲ ಮಾಡಿ, ತಾರಾಮಾರ ಖರ್ಚು ಮಾಡಿ ಮದುವ್ಯಾಗಿ, ದೇಸ ಉದ್ಧಾರ ಮಾಡಿ ಅಂತ ಅವುರಂದಿರದು!' ತುರೇಮಣೆ ಲೆಕ್ಕಾಚಾರ ಕೇಳಿದ ಮ್ಯಾಲೆ ದೊಡ್ಡೋರೆಲ್ಲಾ ಜಾಣರಲ್ಲ ಅಂದುದ್ದು ಸರಿಯಾಗದೆ ಅನ್ನಿಸ್ತು.

ಸಂಗತ

ಕಾನೂನು ಶಿಕ್ಷಣಕ್ಕೆ ಕನ್ನಡ ಮಾಧ್ಯಮ ಬೇಡವೇ?

ಕಕ್ಷಿದಾರ ಅರಿಯದ ಭಾಷೆಯಲ್ಲಿ ಕೋರ್ಟ್ ವ್ಯವಹಾರ ನಡೆಸುವುದು ಅನ್ಯಾಯ

• ಡಾ. ಜಿನದತ್ತ ದೇಸಾಯಿ

ರಾಜ್ಯದಲ್ಲಿ ಎಂಜಿನಿಯರಿಂಗ್, ವೈದ್ಯಕೀಯ ಪದವಿ ಅಧ್ಯಯನವನ್ನು ಕನ್ನಡ ಮಾಧ್ಯಮದಲ್ಲಿಯೂ ಆರಂಭಿಸಲಾಗುವುದು ಎಂಬ, ಉನ್ನತ ಶಿಕ್ಷಣ ಸಚಿವರ ಇತ್ತೀಚಿನ ಹೇಳಿಕೆಯು ನನ್ನನ್ನು ಆಲೋಚನೆಗೆ ಹಚ್ಚಿತು. ಇದಲ್ಲದೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ ಆಯೋಜಿಸಿದ್ದ ಭಾಷಾಂತರ ಕಾರ್ಯಾಗಾರವು ಈ ವಿಷಯವಾಗಿ ಮತ್ತಷ್ಟು ಚಿಂತನೆಗೆ ಅವಕಾಶ ಒದಗಿಸಿತು.

ನ್ಯಾಯಾಲಯಕ್ಕೆ ಅಗತ್ಯ ಶುಲ್ಕ ಕಟ್ಟಿ, ವಕೀಲರಿಗೆ ಫೀಸು ತೆತ್ತು, ತನ್ನ ಆಸ್ತಿ ಪಾಸ್ತಿ, ದಂಡ, ಶಿಕ್ಷೆಗಳ ಭವಿಷ್ಯವನ್ನು ನ್ಯಾಯಾಧೀಶರಿಗೆ ಒಪ್ಪಿಸಿ, ಇಂಗ್ಲಿಷಿನಲ್ಲಿ ನಡೆಯುವ ವಾದ ವಿವಾದಗಳನ್ನು ಇಂಗ್ಲಿಷ್ ಚಲನಚಿತ್ರ ನೋಡಿದಂತೆ, ಮೂಕಪ್ರೇಕ್ಷಕನಾಗಿ ಕೋರ್ಟಿನ ಮೂಲೆಯಲ್ಲಿ ಬೆಂಚೊಂದರ ಮೇಲೆ ಕುಳಿತುಕೊಂಡು ವೀಕ್ಷಿಸುವ ಗಾಬರಿಗಣ್ಣಿನ ಕಕ್ಷಿದಾರನನ್ನು ಸ್ಮರಿಸಿಕೊಂಡಾಗ ಮರುಕವೆನಿಸುತ್ತದೆ. ಅವನನ್ನು ಅಜ್ಞಾನದಲ್ಲಿಟ್ಟು, ಕೋರ್ಟಿನ ವ್ಯವಹಾರಗಳನ್ನು ಅವನಿಗೆ ತಿಳಿಯದ ಭಾಷೆಯಲ್ಲಿ ನಡೆಸುವುದು ಅವನಿಗೆಸಗುವ ಮೊದಲನೆಯ ಅನ್ಯಾಯ ಎನಿಸುತ್ತದೆ.

ಒಂದು ಶುಭ ಪ್ರಾತಃಕಾಲದಲ್ಲಿ, ಅವನಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ತೀರ್ಪುಗಳನ್ನು ಬರೆಯುವುದು ನಾವೆಣಿಸಿದಷ್ಟು ಸುಲಭವಲ್ಲ. ಹಿಂದಿನ ಕಾಲದಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಿದ ಉಲ್ಲೇಖಗಳು ಬಹಳಷ್ಟಿವೆ. ಆದರೆ ಶಿಲಾಶಾಸನಗಳಲ್ಲಿ ಅಡಕವಾಗಿರುವ ಒಂದೆರಡು ತೀರ್ಪುಗಳನ್ನು ಬಿಟ್ಟರೆ ವಿಜಯನಗರದ ಅರಸರ ಪೂರ್ವಕಾಲದ ಕನ್ನಡ ತೀರ್ಪುಗಳು ನಮಗೆ ಲಭ್ಯವಿಲ್ಲ.

1864ರಲ್ಲಿ ಪ್ರಕಟವಾದ ರೇಮಂಡ್ ವೆಸ್ಟ್ ಅವರ ಬಾಂಬೆ ಹೈಕೋರ್ಟಿನ ತೀರ್ಪುಗಳ ಭಾಷಾಂತರವೇ ನಮಗೆ ಸಿಗುವ ಮೊದಲ ಕನ್ನಡ ತೀರ್ಪುಗಳ ಪುಸ್ತಕವೆಂದು ಹೇಳಬಹುದು. ಹೀಗೆ ಕನ್ನಡ ಮಾಧ್ಯಮದಲ್ಲಿ ಕಾನೂನು ಶಿಕ್ಷಣ ಪಡೆಯಬೇಕೆನ್ನುವ ವಿದ್ಯಾರ್ಥಿಗೇ ಆಗಲಿ, ಪ್ರಾಧ್ಯಾಪಕರು, ವಕೀಲರು ಅಥವಾ ನ್ಯಾಯಾಧೀಶರಿಗೇ ಆಗಲಿ ಸುಲಭವಾಗಿ ಬಳಸಿಕೊಳ್ಳಬಹುದಾದ ಭಾಷೆಯ ಪರಂಪರೆ ಇಲ್ಲದಿರುವುದೇ ಮುಖ್ಯವಾದ ಕೊರತೆ.

ರಾಜ್ಯ ಪುನರ್‌ವಿಂಗಡಣೆಯ ನಂತರ ಮೈಸೂರು, ಮುಂಬೈ, ಮದ್ರಾಸ್, ಹೈದರಾಬಾದ್, ಕೊಡಗು ಪ್ರಾಂತ್ಯದ ಪ್ರದೇಶಗಳು ರಾಜಕೀಯವಾಗಿ ಒಂದಾದವು. ಆದರೆ ಆ ಪ್ರದೇಶದಲ್ಲಿ ಪ್ರಚಲಿತವಿದ್ದ ಭಾಷೆ ಹಾಗೇ ಉಳಿದುಕೊಂಡಿತು. ಕೈಫಿಯತ್ ಎಂದರೆ ಬೆಳಗಾವಿಯಲ್ಲಿ ರಿಟನ್ ಸ್ಟೇಟ್‌ಮೆಂಟ್, ಮೈಸೂರಿನಲ್ಲಿ ಡಿಪೊಜಿಶನ್ ಎಂದರ್ಥ. ದರಖಾಸ್ತು ಎಂದರೆ ಬೆಳಗಾವಿಯಲ್ಲಿ ಎಕ್ಸಿಕ್ಯೂಶನ್, ಮೈಸೂರಿನಲ್ಲಿ ಗ್ರ್ಯಾಂಟ್ ಆಫ್ ಗೌರ್ನಮೆಂಟ್ ಲ್ಯಾಂಡ್. ಧಾರವಾಡ ಕರ್ನಾಟಕದ 'ಮನಾಯಿ', 'ತುರ್ತಾ ತುರ್ತ ಮನಾಯಿ' ಎಷ್ಟು ಜನರಿಗೆ ಅರ್ಥವಾಗುತ್ತದೆ? ಮನಾಯಿ ಎಂದರೆ ಇಂಜಕ್ಷನ್. ಹೀಗೆ ವಿವಿಧ ಪ್ರದೇಶಗಳಲ್ಲಿ ಪ್ರಚಲಿತವಿರುವ ಶಬ್ದಗಳನ್ನು ಸಂಗ್ರಹಿಸಿ ಪ್ರಕಟಿಸುವುದು ತೀರಾ ಅವಶ್ಯ. ಆದರೆ ಅವು ಸಂಸ್ಕೃತ ಅಥವಾ ಹಿಂದಿ ಭೂಯಿಷ್ಟವಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಆರಕ್ಷಕ ಅಂದರೆ ಏನು? ಬಾಯಿ ತಪ್ಪಿನಿಂದ ಆರಕ್ಷಕದಲ್ಲಿರುವ 'ಆ' ಎಂಬುದು 'ಅ' ಆಗಿಬಿಟ್ಟರೆ ಗತಿಯೇನು? ಅರಕ್ಷಕ!

ಕಾನೂನು ಪರಿಭಾಷೆಯ ಶಬ್ದಭಂಡಾರ ಬೆಳೆಯಬೇಕಾದರೆ ಒಂದು ಬೃಹತ್ ನಿಘಂಟಿನ (Law Lexicon) ತುರ್ತು ಅಗತ್ಯವಿದೆ. ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಬಳಸುವ ಭಾಷೆ ಕನ್ನಡವಾಗಿರುವುದು ಅವಶ್ಯಕವಾದ ಇನ್ನೊಂದು ಅಂಶ. ಈ ದಿಸೆಯಲ್ಲಿ ರಾಜ್ಯದ ಪೊಲೀಸ್ ಇಲಾಖೆ ಮೊದಲಿನಿಂದಲೂ ತನ್ನ ದಾಖಲೆಗಳನ್ನು, ಸಾಕ್ಷ್ಯ, ಪುರಾವೆಗಳನ್ನು ಕನ್ನಡದಲ್ಲಿ ಸಿದ್ಧಪಡಿಸುತ್ತಿರುವುದು ಪ್ರಶಂಸನೀಯ.

ಕನ್ನಡದಲ್ಲಿ ಹೆಚ್ಚಿನ ಕಾನೂನು ಗ್ರಂಥಗಳ ಅಗತ್ಯವಿದೆ. ಕನ್ನಡ ಪಠ್ಯಪುಸ್ತಕಗಳಿಲ್ಲದೇ ಕಾನೂನು ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಲಾಗದು. ಹೀಗಾಗಿ ಈ ಕೆಲಸ ಸಮರೋಪಾದಿಯಲ್ಲಿ ಆರಂಭವಾಗಬೇಕು. ವಿವಿಧ ಕೋರ್ಟುಗಳ ಮಹತ್ವದ ತೀರ್ಪುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವ ನಿಯತಕಾಲಿಕದ ಅವಶ್ಯಕತೆ ಇದೆ.



1980ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಪ್ರಥಮವಾಗಿ ಕಾನೂನು ಸಾಹಿತ್ಯ ಗೋಷ್ಠಿ ಏರ್ಪಡಿಸಲಾಗಿತ್ತು. ಕಸಾಪದ ಆಗಿನ ಅಧ್ಯಕ್ಷ ಡಾ. ಹಂಪ ನಾಗರಾಜಯ್ಯ ಈ ಸಂದರ್ಭದಲ್ಲಿ, ರಾಜ್ಯದ ಐಎಲ್‌ಆರ್‌ಗಳಲ್ಲಿ (ಇಂಡಿಯನ್ ಲಾ ರಿಪೋರ್ಟರ್) ವರದಿಯಾಗುವ ತೀರ್ಪುಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ಕೋರಿದ್ದ ಮನವಿಗೆ ಹೈಕೋರ್ಟ್ ಒಪ್ಪಿತ್ತು. ಆದರೆ ಅಂಥ ಪ್ರಕಟಣೆ ಕಾರ್ಯಗತವಾಗಲೇ ಇಲ್ಲ. ಅದು ಹೋಗಲಿ, ಕಸಾಪ ಇದೀಗ ಹಾವೇರಿಯಲ್ಲಿ ಆಯೋಜಿಸಿರುವ ಸಾಹಿತ್ಯ ಸಮ್ಮೇಳನದಲ್ಲಿ ಕಾನೂನು ಸಾಹಿತ್ಯ ಗೋಷ್ಠಿಯ ಪ್ರಸ್ತಾಪವಿಲ್ಲ. ಅಂದರೆ ಕಳೆದ 40 ವರ್ಷಗಳಲ್ಲಿ ಎರಡು–ಮೂರು ಸಮ್ಮೇಳನಗಳಲ್ಲಿ ಮಾತ್ರ ಕಾನೂನು ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸಲಾಗಿದೆ. ಕಾನೂನು ತಜ್ಞರು ಮುಕ್ತವಾಗಿ ಚರ್ಚಿಸಲು ಈ ಬಗೆಯ ವೇದಿಕೆ ಅವಶ್ಯ.

ಕಾನೂನು ಪಧವೀಧರನಾಗಿ ನ್ಯಾಯಾಲಯಗಳಲ್ಲಿ ಇಂಗ್ಲಿಷಿನಲ್ಲಿ ವಾದ ಮಂಡಿಸಿ, ನ್ಯಾಯಾಧೀಶನಾಗಿ ಸತತ 30 ವರ್ಷ ಇಂಗ್ಲಿಷಿನಲ್ಲಿ ತೀರ್ಪುಗಳನ್ನಿತ್ತು, ನಾನು ನನ್ನ ಮುಂದೆ ಬಂದಿದ್ದ ಕಕ್ಷಿದಾರರಿಗೆ ಮೋಸ ಮಾಡಿದೆನೇ ಎನ್ನುವ ಪ್ರಾಮಾಣಿಕ ಅನಿಸಿಕೆ ನನ್ನನ್ನು ಕಾಡುತ್ತಿದೆ. ಇಂಥ ಪಾಪಪ್ರಜ್ಞೆ ಬಹಳಷ್ಟು ನ್ಯಾಯಾಧೀಶರನ್ನು ಕಾಡುತ್ತಿದೆ. ಅಂಥವರನ್ನು ಈ ಗೊಂದಲದಿಂದ ಪಾರು ಮಾಡುವ ಏಕೈಕ ಉಪಾಯವೆಂದರೆ, ಕಾನೂನು ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿಯೇ ಕೊಡುವುದಾಗಿದೆ.

ಲೇಖಕ: ನಿವೃತ್ತ ಜಿಲ್ಲಾ ನ್ಯಾಯಾಧೀಶ

ವಾಚಕರ ವಾಣಿ

ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಅಮಾಯಕರ ಬಲಿ

ಬೆಂಗಳೂರಿನಲ್ಲಿ ಜಲಮಂಡಳಿ ಕಾಮಗಾರಿ ಸಲುವಾಗಿ ತೋಡಿದ್ದ ಗುಂಡಿಯಲ್ಲಿ ಬಿದ್ದು ಇತ್ತೀಚೆಗೆ ದ್ವಿಚಕ್ರ ವಾಹನ ಸವಾರರೊಬ್ಬರು ಮೃತಪಟ್ಟ ಘಟನೆ ನಿಜಕ್ಕೂ ಆಡಳಿತ ವ್ಯವಸ್ಥೆ ತಲೆ ತಗ್ಗಿಸುವಂಥದ್ದು. ತನ್ನದಲ್ಲದ ತಪ್ಪಿನಿಂದ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಅಮಾಯಕರು ಬಲಿಯಾಗುತ್ತಿರುವುದು ಹೊಸದೇನಲ್ಲ. ರಸ್ತೆ ಗುಂಡಿಗೆ ಬಿದ್ದು ಬೈಕ್ ಸವಾರರು ಮೃತಪಡುವುದು, ಮಳೆ ಬಂದಾಗ ರಾಜಕಾಲುವೆಯಲ್ಲಿ ಕೊಚ್ಚಿ ಹೋಗುವುದು... ಹೀಗೆ ನಾನಾ ನಿರ್ಲಕ್ಷ್ಯಗಳಿಗೆ ಇನ್ನೆಷ್ಟು ಮುಗ್ಧ ಜೀವಗಳು ಬಲಿಯಾಗಬೇಕೋ.

ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಅನುದಾನ ಪಡೆಯುವ ಸಂಸ್ಥೆಗಳು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿದರೆ ಹಾಗೂ ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಮುಗಿಸಿದರೆ ಇಂತಹ ಅವಘಡಗಳನ್ನು ತಪ್ಪಿಸಬಹುದು. ಬೆಂಗಳೂರಿನಂತಹ ಮಹಾನಗರದಲ್ಲಿ ಸಂಚಾರ ದಟ್ಟಣೆ ಅತಿಯಾಗಿರುವುದರಿಂದ ಕಡ್ಡಾಯವಾಗಿ ಸೂಚನಾ ಫಲಕಗಳನ್ನು ರಾತ್ರಿ ವೇಳೆಯೂ ಕಾಣಿಸುವಂತೆ ಹಾಕಿ, ಕಾಮಗಾರಿ ಮುಗಿಯುವವರೆಗೆ ಬ್ಯಾರಿಕೇಡ್‌ಗಳು, ರಿಫ್ಲೆಕ್ಟರ್‌ಗಳನ್ನು ಅಳವಡಿಸಬೇಕು. ಆಗ ಇಂತಹ ಅನಾಹುತಗಳನ್ನು ತಪ್ಪಿಸಬಹುದು. ಇಂತಹ ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕ್ರಿಮಿನಲ್ ದೂರು ದಾಖಲಿಸಿ ಆದಷ್ಟು ಬೇಗ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಅವಶ್ಯ. ಇಲ್ಲವಾದರೆ ಎಷ್ಟೋ ಕುಟುಂಬಗಳಿಗೆ ಆಧಾರವಾಗಿರುವ ಜೀವಗಳು ಬಲಿಯಾಗಿ ಸಂಸಾರಗಳು ಬೀದಿಪಾಲಾಗಬೇಕಾಗುತ್ತದೆ. ಇದು ಪರೋಕ್ಷವಾಗಿ ದೇಶದ ಅಭಿವೃದ್ಧಿಗೆ ಹಿನ್ನಡೆಯೇ ಆಗಿರುವುದರಿಂದ ಅಧಿಕಾರಿಗಳು ಜವಾಬ್ದಾರಿಯನ್ನು ಅರಿತು ನಿಷ್ಠೆಯಿಂದ ಮೇಲ್ವಿಚಾರಣೆ ನಡೆಸಿ ಅವಘಡಗಳನ್ನು ತಪ್ಪಿಸಬೇಕು.

ಪುಷ್ಪಲತಾ ಎಂ., ಟಿ.ನರಸೀಪುರ

ಕಲ್ಯಾಣ ಕರ್ನಾಟಕ: ಬೇಕು ಅಭಿವೃದ್ಧಿಯ ಛಲ

ಕಲ್ಯಾಣ ಕರ್ನಾಟಕ ಹಿಂದುಳಿದಿರುವ ಬಗ್ಗೆ ಮಂಜುನಾಥ್ ಎಸ್. ಅವರು ಎತ್ತಿರುವ ಪ್ರಶ್ನೆಗಳು (ವಾ.ವಾ., ಸೆ. 20) ಸಮಂಜಸವಾಗಿವೆ. ಜನಪ್ರತಿನಿಧಿಗಳು ಮನಸ್ಸು ಮಾಡಿದರೆ ಯಾವುದೇ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಪಡಿಸುವುದು ಕಷ್ಟದ ಕೆಲಸವೇನೂ ಅಲ್ಲ. ಆದರೆ ಅದಕ್ಕೆ ಬೇಕಾಗಿರುವುದು ಅವರನ್ನು ಆಯ್ಕೆ ಮಾಡಿ ಕಳುಹಿಸಿದ ಜನರ ಹಾಗೂ ನೆಲದ ಋಣ ತೀರಿಸುವ ಮನೋಭಾವ, ಅಭಿವೃದ್ಧಿಪಡಿಸಲೇಬೇಕೆನ್ನುವ ಛಲ.

ಇದ್ಯಾವುದರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದೆ ಸ್ವಯಂ ಅಭಿವೃದ್ಧಿ ಮಾಡಿಕೊಂಡು ಕಾಲ ತಳ್ಳುತ್ತಿರುವ ಜನಪ್ರತಿನಿಧಿಗಳಿಗೆ ಜನರೇ ಸರಿಯಾದ ಪಾಠ ಕಲಿಸುವುದು ಅನಿವಾರ್ಯವಾಗಿದೆ.

ಕೆ.ಪ್ರಭಾಕರ, ಬೆಂಗಳೂರು

ಭಗವಂತನಿಗೇ ರಕ್ಷಣೆ!

ನಾವು ಚಿಕ್ಕವರಿದ್ದಾಗ ಊರಿಗೆ ಒಂದೆರಡು ದೇವಸ್ಥಾನಗಳು ಮಾತ್ರ ಇರುತ್ತಿದ್ದವು. ಆಗ ಜನರೂ ಬಡವರು ಅದರಂತೆ ದೇವರುಗಳೂ ಬಡವಾಗಿದ್ದವು. ಈಗಿನ ದಿನಗಳಲ್ಲಿ ಪೂಜೆ, ಜಾತ್ರೆ, ಯಾತ್ರೆಗಳು ವಿಪರೀತ ಹೆಚ್ಚಿವೆ. ಭವ್ಯ ಮಂದಿರಗಳ ನಿರ್ಮಾಣವೇ ನಮ್ಮ ಬಹುಮುಖ್ಯ ಆದ್ಯತೆ ಆಗಿಹೋಗಿದೆ. ಈಗ ಯೋಚಿಸಬೇಕಾದದ್ದು ಎಲ್ಲೆಲ್ಲೂ ಗುಡಿ, ಚರ್ಚು, ಮಸೀದಿಗಳ ನಿರ್ಮಾಣದಿಂದ ಆಗುವ ತೊಂದರೆಗಳ ಬಗ್ಗೆ. ಬಹಳಷ್ಟು ಪ್ರಾರ್ಥನಾ ಮಂದಿರಗಳು ನಿರ್ಮಾಣವಾಗುವುದು ಸಾರ್ವಜನಿಕ ರಸ್ತೆ, ಕೆರೆ, ಬೆಟ್ಟಗಳಲ್ಲಿ. ಹೆಚ್ಚು ಜನನಿಬಿಡ ರಸ್ತೆಗಳಂತೂ ದೇವರಿಗೆ ಬಲು ಪ್ರೀತಿ. ಬಡಾವಣೆಗಳಲ್ಲಿ ಕಡ್ಡಾಯವಾಗಿ ಬಿಡಬೇಕಾದ ಉದ್ಯಾನದ ಜಾಗಗಳು ಹಲವೆಡೆ ಪ್ರಾರ್ಥನಾ ಮಂದಿರಗಳಿಗೆ ಮೀಸಲಾಗಿ ಹೋಗಿವೆ.

ಇಂತಹ ಕಡೆ ನಿರ್ಮಾಣ ಕಾರ್ಯಗಳಿಗೆ ಮಿತಿ ಇರುವುದಿಲ್ಲ. ಧಾರ್ಮಿಕ ರಚನೆಗಳಿಗೆ ಹೊಂದಿಕೊಂಡು ಸಮುದಾಯ ಭವನ, ಮಂಗಲ ಮಂಟಪ, ವಾಣಿಜ್ಯ ಚಟುವಟಿಕೆ ಬೆಳೆಯುತ್ತ ಹೋಗಿ ಸುತ್ತಲಿನ ಶಾಂತ ವಾತಾವರಣವನ್ನು ಕದಡುತ್ತ ಹೋಗುತ್ತವೆ. ತೊಂದರೆಗೊಳಗಾದ ಯಾರೋ ಶ್ರೀಸಾಮಾನ್ಯ ಕೋರ್ಟಿನ ಮೊರೆ ಹೋಗುತ್ತಾನೆ. ಆಗ, ಜನರ ಹಕ್ಕಿನ ರಕ್ಷಣೆಗೆ ಅಕ್ರಮ ನಿರ್ಮಾಣಗಳನ್ನು ತೆರವುಗೊಳಿಸಲು ಕೋರ್ಟು ಆದೇಶ ಹೊರಡಿಸುತ್ತದೆ. ಆದರೆ ಯಾರು ಹೇಳಿದರೂ ನಾವು ಧಾರ್ಮಿಕ ರಚನೆಗಳ ತೆರವಿಗೆ ಬಿಡುವುದಿಲ್ಲ ಎಂದು ರಾಜಕಾರಣಿಗಳು ಪಕ್ಷಾತೀತವಾಗಿ ಒಂದಾಗಿ ವಿರೋಧಿಸುತ್ತಾರೆ. ಅಸಹಾಯಕ ಮನುಷ್ಯನಿಗೆ ಯಾರೂ ಇಲ್ಲ, ಸರ್ವಶಕ್ತನಾದ ಭಗವಂತನ ರಕ್ಷಣೆಗೆ ಎಷ್ಟೊಂದು ಜನ!

ಪ್ರೊ. ಶಶಿಧರ ಪಾಟೀಲ್, ಬಾಗಲಕೋಟೆ

ವಾಸ್ತವದ ನೆಲೆಗಟ್ಟಿನ ಹೇಳಿಕೆ

'ವಿಧಾನಸಭೆ ಚುನಾವಣೆ ಗೆಲ್ಲಲು ಕೇವಲ ಮೋದಿ ಅಲೆಯೊಂದೇ ಸಾಲದು' ಎಂಬ ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಅವರ ಹೇಳಿಕೆ (ಪ್ರ.ವಾ., ಸೆ. 20), ಪಕ್ಷದ ಆಂತರಿಕ ವಿಚಾರವನ್ನು ಪರಿಗಣಿಸಿ ಹೇಳುವುದಾದರೆ ಅತ್ಯಂತ ಧೈರ್ಯದ ಮಾತು. ಅವರ ಅಭಿಪ್ರಾಯವು ಕಟುಸತ್ಯವನ್ನು ವಿವರಿಸುವ ಮೂಲಕ ಚರ್ಚೆಗೆ ಗ್ರಾಸ ಒದಗಿಸಿದೆ. ಅಷ್ಟೇ ಅಲ್ಲ, ಮುಖ್ಯಮಂತ್ರಿ ಕುರ್ಚಿಯಿಂದ ಇಳಿದ ನಂತರದ ಯಡಿಯೂರಪ್ಪ ಅವರ ಈ ಹೇಳಿಕೆ ಮಹತ್ವ ಪಡೆದಿದೆ.

ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬದ ನೆಲೆಗಟ್ಟಿನ ಸಿದ್ಧಾಂತದಲ್ಲಿಯೇ ಯಾವುದೇ ರಾಜಕೀಯ ಪಕ್ಷ ಬೆಳೆಯುವುದಿಲ್ಲ ಎಂಬುದನ್ನು ಒಪ್ಪಲೇಬೇಕಾಗಿದೆ. ಘಟಾನುಘಟಿ ನಾಯಕರಿದ್ದರೂ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕುಟುಂಬದ ಪರಿಧಿಯನ್ನು ದಾಟಿ ಯೋಚಿಸುವ ಶಕ್ತಿ ಕುಂದಿಸಿಕೊಂಡಿರುವ ಕಾಂಗ್ರೆಸ್‌ಗೆ ಎರಡು ವರ್ಷಗಳಾದರೂ ಪೂರ್ಣಾವಧಿ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ನರೇಂದ್ರ ಮೋದಿಯವರನ್ನೇ ಮುಂದಿಟ್ಟುಕೊಂಡು ಎಲ್ಲಿಯವರೆಗೆ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯ ಎಂಬ ವಿಚಾರದಲ್ಲಿ ಯಡಿಯೂರಪ್ಪ ಹೇಳಿದ್ದು ಸರಿಯಾಗಿಯೇ ಇದೆ. ವ್ಯಕ್ತಿ ಅಥವಾ ಕುಟುಂಬದ ಜನಪ್ರಿಯತೆ ಕೆಲ ವರ್ಷಗಳವರೆಗೆ ಅನುಕೂಲಕರವಾಗಬಹುದು. ಆದರೆ ಅದೇ ಪರಂಪರೆ ಮುಂದುವರಿಸುವುದು ಎಷ್ಟರಮಟ್ಟಿಗೆ ಸರಿ?

ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುವ ದಿಸೆಯಲ್ಲಿ ಸದೃಢ ಆಡಳಿತ ಮತ್ತು ವಿರೋಧ ಪಕ್ಷಗಳ ಅಗತ್ಯವಿದೆ ಎನ್ನುವುದಾದರೆ, ಸಾಮೂಹಿಕ ನಾಯಕತ್ವದಲ್ಲಿ ರಾಜಕೀಯ ಪಕ್ಷಗಳು ಬೆಳೆಯಬೇಕು. ಇಂಥ ಸಂಗತಿಯಿಂದಲೇ ಹಿಂದೆ ರಾಜ್ಯದಲ್ಲಿ 80- 90ರ ದಶಕದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ರಾಜಕೀಯ ಪಕ್ಷಗಳಿಗೆ ವ್ಯಕ್ತಿ ಅಥವಾ ಕುಟುಂಬದ ಅವಲಂಬನೆ ಎಲ್ಲಿವರೆಗೆ? ಅವರು ಇಲ್ಲವೆಂದರೆ ಮುಂದೇನು ಎಂಬುದರತ್ತ ಆಲೋಚನೆ ಮಾಡುವ ಕಾಲ ಸನ್ನಿಹಿತವಾಗಿದೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ಬಿಜೆಪಿಯ ಜಾತಿ ಪ್ರೀತಿ

• ಸತೀಶ್ ಝಾ

ಬಿಜೆಪಿಯ ರಾಜಕಾರಣದಲ್ಲಿ ಗುಜರಾತ್‌ಗೆ ಕೇಂದ್ರ ಸ್ಥಾನವಿದೆ. ಆದರೆ, ಈಗ ಗುಜರಾತ್‌ನಲ್ಲಿ ತನ್ನ ಜನಪ್ರಿಯತೆ ಕುಸಿದಿದೆ ಮತ್ತು ಅದಕ್ಕಾಗಿ ಹೆಚ್ಚು ಬೆಲೆ ತೆರಬೇಕಾಗಬಹುದು ಎಂಬುದನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ಆ ಜನಪ್ರಿಯತೆ ಮರಳಿ ಪಡೆಯಲು ಮತ್ತು ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಏನು ಬೇಕಾದರೂ ಮಾಡುತ್ತದೆ. ಸೆಪ್ಟೆಂಬರ್ 12ರಂದು ಬಿಜೆಪಿಯ ವರಿಷ್ಠರು ಇಂಥದ್ದೇ ಒಂದು ಅಸಾಧಾರಣ ನಿರ್ಧಾರ ಕೈಗೊಂಡರು. ಮುಖ್ಯಮಂತ್ರಿ ವಿಜಯ ರೂಪಾಣಿ ಅವರ ರಾಜೀನಾಮೆ ಪಡೆದರು.

ಮೊದಲ ಬಾರಿ ಶಾಸಕರಾಗಿರುವ ಭೂಪೇಂದ್ರ ಪಟೇಲ್ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಯಿತು. ನಂತರ, ಆಡಳಿತದ ಅನುಭವವೇ ಇಲ್ಲದ 24 ಮಂದಿ ಸಚಿವರಾಗಿ ಆಯ್ಕೆಯಾದರು. ಈ ಸಂಪುಟ ಸರ್ಜರಿಯನ್ನು ಬಿಜೆಪಿ 'ಅಭಿನವ ಪ್ರಯೋಗ' ಎಂದು ಕರೆಯಿತು. ಬಿಜೆಪಿ ಈ ಬದಲಾವಣೆಯನ್ನು ಹೀಗೆ ಆಕರ್ಷಕ ಹೆಸರಿನಿಂದ ಕರೆದಿದ್ದರೂ, ಅನಿಶ್ಚಿತ ಸ್ಥಿತಿಯೇ ಈ ನಡೆಯ ಹಿಂದಿನ ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. 27 ವರ್ಷಗಳಿಂದ ಅಧಿಕಾರದಲ್ಲಿರುವ ಪಕ್ಷವು ಈಗ ತೀವ್ರ ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿದೆ.

2016ರಲ್ಲಿ ಜೈನ ಸಮುದಾಯದ ವಿಜಯ ರೂಪಾಣಿ ಅವರನ್ನು ಮುಖ್ಯಮಂತ್ರಿಯಾಗಿ ಬಿಜೆಪಿ ಆಯ್ಕೆ ಮಾಡಿತ್ತು. ಧಾರ್ಮಿಕ ಅಲ್ಪಸಂಖ್ಯಾತರಾಗಿದ್ದರೂ, ಹೆಚ್ಚು ಪ್ರಭಾವವಿರುವ ಸಮುದಾಯವದು. ಬಿಜೆಪಿಗೇ ಬೆಂಬಲ ನೀಡುತ್ತಿದ್ದ ಪಾಟೀದಾರ್ ಸಮುದಾಯವು ಮೀಸಲಾತಿಗಾಗಿ ಆಗ್ರಹಿಸಿ ಮರುವರ್ಷವೇ ಹೋರಾಟ ನಡೆಸಿತು. ಹಾರ್ದಿಕ್ ಪಟೇಲ್ ನೇತೃತ್ವದಲ್ಲಿ ಈ ಹೋರಾಟ ತೀವ್ರತೆ ಪಡೆಯಿತು. ಹಾರ್ದಿಕ್ ಕಾಂಗ್ರೆಸ್ ಸೇರಿದರು. ಹಿಂದುಳಿದ ವರ್ಗಗಳ ನಾಯಕ ಅಲ್ಪೇಶ್ ಠಾಕೂರ್ ಸಹ ಕಾಂಗ್ರೆಸ್ ಸೇರಿದರು. ದಲಿತ ನಾಯಕ ಜಿಗ್ನೇಶ್ ಮೆವಾನಿ ಕಾಂಗ್ರೆಸ್ ಬೆಂಬಲದೊಂದಿಗೆ ಚುನಾವಣೆ ಎದುರಿಸಿದರು. 2017ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಗೆ ತೀವ್ರ ಪೈಪೋಟಿ ನೀಡಿತು. ಬಿಜೆಪಿ ಪ್ರಯಾಸದ ಗೆಲುವು ಸಾಧಿಸಿತು.

ಚುನಾವಣೆಗೆ ಇನ್ನೂ 14 ತಿಂಗಳು ಬಾಕಿ ಇರುವಾಗ, ಮುಖ್ಯಮಂತ್ರಿ ಮತ್ತು ಇಡೀ ಸಂಪುಟವನ್ನು ಬಿಜೆಪಿ ಬದಲಿಸಿದೆ. ಬಿಜೆಪಿಯ ಈ ನೂತನ ಸಂಪುಟವನ್ನು ಗಮನಿಸಿದರೆ, ಪಕ್ಷವು ಈಗ ಜಾತಿಗಳ ಓಲೈಕೆಗೆ ಮುಂದಾಗಿರುವುದು ಗೊತ್ತಾಗುತ್ತದೆ. ಚುನಾವಣೆ ಗೆಲ್ಲಲು ಈ ತಂತ್ರ ಬಿಟ್ಟರೆ, ಬಿಜೆಪಿಗೆ ಬೇರೆ ದಾರಿಯಿಲ್ಲ. ಅಭಿವೃದ್ಧಿ ಮಂತ್ರವನ್ನು ಪಠಿಸಿ, ಚುನಾವಣೆ ಎದುರಿಸುವ ಸ್ಥಿತಿಯಲ್ಲಿ ಬಿಜೆಪಿ ಇಲ್ಲ. ಗುಜರಾತ್ ಅಭಿವೃದ್ಧಿ ಹೊಂದಿದ ರಾಜ್ಯ ಮತ್ತು ಅಭಿವೃದ್ಧಿಯಲ್ಲಿ ಗುಜರಾತ್ ಮಾದರಿ ಎಂಬ ಪರಿಕಲ್ಪನೆಗಳನ್ನು ಬಿಜೆಪಿ ಜನರ ಮುಂದೆ ಇರಿಸಿದೆ. ಈವರೆಗೆ ನಡೆಸಿದಂತೆ ಹಿಂದೂ ಮತದಾರರ ಧ್ರುವೀಕರಣ ಈ ಚುನಾವಣೆಯಲ್ಲಿ ಸಾಧ್ಯವಿಲ್ಲ. ಈಗ ಜಾತಿ ರಾಜಕಾರಣ ಮಾಡದೆ ಬಿಜೆಪಿಗೆ ಬೇರೆ ದಾರಿಯಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.


ಮುಖ್ಯಮಂತ್ರಿಯೂ ಸೇರಿ ಪಾಟೀದಾರ್ ಸಮುದಾಯದ 7 ಜನರಿಗೆ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಬಿಜೆಪಿಯಿಂದ ದೂರ ಸರಿದಿರುವ ಮತ್ತು ಬಿಜೆಪಿ ವಿರುದ್ಧ ತೀವ್ರ ಅಸಮಾಧಾನಗೊಂಡಿರುವ ಈ ಸಮುದಾಯಕ್ಕೆ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ದೊರೆತಿದೆ. 2017ರ ಚುನಾವಣೆಯಲ್ಲಿ ಬಿಜೆಪಿಯ ಕೈಬಿಟ್ಟಿದ್ದ ಪರಿಶಿಷ್ಟ ಪಂಗಡಕ್ಕೆ ನೂತನ ಸಂಪುಟದಲ್ಲಿ ನಾಲ್ಕು ಸ್ಥಾನ ನೀಡಲಾಗಿದೆ.


ರಿಮೋಟ್ ಕಂಟ್ರೋಲ್ ಮುಖ್ಯಮಂತ್ರಿ, ಕೋವಿಡ್ ನಿರ್ವಹಣೆಯಲ್ಲಿ ವಿಫಲರಾದ ಮುಖ್ಯಮಂತ್ರಿ ಎಂದು ಕಾರಣ ಒಡ್ಡಿ ರೂಪಾಣಿ ಅವರ ರಾಜೀನಾಮೆ ಪಡೆಯಲಾಗಿದೆ. ಹೊಸ ಮುಖ್ಯಮಂತ್ರಿ ಮತ್ತು ಸಚಿವರು, ಚುನಾವಣೆ ಎದುರಿಸುವಲ್ಲಿ ಪಕ್ಷಕ್ಕೆ ಶಕ್ತಿ ತುಂಬಲಿದ್ದಾರೆ ಎಂದು ಬಿಜೆಪಿ ಹೇಳುತ್ತಿದೆ. ಆದರೆ ಪಕ್ಷದ ಮುಖಂಡರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈವರೆಗೆ ಯಾರೂ ಮಾಡದೇ ಇರುವುದನ್ನು, ಪಕ್ಷದ ಈಗಿನ ನಾಯಕರು ಮಾಡಿದ್ದಾರೆ. ಇಡೀ ಸಚಿವ ಸಂಪುಟವನ್ನು ಹೇಗೆ ಕೈಬಿಡಲು ಸಾಧ್ಯ? ಆಡಳಿತ ವಿರೋಧಿ ಅಲೆಯನ್ನು ಎದುರಿಸಲು, ಅಂತಹ ನಾಯಕರಿಗೆ ಟಿಕೆಟ್ ನಿರಾಕರಿಸಬಹುದಿತ್ತು. ಆದರೆ ಏನೂ ಗೊತ್ತಿಲ್ಲದ ಶಾಸಕರ ಗುಂಪನ್ನು ಸಚಿವರನ್ನಾಗಿ ಮಾಡಲಾಗಿದೆ. ಅವರಲ್ಲಿ 10 ಮಂದಿ ಶಾಲಾ ಶಿಕ್ಷಣವನ್ನೂ ಪೂರ್ಣಗೊಳಿಸಿಲ್ಲ. ಇದು ನಿರಂಕುಶ ಪ್ರಭುತ್ವದ ಸೂಚನೆಯಷ್ಟೆ' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಟೀಕಿಸಿದ್ದಾರೆ.



ಇದೇ 16ರಂದು ಪ್ರಮಾಣವಚನದ ನಂತರ ಗುಜರಾತ್ ಸಚಿವರಿಂದ ಪರಸ್ಪರ ಶುಭಾಶಯ





ಗುಜರಾತಿನಲ್ಲಿ ಬಿಜೆಪಿ ಹಾದಿ (ವಿಧಾನಸಭಾ ಚುನಾವಣೆ)

	ಪಕ್ಷ	ಸೀಟು	ಶೇ ಮತಪ್ರಮಾಣ
2002	ಬಿಜೆಪಿ	127	49.85
	ಕಾಂಗ್ರೆಸ್	51	39.28
2007	ಬಿಜೆಪಿ	117	49.12
	ಕಾಂಗ್ರೆಸ್	59	38
2012	ಬಿಜೆಪಿ	115	47.85
	ಕಾಂಗ್ರೆಸ್	61	38.93
2017	ಬಿಜೆಪಿ	99	49.05
	ಕಾಂಗ್ರೆಸ್	77	41.44

ತಂಡ-ಸಿದ್ಧತೆ ಇಲ್ಲದ ಕಾಂಗ್ರೆಸ್

2017ರ ವಿಧಾನಸಭಾ ಚುನಾವಣೆಯಲ್ಲಿ ಹಾರ್ದಿಕ್ ಪಟೇಲ್, ಅಲ್ಪೇಶ್ ಠಾಕೂರ್ ಹಾಗೂ ಜಿಗ್ನೇಶ್ ಮೆವಾನಿ ಅವರ ಸಹಕಾರದಿಂದ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಬಹುತೇಕ ಸೋಲಿಸಿದಂತೆಯೇ ಆಗಿತ್ತು. ಈ ಚುನಾವಣೆಯಲ್ಲಿ ಬಿಜೆಪಿ 99 ಸ್ಥಾನಗಳಲ್ಲಿ ಗೆದ್ದಿದ್ದರೆ, ಕಾಂಗ್ರೆಸ್ 77 ಸ್ಥಾನಗಳಲ್ಲಿ ಜಯ ಗಳಿಸಿತ್ತು ಹಾಗೂ ಮಿತ್ರ ಪಕ್ಷಗಳು ಮೂರು ಸ್ಥಾನಗಳನ್ನು ಗೆದ್ದಿದ್ದವು.

ಆದರೆ, ನಂತರದಲ್ಲಿ ಎಂಟು ಶಾಸಕರು ಬಿಜೆಪಿ ಸೇರ್ಪಡೆಯಾಗಿದ್ದರಿಂದ ಕಾಂಗ್ರೆಸ್ ಶಾಸಕರ ಸಂಖ್ಯೆ ಕುಸಿಯಿತು.

ಇದರೊಂದಿಗೆ, ಬಿಜೆಪಿಯು ಈ ವರ್ಷದ ಆರಂಭದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಹೇಳಹೆಸರಿಲ್ಲದಂತೆ ಮಾಡಿತು. ಎಲ್ಲ 31 ಜಿಲ್ಲಾ ಪಂಚಾಯಿತಿಗಳಲ್ಲೂ ಗೆಲುವು ಸಾಧಿಸಿತು. 231 ತಾಲ್ಲೂಕು ಪಂಚಾಯಿತಿಗಳ ಪೈಕಿ 196ರಲ್ಲಿ ಹಾಗೂ 81 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 74ರಲ್ಲಿ ಗೆದ್ದಿತ್ತು. ಈ ಫಲಿತಾಂಶವು, ಗುಜರಾತ್‌ನ ಗ್ರಾಮೀಣ ಭಾಗದಲ್ಲಿ ಇದ್ದ ಕಾಂಗ್ರೆಸ್ ಪ್ರಾಬಲ್ಯ ಕೊಚ್ಚಿಹೋಗಿದ್ದನ್ನು ಸಾಬೀತುಪಡಿಸಿತು.

ತನ್ನವರನ್ನೆಲ್ಲ ತಂಡವಾಗಿ ಒಗ್ಗೂಡಿಸಿ ಕರೆದೊಯ್ಯುವುದೇ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಸವಾಲಾಗಿದೆ. ಕಳೆದ ವಿಧಾನಸಭೆ ಚುನಾವಣೆ ಮುಗಿದ ಸ್ವಲ್ಪ ದಿನಗಳ ನಂತರದಲ್ಲೇ ಶಾಸಕ ಅಲ್ಪೇಶ್ ಠಾಕೂರ್ ಬಿಜೆಪಿ ಸೇರ್ಪಡೆಯಾದರು. ಹಾರ್ದಿಕ್ ಪಟೇಲ್ ಅವರಿಗೆ ಗುಜರಾತ್ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷ ಸ್ಥಾನ ನೀಡಲಾಗಿದೆಯಾದರೂ, ಪಕ್ಷದಲ್ಲಿರುವವರು ಇನ್ನೂ ಅವರನ್ನು ಒಪ್ಪಿಕೊಂಡಿಲ್ಲ. ಇನ್ನು, ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದಿರುವ ಶಾಸಕ ಜಿಗ್ನೇಶ್ ಮೆವಾನಿಯನ್ನು ಪಕ್ಷಕ್ಕೆ ಕರೆತರುವ ಪ್ರಯತ್ನಗಳು ಮುಂದುವರಿದಿವೆ.

ತಲೆ ಎತ್ತಿದ ಎಎಪಿ

ಅರವಿಂದ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷವು (ಎಎಪಿ) ಗುಜರಾತ್ ಸ್ಥಳೀಯ ಚುನಾವಣೆಗಳಲ್ಲಿ ಗಮನಾರ್ಹ ಸಾಧನೆ ತೋರಿದೆ. ತನ್ನ ಮೊದಲ ಪ್ರಯತ್ನದಲ್ಲೇ ಸೂರತ್‌ನ ನಗರ ಪಾಲಿಕೆ ಚುನಾವಣೆ ಯಲ್ಲಿ 27 ಸ್ಥಾನಗಳನ್ನು ಗೆದ್ದಿರುವ ಎಎಪಿ, ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ 41 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳಿಗೆ ಸ್ಪರ್ಧೆ ಒಡ್ಡಿದೆ.

ಪಾಟೀದಾರ್ ಸಮುದಾಯದ ಗೋಪಾಲ್ ಇಟಾಲಿಯಾ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸುವ ಮೂಲಕ, ಎರಡೂ ಪಕ್ಷಗಳ ಯೋಜನೆಯನ್ನು ಬುಡಮೇಲು ಮಾಡಲಿದೆ ಎನ್ನಲಾಗುತ್ತಿದೆ.

ಇದಲ್ಲದೇ ಪಾಟೀದಾರ್ ಸಮುದಾಯಕ್ಕೆ ಸೇರಿದ ಪತ್ರಕರ್ತ ಇಸುದಾನ್ ಗಢ್ವಿ, ಸೂರತ್‌ನ ಪ್ರಮುಖ ಉದ್ಯಮಿ ಮಹೇಶ್ ಸಾವನಿ ಹಾಗೂ ರೈತ ಹೋರಾಟಗಾರ ಸಾಗರ್ ರಾಬರಿ ಅವರನ್ನು ಇತ್ತೀಚೆಗಷ್ಟೇ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಆಡಳಿತ ವಿರೋಧಿ ಅಲೆಯು ನಿಶ್ಚಿತವಾಗಿಯೂ ಬಿಜೆಪಿಗೆ ಹೊಡೆತ ನೀಡಬಹುದು; ಸಿದ್ಧತೆ ಇಲ್ಲದೇ ಇರುವುದು ಕಾಂಗ್ರೆಸ್‌ಗೆ ಮುಳುವಾಗಲಿದೆ. ಹೀಗಾಗಿ, ಈ ಅವಕಾಶವನ್ನು ಬಳಸಿಕೊಳ್ಳಲು ಎಎಪಿ ಕಾಯುತ್ತಿದೆ.



2019ರ ಮೇ 2ರಂದು ಸಿಡ್ನಿಯ ಗಾರ್ಡನ್ ದ್ವೀಪದಲ್ಲಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹಾಗೂ ಆಗಿನ ಆಸ್ಟ್ರೇಲಿಯಾ ಪ್ರಧಾನಿ ಮಾಲ್ಕಂ ಟರ್ನ್‌ಬುಲ್ ಒಟ್ಟಾಗಿ ಕಾಣಿಸಿಕೊಂಡಿದ್ದರು. ಫ್ರಾನ್ಸ್–ಆಸ್ಟ್ರೇಲಿಯಾ ನಡುವೆ ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದವಾಗಿತ್ತು —ಎಎಫ್‌ಪಿ ಸಂಗ್ರಹ ಚಿತ್ರ

ಜಲಾಂತರ್ಗಾಮಿ ನೌಕೆ ಖರೀದಿ ರದ್ದುಪಡಿಸಿದ ಆಸ್ಟ್ರೇಲಿಯಾ

ವಿವಾದ ಸೃಷ್ಟಿಸಿದ ಒಪ್ಪಂದ ರದ್ದತಿ

ವಾಷಿಂಗ್ಟನ್, ಕ್ಯಾನ್‌ಬೆರಾ (ರಾಯಿಟರ್ಸ್, ಎಪಿ, ಎಎಫ್‌ಪಿ): ಜಲಾಂತರ್ಗಾಮಿ ನೌಕೆಗಳನ್ನು ಖರೀದಿಸಲು ಫ್ರಾನ್ಸ್ ಹಾಗೂ ಆಸ್ಟ್ರೇಲಿಯಾ ನಡುವೆ ಆಗಿದ್ದ ಒಪ್ಪಂದ ರದ್ದುಗೊಂಡಿರುವುದು ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಸೃಷ್ಟಿಸಿದೆ.

ಅಮೆರಿಕ ಹಾಗೂ ಬ್ರಿಟನ್ ಜೊತೆ ಹೊಸ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಫ್ರಾನ್ಸ್‌ನೊಂದಿಗೆ ಈ ಮೊದಲು ಮಾಡಿಕೊಂಡಿದ್ದ ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದವನ್ನು ಆಸ್ಟ್ರೇಲಿಯಾ ಕೈಬಿಟ್ಟಿದೆ. ಇದರಿಂದ ತೀವ್ರ ಆಕ್ರೋಶಗೊಂಡಿರುವ ಫ್ರಾನ್ಸ್, ಬ್ರಿಟನ್‌ನ ಸಶಸ್ತ್ರಪಡೆಗಳ ಸಚಿವರ ಜೊತೆ ಈ ವಾರ ನಡೆಯಬೇಕಿದ್ದ ಸಭೆಯನ್ನು ರದ್ದುಗೊಳಿಸಿದೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಫ್ರಾನ್ಸ್, ಅಮೆರಿಕ ಹಾಗೂ ಆಸ್ಟ್ರೇಲಿಯಾದಲ್ಲಿರುವ ತನ್ನ ರಾಯಭಾರಿಗಳನ್ನು ವಾಪಸ್ ಕರೆಸಿಕೊಂಡಿರುವುದು ಬಿಕ್ಕಟ್ಟನ್ನು ಇನ್ನಷ್ಟು ಜಟಿಲಗೊಳಿಸಿದೆ.

ಫ್ರಾನ್ಸ್‌ನಿಂದ 12 ಸಾಂಪ್ರದಾಯಿಕ ಡೀಸೆಲ್ ಚಾಲಿತ ಜಲಾಂತರ್ಗಾಮಿ ನೌಕೆ ಖರೀದಿಗೆ ಆಸ್ಟ್ರೇಲಿಯಾ ಒಪ್ಪಂದ ಮಾಡಿಕೊಂಡಿತ್ತು. ಇದು ಸುಮಾರು ₹5 ಲಕ್ಷ ಕೋಟಿ ಮೊತ್ತದ ವ್ಯವಹಾರ. ಆದರೆ, ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಆಸ್ಟ್ರೇಲಿಯಾ ಮತ್ತು ಬ್ರಿಟನ್ ಜೊತೆಗೆ ಇತ್ತೀಚೆಗೆ ಹೊಸ ಮೈತ್ರಿಕೂಟ ಘೋಷಿಸಿದ್ದರು. ಅಣು ಇಂಧನ ಚಾಲಿತ ಎಂಟು ಜಲಾಂತರ್ಗಾಮಿ ನೌಕೆಗಳನ್ನು ಆಸ್ಟ್ರೇಲಿಯಾದ ನೌಕಾಪಡೆಗೆ ನೀಡುವುದಾಗಿ ಮಾತುಕತೆಯಾಗಿತ್ತು. ಹೀಗಾಗಿ ಫ್ರಾನ್ಸ್ ಜೊತೆಗಿನ ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದವನ್ನು ಆಸ್ಟ್ರೇಲಿಯಾ ಕೈಬಿಟ್ಟಿತ್ತು.

ಈ ವಿವಾದದ ನಡುವೆ, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ಕ್ವಾಡ್ ಸಭೆಯಲ್ಲಿ ಭಾಗಿಯಾಗಲು ಅಮೆರಿಕಕ್ಕೆ ಸೋಮವಾರ ಭೇಟಿ ನೀಡಿದ್ದಾರೆ. ವಿವಾದದ ಬಗ್ಗೆ ವಿಷಾದ ವ್ಯಕ್ತಪಡಿಸಿರುವ ಅವರು, ಫ್ರಾನ್ಸ್ ಜೊತೆ ಉಂಟಾಗಿರುವ ಉದ್ವಿಗ್ನತೆಯನ್ನು ತಗ್ಗಿಸಲು ಯತ್ನಿಸಿದ್ದಾರೆ. ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರನ್ನು ಭೇಟಿ ಮಾಡಿ, ಫ್ರಾನ್ಸ್‌ನ ಸಿಟ್ಟು ಶಮನ ಮಾಡುವ ಬಗ್ಗೆ ಚರ್ಚಿಸಲಿದ್ದಾರೆ.

ಐರೋಪ್ಯ ಒಕ್ಕೂಟದ ವಿದೇಶಾಂಗ ಸಚಿವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸಭೆ ಸೇರಲಿದ್ದು, ಈ ವಿಚಾರವಾಗಿ ಚರ್ಚಿಸಲಿದ್ದಾರೆ.

ಮಾತುಕತೆಗೆ ಬೈಡನ್ ಒಲವು: ಮುನಿಸಿಕೊಂಡಿರುವ ಮಿತ್ರನ ಜೊತೆ ಶೀಘ್ರದಲ್ಲಿ ಮಾತುಕತೆ ನಡೆಸಲು ಬೈಡನ್ ಒಲವು ತೋರಿದ್ದಾರೆ. ಬೈಡನ್ ಕೋರಿಕೆಯ ಮೇರೆಗೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಜತೆಗೆ ಬರುವ ದಿನಗಳಲ್ಲಿ ದೂರವಾಣಿ ಸಂಭಾಷಣೆ ಏರ್ಪಾಡು ಮಾಡುವುದಾಗಿ ಫ್ರೆಂಚ್ ಸರ್ಕಾರದ ವಕ್ತಾರ ಗೇಬ್ರಿಯಲ್ ಅಟಲ್ ಹೇಳಿದ್ದಾರೆ.

ಜಲಾಂತರ್ಗಾಮಿ ನೌಕೆ ಖರೀದಿ ಒಪ್ಪಂದ ರದ್ದುಗೊಂಡು, ಅದರಿಂದ ಉಂಟಾಗಿರುವ ಉದ್ವಿಗ್ನತೆ ಶಮನ ಮಾಡಲು ಆಸ್ಟ್ರೇಲಿಯಾದ ವ್ಯಾಪಾರ ಸಚಿವ ಡಾನ್ ಟೆಹನ್ ಮುಂದಾಗಿದ್ದಾರೆ. ಫ್ರಾನ್ಸ್‌ನ ವ್ಯಾಪಾರ ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಲು ನಿರ್ಧರಿಸಿದ್ದಾರೆ. ಅಕ್ಟೋಬರ್‌ನಲ್ಲಿ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಭೆಗಾಗಿ ಪ್ಯಾರಿಸ್‌ಗೆ ತೆರಳಿದಾಗ ಮಾತುಕತೆ ನಡೆಸಲಿದ್ದಾರೆ. ವಿವಾದ ಉಂಟಾಗಿದ್ದರೂ, ಅದು ಉಭಯ ದೇಶಗಳ ನಡುವಿನ ವ್ಯಾಪಾರದ ಮೇಲೆ ಪರಿಣಾಮ ಬೀರದು ಎಂದು ಅವರು ಹೇಳಿದ್ದಾರೆ.

ಉತ್ತರ ಕೊರಿಯಾ ಎಚ್ಚರಿಕೆ

ಆಸ್ಟ್ರೇಲಿಯಾಕ್ಕೆ ಅಣು ಇಂಧನ ಚಾಲಿತ ಜಲಾಂತರ್ಗಾಮಿ ನೌಕೆಗಳನ್ನು ನೀಡುವ ಅಮೆರಿಕದ ನಿರ್ಧಾರವನ್ನು ಟೀಕಿಸಿರುವ ಉತ್ತರ ಕೊರಿಯಾ, ದೇಶದ ಭದ್ರತೆಗೆ ಅಪಾಯ ಎದುರಾಗುವ ಸನ್ನಿವೇಶ ಒದಗಿದರೆ, ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿದೆ.

ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ನಡುವೆ ಏರ್ಪಟ್ಟ ಒಪ್ಪಂದವು ಏಷ್ಯಾ-ಪೆಸಿಫಿಕ್ ವಲಯದಲ್ಲಿ ಭದ್ರತಾ ವ್ಯವಸ್ಥೆಗೆ ಅಪಾಯಕಾರಿ ಆಗಲಿದೆ ಎಂದು ಉತ್ತರ ಕೊರಿಯಾದ ವಿದೇಶಾಂಗ ಸಚಿವಾಲಯದ ಅಧಿಕಾರಿಯೊಬ್ಬರ ಹೇಳಿಕೆ ಉಲ್ಲೇಖಿಸಿ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

> **ಫ್ರಾನ್ಸ್ ಜತೆಗಿನ ನಮ್ಮ ಸಂಬಂಧದ ಬಗ್ಗೆ ತುಂಬಾ ಹೆಮ್ಮೆ ಇದೆ. ನಮ್ಮ ಹಾಗೂ ಫ್ರಾನ್ಸ್ ನಡುವಿನ ಪ್ರೀತಿ ಎಂದೂ ಕೊನೆಯಾಗದು**
> **ಬೋರಿಸ್ ಜಾನ್ಸನ್,** ಬ್ರಿಟನ್ ಪ್ರಧಾನಿ

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ತಾಲಿಬಾನ್ ಆಡಳಿತಕ್ಕೆ ಒಳಪಟ್ಟಿರುವ ಅಫ್ಗಾನಿಸ್ತಾನದಲ್ಲಿ ಅಲ್ಪಸಂಖ್ಯಾತರ ಪರಿಸ್ಥಿತಿ ಅಯೋಮಯವಾಗಿದೆ. ತಮ್ಮ ಮತ, ಧರ್ಮಾಚರಣೆ ಬಿಡಲೊಪ್ಪದ ಕ್ರೈಸ್ತ ಸಮುದಾಯದವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿದೆ. ಪಾರದರ್ಶಕ ಪ್ಲಾಸ್ಟಿಕ್ ಚೀಲಗಳಲ್ಲಿ ಮೃತದೇಹಗಳನ್ನು ತುಂಬಿ ರಸ್ತೆಯಲ್ಲಿ ಎಸೆಯಲಾಗಿದೆ' ಎಂದು ಬಿಂಬಿಸುವ ವಿಡಿಯೊವೊಂದು ವೈರಲ್ ಆಗಿದೆ. ಸಾಮಾಜಿಕ ಜಾಲತಾಣ ಬಳಕೆದಾರರು ಇದನ್ನು ಹಂಚಿಕೊಂಡಿದ್ದಾರೆ.



ಈ ವಿಡಿಯೊ ಅಫ್ಗಾನಿಸ್ತಾನಕ್ಕೆ ಸಂಬಂಧಿಸಿದ್ದಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಇನ್‌ವಿಡ್ ಮತ್ತು ರಿವರ್ಸ್ ಇಮೇಜ್ ತಂತ್ರಜ್ಞಾನಗಳ ಮೂಲಕ ಪರಿಶೀಲನೆ ನಡೆಸಿದ್ದು, ಇದು ಕೊಲಂಬಿಯಾದ ಪ್ರತಿಭಟನೆ ದೃಶ್ಯ ಎಂದು ಮಾಹಿತಿ ನೀಡಿದೆ. ಕೊಲಂಬಿಯಾ ಸರ್ಕಾರದ ತೆರಿಗೆ ಏರಿಕೆ ಖಂಡಿಸಿ ಜನರು ನಡೆಸಿದ ವಿನೂತನ ಪ್ರತಿಭಟನೆಯ ವಿಡಿಯೊವನ್ನು ಅಫ್ಗಾನಿಸ್ತಾನದ್ದು ಎಂದು ಬಿಂಬಿಸಲಾಗಿದೆ. ಇದೇ ಮೇ 26ರಂದು ನಡೆದ ಪ್ರತಿಭಟನೆಯ ಸುದ್ದಿಯನ್ನು ಅಲ್ಲಿನ ಪತ್ರಿಕೆಗಳು ಪ್ರಕಟಿಸಿವೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ರಾಜನಾಗಲು ಜನರ ಕೋರಿಕೆ

ದೂರದಿಂದ ತಂದೆ-ಮಕ್ಕಳು ಮಾತನಾಡುತ್ತಿರುವುದನ್ನು ಕಂಡಿದ್ದಳು ರಾಣಿ ಪುಸತಿದೇವಿ, ಇಬ್ಬರ ದುಃಖವೂ ಕಡಿಮೆಯಾಗಿದೆ ಎಂಬುದನ್ನು ತಿಳಿದು ಹತ್ತಿರಕ್ಕೆ ಬಂದಳು. ಆಕೆಯನ್ನು ಕಂಡು ವೆಸ್ಸಂತರ ಮತ್ತು ಮಾದ್ರಿಯರಿಗೆ ಅತ್ಯಂತ ಸಂತೋಷವಾಯಿತು, ಇಬ್ಬರೂ ಆಕೆಯ ಮುಂದೆ ಬಂದು, 'ತಾಯಿ, ನಿಮ್ಮ ಪಾದಗಳಿಗೆ ಬಹಳ ವಂದನೆಗಳನ್ನು ಸಲ್ಲಿಸುತ್ತೇವೆ' ಎಂದು ಇಬ್ಬರೂ ಸಾಷ್ಟಾಂಗ ನಮಸ್ಕಾರ ಮಾಡಿದರು. ಹೀಗೆ ತಾಯಿಗೆ ನಮಸ್ಕಾರ ಮಾಡಿ ನಿಂತಾಗ ಅನೇಕ ಉಳಿದ ಮಕ್ಕಳೊಂದಿಗೆ ಜಾಲಿಕುಮಾರ ಮತ್ತು ಕೃಷ್ಣಾಜಿನರು ಅಲ್ಲಿಗೆ ನಡೆದು ಬಂದರು. ಮಾದ್ರಿ ಅವರ ದಾರಿಯನ್ನೇ ನೋಡುತ್ತಿದ್ದಳು. ಮಕ್ಕಳು ಕುಶಲರಾಗಿ ಬರುತ್ತಿರುವುದನ್ನು ಕಂಡು ಭಾವೋದ್ವೇಗಕ್ಕೆ ಒಳಗಾದ ಮಾದ್ರಿದೇವಿ ತನ್ನನ್ನು ತಾನು ಸಂತೈಸಿಕೊಳ್ಳಲಾರದಾದಳು. ಕರುಗಳನ್ನು ನೋಡಿದ ತಾಯಿ ಹಸು ಓಡಿಬರುವ ರೀತಿಯಲ್ಲಿ ಕಣ್ಣೀರು ಸುರಿಸುತ್ತ ಆಕೆ ಅವರೆಡೆಗೆ ಓಡಿದಳು. ಮಕ್ಕಳೂ ಅಳುತ್ತ ಆಕೆಯ ಕಡೆಗೆ ಬಂದರು. ಮಾದ್ರಿದೇವಿ ಇಷ್ಟು ದಿನ ಮಕ್ಕಳನ್ನು ಕಳೆದುಕೊಂಡಿದ್ದೆನಲ್ಲ ಎಂಬ ದುಃಖದಿಂದ ಮತ್ತು ಈಗ ಅವರು ಮತ್ತೆ ದೊರೆತರಲ್ಲ ಎಂಬ ಅತಿಯಾದ ಸಂತೋಷದಿಂದ ನಡುಗುತ್ತ ಅವರನ್ನು ಬಂದು ಬಿಗಿಯಾಗಿ ತಬ್ಬಿಕೊಂಡಳು.

ಆ ಉತ್ಕಟವಾದ ಹರ್ಷದಿಂದ ವಾರುಣಿಯಂತೆ ಅವಳ ಸ್ತನಗಳ ಧಾರೆ ಚಿಮ್ಮಿತು. ಅವರ ಮೇಲೆ ಧಾರೆಯ ಅಭಿಸಿಂಚನ ಮಾಡಿದಳು. ಆ ಸಮಯದಲ್ಲಿ ಪರ್ವತಗಳು ಅಲುಗಾಡಿದವು, ಭೂಮಿ ಸದ್ದು ಮಾಡಿತು, ಸಮುದ್ರದಲ್ಲಿ ಉಬ್ಬರವಿಳಿತಗಳಾದವು. ಗಿರಿರಾಜ ಸುಮೇರು ಪರ್ವತ ಬಾಗಿಬಿಟ್ಟಿತು. ಆರು ಕಾಮಾವಚರ ದೇವಲೋಕಗಳಲ್ಲಿ ಕೋಲಾಹಲವುಂಟಾಯಿತು. ಆರು ಕ್ಷತ್ರಿಯ ಪರಿಷತ್ತುಗಳು ಮೂರ್ಛೆ ಹೋದವು. ಶಕ್ರ ದೇವರಾಜ ಕೂಡ ಪ್ರಜ್ಞೆ ಕಳೆದುಕೊಂಡ. ದೇವತೆಗಳಲ್ಲಿ ಮತ್ತೊಬ್ಬರ ದೇಹದ ಮೇಲೆ ನೀರು ಚಿಮಿಕಿಸುವಷ್ಟು ಎಚ್ಚರ ಯಾರಿಗೂ ಉಳಿಯಲಿಲ್ಲ. ಆರು ಕ್ಷತ್ರಿಯರ ಸ್ಥಾನದಲ್ಲಿ ಪುಷ್ಕರ ವರ್ಷವನ್ನು ಸುರಿಸಲಾಯಿತು. ಅದರ ನೆನೆಯಬಯಸಿದವರು ನೆನೆದರು. ಯಾರಿಗೆ ಇಷ್ಟವಿರಲಿಲ್ಲವೋ ಅವರ ಮೇಲೆ ಬಂದು ಹನಿಯೂ ಬೀಳುತ್ತಿರಲಿಲ್ಲ. ಕಮಲದ ಎಲೆಗಳ ಮೇಲೆ ಬಿದ್ದಂತೆ ಅಂಟದೆ ಹನಿಗಳು ಉರುಳಿ ಹೋಗುತ್ತಿದ್ದವು. ಈ ಮಳೆಯನ್ನು ದೇವನೇ ಸುರಿಸಿದ್ದು ಎಂಬುದು ಎಲ್ಲರಿಗೂ ಅರಿವಾಯಿತು. ಈ ಸಂತೋಷದಲ್ಲಿ ರಾಜನೊಡನೆ ಬಂದಿದ್ದ ಜನಸಮೂಹವೆಲ್ಲ ಭಾಗಿಯಾಯಿತು. ಗಲಾಟೆಯ ಧ್ವನಿ ಪರ್ವತಗಳಲ್ಲಿ ಪ್ರತಿಧ್ವನಿತವಾಯಿತು. ಮಹಾರಾಜ ಸಂಜಯ, ಮಹಾರಾಣಿ ಪುಸತಿದೇವಿ, ಮಗ ರಾಜಕುಮಾರ ವೆಸ್ಸಂತರ ಬೋಧಿಸತ್ವ, ಅವನ ಧರ್ಮಪತ್ನಿ ಮಾದ್ರಿದೇವಿ ಮಕ್ಕಳು ಜಾಲಿಕುಮಾರ ಮತ್ತು ಕೃಷ್ಣಾಜಿನರು ಒಂದೆಡೆ ಸೇರಿದ್ದನ್ನು ನೋಡಿ ಎಲ್ಲರಿಗೂ ರೋಮಾಂಚನವಾಯಿತು. ಮಹಾರಾಜನ ಜೊತೆಗೆ ಬಂದಿದ್ದ ಸಿವಿದೇಶದ ನಾಗರಿಕರೆಲ್ಲ ಕೈಜೋಡಿಸಿ ವೆಸ್ಸಂತರನ ಮುಂದೆ ನಿಂತು, 'ರಾಜಕುಮಾರ, ನೀನೇ ನಮಗೆ ಒಡೆಯ ಮತ್ತು ರಾಜ. ನೀನು ಮರಳಿ ರಾಜ್ಯಕ್ಕೆ ಬಂದು ಮಹಾರಾಜನ ವೃದ್ಧ ಭುಜಗಳಿಂದ ರಾಜ್ಯಭಾರವನ್ನು ಇಳಿಸಿ ನಮ್ಮನ್ನು ಆಳಬೇಕು' ಎಂದು ಬೇಡಿಕೊಂಡರು. ಬದುಕಿನ ಚಕ್ರ ಒಂದು ಸುತ್ತು ಪೂರ್ತಿ ತಿರುಗಿ ಬಂದಿತ್ತು. ❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಸೆಪ್ಟೆಂಬರ್ 21, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಪ್ರತಿಪದೆ ಗಂ. 56-23 (ರಾ. 4-46) ಮಂಗಳವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ57-35 (ಬೆ.ಝಾ. 5-17) ಗಂಡ ನಾಮ ಯೋಗ ಗಂ. 23-44 ಬಾಲವ ಕರಣ ಗಂ. 26-5 ವಿಷ ಗಂ. 20-25 ಅಮೃತ ಗಂ 45-27 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 3 7

ಮೇಷ: ನೆರೆಹೊರೆಯವರೊಂದಿಗೆ ವಿನಾಕಾರಣ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶಗಳು ದೊರಕಲಿದೆ. ಉದ್ಯೋಗದಲ್ಲಿರುವವರಿಗೆ ಸ್ಥಳ ಬದಲಾವಣೆ.

ವೃಷಭ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಸಾಮಾಜಿಕ ಕಾರ್ಯಗಳಿಂದ ಗೌರವ ಪ್ರಾಪ್ತ. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು. ಉದ್ಯೋಗ ನಿಮಿತ್ತ ದೂರ ಪ್ರಯಾಣ. ಆರೋಗ್ಯ ಲಾಭ.

ಮಿಥುನ: ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಚಿಂತೆಗಳು ದೂರವಾಗಿ ನೆಮ್ಮದಿ. ಮಹಿಳೆಯರ ಮನೋಭಿಲಾಷೆಗಳು ಈಡೇರುವವು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ. ಪ್ರಾಪ್ತವಯಸ್ಕರಿಗೆ ವಿವಾಹ ನಿಶ್ಚಯ ಸಾಧ್ಯತೆ.

ಕರ್ಕಾಟಕ: ದೂರದ ಪ್ರಯಾಣಗಳನ್ನು ಮಾಡದಿರುವುದು ಉಚಿತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ ದೊರಕುವುದು. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಗಳು ಕೂಡಿಬರಲಿವೆ.

ಸಿಂಹ: ಆರ್ಥಿಕ ತೊಂದರೆಯಿಂದ ಮುಕ್ತರಾಗುವಿರಿ. ಕೋರ್ಟ್ ಕಚೇರಿಗಳಲ್ಲಿನ ವ್ಯಾಜ್ಯಗಳು ಪರಿಹಾರವಾಗಿ ನೆಮ್ಮದಿ. ವಸ್ತ್ರಾಭರಣಗಳನ್ನು ಖರೀದಿಸಲಿದ್ದೀರಿ. ಉದ್ಯೋಗದಲ್ಲಿ ಪ್ರಗತಿ. ಮನೆಯಲ್ಲಿ ಸಂತಸ.

ಕನ್ಯಾ: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ ಮೂಡುವುದು. ಅವಸರದ ನಿರ್ಧಾರಗಳು ಸೂಕ್ತವಲ್ಲ.

ತುಲಾ: ವಿಶೇಷ ವ್ಯಕ್ತಿಯೊಬ್ಬರನ್ನು ಭೇಟಿಯಾಗಲಿದ್ದೀರಿ. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ ಹೊಂದುವಿರಿ. ಮನೆಯಲ್ಲಿ ಸಂತೋಷದ ವಾತಾವರಣ.

ವೃಶ್ಚಿಕ: ಹಣಕಾಸಿನ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಅಕಾಲಿಕ ತಪಾಸಣೆಯಿಂದ ಕಿರಿಕಿರಿ ಹಾಗೂ ವೃಥಾ ಖರ್ಚು ಸಂಭವ. ದಾಂಪತ್ಯದಲ್ಲಿ ಸೌಹಾರ್ದತೆ, ಸಂತಸ ಮೂಡುವುದು.

ಧನು: ಧಾವಂತದ ಕೆಲಸಗಳು ಎದುರಾಗುವ ಸಾಧ್ಯತೆ. ಶುಭ ಸಮಾರಂಭಗಳಲ್ಲಿ ಭಾಗಿಯಾಗುವ ಸಲುವಾಗಿ ದೂರದ ಪ್ರಯಾಣ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ಮಕರ: ಅನಾವಶ್ಯಕ ವ್ಯವಹಾರಗಳಲ್ಲಿ ಭಾಗಿಯಾಗುವುದರಿಂದ ಆರೋಪಗಳನ್ನು ಎದುರಿಸಬೇಕಾದೀತು. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ದೂರದ ಪ್ರಯಾಣದ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಕುಂಭ: ಆರ್ಥಿಕ ಅಭಿವೃದ್ಧಿ ಕಂಡುಬರುವುದು. ವ್ಯವಹಾರದಲ್ಲಿ ಲಾಭ. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಲಾಭ.

ಮೀನ: ಸಾಮಾಜಿಕ ಕಾರ್ಯಕರ್ತರಿಗೆ ಸಂತಸ ತರುವ ದಿನ. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣಗೊಳ್ಳುವ ಸಾಧ್ಯತೆ. ಅನಿರೀಕ್ಷಿತ ಕಾರ್ಯ ನಿಮಿತ್ತ ದೂರಪ್ರಯಾಣ ಸಾಧ್ಯತೆ.


ನಿಮ್ಮ ಜನ್ಮದಿನ 21-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯವಹಾರದಲ್ಲಿ ಹೊಸದೊಂದು ಆದಾಯ ಮೂಲವನ್ನು ಕಂಡುಕೊಳ್ಳುವಿರಿ. ನೌಕರಿಯಲ್ಲಿರುವವರಿಗೆ ದಕ್ಷತೆಯ ಪ್ರತೀಕವಾಗಿ ಬಡ್ತಿ ದೊರಕುವ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ವಿಶೇಷ ಕಾಳಜಿ ವಹಿಸಬೇಕಾದೀತು. ಕೂಡಿಟ್ಟ ಸಂಪತ್ತಿನ ರಕ್ಷಣೆಗಾಗಿ ಮುಂಜಾಗೃತಾ ಕ್ರಮ ವಹಿಸುವುದು ಉಚಿತ.

ಪದಬಂಧ 4725

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಗುಳೆ ಹೋಗುವುದು (3)
4.ಮಠದ ಹತ್ತಿರವಿರುವ ಆಮೆ (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು! (3)
6.ಕಾಳಗಕ್ಕೊಂದು ಪರ್ಯಾಯ ಪದ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
12.ಇಲಿಯನ್ನು ಕೊಲ್ಲಲು ಈ ವಿಷವೇ! (3)
13.ಹತ್ತು ವರ್ಷಗಳ ಕಾಲದ ಅವಧಿ (3)
15.ನದಿಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಬಿಸಿಲಲ್ಲಿ ಡೊಗರು ಕಾಣುತ್ತಿದೆಯಲ್ಲಾ? (2)
2.ಪಂಚಪಾಂಡವರಲ್ಲಿ ಎರಡನೆಯವನು (2)
3.ಪ್ರವರ್ತಕನ ಹತ್ತಿರವಿರುವ ವ್ಯಾಪಾರಿ (3)
4.ಹಸುವಿನ ಮರಿಯಿದು (2)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ಇದು ಹೊಸದು (2)
9.ಅಳು ಪದದ ವಿರುದ್ಧ ಪದ (2)
11.ಸೂರ್ಯನ ಕಾವು ಇಲ್ಲಿದೆ (3)
12.ಆಹಾರವನ್ನು ಸಿದ್ಧ ಪಡಿಸುವುದು (2)
14.ಅರ್ಥವನ್ನಿ ತಿಳಿಸುವ ಅಕ್ಷರಗಳ ಸಮುದಾಯ (2)
16.ನಲ್ಲಿ ಹತ್ತಿರ ಕಾಣಿಸಿದ ಏಡಿ (2)



4724ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಿತಾಮಹ 3.ಮನೋಬಲ 5.ಕೀಚಕ 6.ಕಸರತ್ತು 7.ದಳಪತಿ 9.ತರದೂದು 11.ಸಡಗರ 13.ಚಾಕರ 14.ಪಾದಾಚಾರಿ 15.ಸದ್ಭಾವನೆ

ಮೇಲಿಂದ ಕೆಳಕ್ಕೆ: 2.ಹಕೀಕತ್ತು 3.ಮಕರಂದ 4.ಲಕ್ಷ್ಮಿ 6.ಕಡಿತ 8.ತಿಮಿರ 10.ದುರಾಚಾರಿ 11.ಸಮರಸ 12.ಪಿಪಾ

ಸುಡೊಕು 5111

3		2	1		4		6	
	1						3	2
7			6		2	5		
2					3			5
				4		2	9	
			9					1
	4		2				8	
9				7	8		5	
	6			5		4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5110 ಸುಡೊಕು


5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಶುಲ್ಕ: ₹ 170 ಕೋಟಿ ಸಂಗ್ರಹಿಸಿದ ಪಿಎನ್‌ಬಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದ ಗ್ರಾಹಕರಿಗೆ ಶುಲ್ಕ ವಿಧಿಸುವ ಮೂಲಕ 2020–21ನೆಯ ಸಾಲಿನಲ್ಲಿ ಸರಿಸುಮಾರು ₹ 170 ಕೋಟಿ ಸಂಗ್ರಹಿಸಿದೆ.

2019–20ರಲ್ಲಿ ಈ ಬಗೆಯ ಶುಲ್ಕ ಸಂಗ್ರಹದ ಮೂಲಕ ಬ್ಯಾಂಕ್‌ಗೆ ಬಂದ ಆದಾಯದ ಮೊತ್ತವು ₹ 286 ಕೋಟಿ ಆಗಿತ್ತು ಎಂದು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯ ಅಡಿ ಪಡೆದುಕೊಂಡ ಅಂಕಿ–ಅಂಶಗಳಿಂದ ಗೊತ್ತಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,585
ಇಂದಿನ ಅಂತ್ಯ	17,397
▼	188
ದಿನದ ಕನಿಷ್ಠ	17,361

ವಿನಿಮಯ ದರ

$ ಡಾಲರ್	73,74
£ ಪೌಂಡ್	100.8
€ ಯುರೊ	86.31
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1585)
ಸೋಯಾ (ರಿಫೈನ್ಡ್)	₹1340(1350)
ಸೂರ್ಯಕಾಂತಿ(ರಿಫೈನ್ಡ್)	₹1380(1380)
ಪಾಮೋಲಿನ್	₹1200 (1210)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1000-1200
ಮಧ್ಯಮ	₹700-1000
ಸಣ್ಣ	₹100-600

ತೆಂಗು ಧಾರಣೆ (ಸಾವಿರಕ್ಕೆ)

1ನೇ ದರ್ಜೆ	₹18000-20000
2ನೇ ದರ್ಜೆ	₹15000-16000

ಸಂವೇದಿ ಸೂಚ್ಯಂಕ 525 ಅಂಶ ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ವಹಿವಾಟು ಇಳಿಕೆ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 525 ಅಂಶ ಇಳಿಕೆ ಕಂಡು 58,490 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 3.49 ಲಕ್ಷ ಕೋಟಿಗಳಷ್ಟು ಇಳಿಯಿತು. ಇದರಿಂದ ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಒಟ್ಟಾರೆ ಬಂಡವಾಳ ಮೌಲ್ಯವು ₹ 255.47 ಲಕ್ಷ ಕೋಟಿಗಳಿಗೆ ತಲುಪಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 188 ಅಂಶ ಇಳಿಕೆ ಕಂಡು 17,397 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.

ಸಂಕ್ಷಿಪ್ತ ಸುದ್ದಿ

ಬಜೆಟ್ ಕೆಲಸ ಅ. 12ರಿಂದ ಶುರು

ನವದೆಹಲಿ (ಪಿಟಿಐ): 2022–23ನೇ ಸಾಲಿನ ಬಜೆಟ್ ಸಿದ್ಧಪಡಿಸುವ ಪ್ರಕ್ರಿಯೆಯನ್ನು ಕೇಂದ್ರ ಹಣಕಾಸು ಸಚಿವಾಲಯವು ಅಕ್ಟೋಬರ್ 12ರಿಂದ ಆರಂಭಿಸಲಿದೆ.

ಬೇಡಿಕೆ ಸೃಷ್ಟಿ, ಉದ್ಯೋಗ ಸೃಷ್ಟಿ, ಅರ್ಥ ವ್ಯವಸ್ಥೆಯು ಶೇಕಡ 8 ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತ ಸಾಗುವಂತೆ ಮಾಡುವ ಕೆಲಸವು ಮುಂದಿನ ವರ್ಷದ ಬಜೆಟ್ ಮೂಲಕ ಆಗಬೇಕಿದೆ ಎಂಬ ಅಭಿಪ್ರಾಯವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ.

ಬಜೆಟ್ ಪೂರ್ವ ಸಭೆಗಳು ಅಕ್ಟೋಬರ್ 12ರಿಂದ ನವೆಂಬರ್ ಎರಡನೆಯ ವಾರದವರೆಗೆ ನಡೆಯಲಿವೆ.

ಕುಶಾಕ್: 10 ಸಾವಿರಕ್ಕೂ ಅಧಿಕ ಬುಕಿಂಗ್



ನವದೆಹಲಿ (ಪಿಟಿಐ): ತನ್ನ ಮಧ್ಯಮ ಗಾತ್ರದ ಎಸ್‌ಯುವಿ 'ಕುಶಾಕ್'ನ ಬುಕಿಂಗ್ 10 ಸಾವಿರವನ್ನು ದಾಟಿದೆ ಎಂದು ಸ್ಕೋಡಾ ಆಟೊ ಇಂಡಿಯಾ ಕಂಪನಿ ಸೋಮವಾರ ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕವು ಸೃಷ್ಟಿಸಿರುವ ಬಿಕ್ಕಟ್ಟು ಮತ್ತು ಪೂರೈಕೆಯ ಸವಾಲುಗಳ ಹೊರತಾಗಿಯೂ ಈ ಮೈಲಿಗಲ್ಲು ಸಾಧ್ಯವಾಗಿದೆ ಎಂದು ಸ್ಕೋಡಾ ಆಟೊ ಇಂಡಿಯಾದ ಬ್ರ್ಯಾಂಡ್ ನಿರ್ದೇಶಕ ಜಾಕ್ ಹಾಲಿಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಕೋಡಾ ಕಂಪನಿಯು ಈ ವರ್ಷದ ಜೂನ್‌ನಲ್ಲಿ ಕುಶಾಕ್ ಅನ್ನು ಬಿಡುಗಡೆ ಮಾಡಿದ್ದು, ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 10.5 ಲಕ್ಷದಿಂದ ₹ 17.6 ಲಕ್ಷದವರೆಗೆ ಇದೆ.

ವೇತನ ಹೆಚ್ಚಳ ಶೇ 8.6ರಷ್ಟು: ಡೆಲಾಯ್ಟ್ ಸಮೀಕ್ಷೆ

ನವದೆಹಲಿ (ಪಿಟಿಐ): ಭಾರತದ ಕಾರ್ಪೊರೇಟ್ ಕಂಪನಿಗಳು ತಮ್ಮ ಉದ್ಯೋಗಿಗಳ ವೇತನವನ್ನು 2021ರಲ್ಲಿ ಸರಾಸರಿ ಶೇಕಡ 8ರಷ್ಟು ಹೆಚ್ಚಳ ಮಾಡಿದ್ದು, 2022ರಲ್ಲಿ ವೇತನವನ್ನು ಸರಾಸರಿ ಶೇ 8.6ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಡೆಲಾಯ್ಟ್ ಕಂಪನಿಯ ಸಮೀಕ್ಷೆಯು ಹೇಳಿದೆ.

ಆರ್ಥಿಕತೆಯು ಚೇತರಿಸಿಕೊಳ್ಳುತ್ತಿದ್ದು, ಕಂಪನಿಗಳ ವಿಶ್ವಾಸವೂ ವೃದ್ಧಿಸುತ್ತಿದೆ. ಹೀಗಾಗಿ ಕಂಪನಿಗಳು 2022ರಲ್ಲಿ ಈ ಪ್ರಮಾಣದ ವೇತನ ಹೆಚ್ಚಳ ಮಾಡುವ ನಿರೀಕ್ಷೆ ಎಂದು ಡೆಲಾಯ್ಟ್ ಹೇಳಿದೆ.

ಡೆಲಾಯ್ಟ್ ವರ್ಕ್‌ಫೋರ್ಸ್ ಆ್ಯಂಡ್ ಇನ್‌ಕ್ರಿಮೆಂಟ್ ಟ್ರೆಂಡ್ಸ್ ಸರ್ವೆ 2021ರ ಪ್ರಕಾರ, 2021ರಲ್ಲಿ ಶೇ 92ರಷ್ಟು ಕಂಪನಿಗಳು ಶೇ 8ರಷ್ಟು ವೇತನ ಏರಿಕೆ ಮಾಡಿವೆ. 2020ರಲ್ಲಿ ಶೇ 60ರಷ್ಟು ಕಂಪನಿಗಳು ಶೇ 4.4ರಷ್ಟು ವೇತನ ಹೆಚ್ಚಳ ಮಾಡಿದ್ದವು.

107 ವರ್ಷದ ಅವಳಿ ಸಹೋದರಿಯರ ಗಿನ್ನೆಸ್ ದಾಖಲೆ

ಟೋಕಿಯೊ (ಎಪಿ): ಜಪಾನಿನ 107 ವರ್ಷ ಮತ್ತು 330 ದಿನಗಳ ವಯಸ್ಸಿನ ಇಬ್ಬರು ಸಹೋದರಿಯರು ವಿಶ್ವದ ಅತ್ಯಂತ ಹಿರಿಯ ಅವಳಿ ಜೀವಗಳೆಂದು ಗಿನ್ನೆಸ್ ವಿಶ್ವ ದಾಖಲೆಗಳಿಂದ ಪ್ರಮಾಣೀಕರಿಸಲ್ಪಟ್ಟಿದ್ದಾರೆ ಎಂದು ಸಂಸ್ಥೆ ಸೋಮವಾರ ತಿಳಿಸಿದೆ.

ಜಪಾನಿನ ರಾಷ್ಟ್ರೀಯ ರಜಾ ದಿನವಾದ ವೃದ್ಧರ ದಿನಾಚರಣೆಯಂದು ಈ ಘೋಷಣೆ ಹೊರಬಿದ್ದಿದೆ.

ಸಹೋದರಿಯರಾದ ಉಮೆನೊ ಸುಮಿಯಮಾ ಮತ್ತು ಕೌಮೆ ಕೊಡಮಾ ಅವರು 1913ರ ನವೆಂಬರ್ 5ರಂದು ಪಶ್ಚಿಮ ಜಪಾನ್‌ನ ಶೋಡೋಶಿಮಾ ದ್ವೀಪದಲ್ಲಿ ಜನಿಸಿದವರು. 11 ಮಂದಿ ಒಡಹುಟ್ಟಿದವರಲ್ಲಿ ಈ ಅವಳಿಗಳು ಮೂರನೆಯ ಮತ್ತು ನಾಲ್ಕನೆಯವರಾಗಿ ಜನ್ಮತಾಳಿದವರು.

ಜಪಾನಿನ ಪ್ರಸಿದ್ಧ ಅವಳಿ ಸಹೋದರಿಯರಾದ ಕಿನ್ ನರಿಟಾ ಮತ್ತು ಜಿನ್ ಕಾನಿ (107 ವರ್ಷಗಳು ಮತ್ತು 175 ದಿನಗಳು) ಅವರ ಹೆಸರಿನಲ್ಲಿ ಇದೇ ಸೆಪ್ಟೆಂಬರ್ 1ರವರೆಗೆ ಇದ್ದ ದಾಖಲೆಯನ್ನು ಮುರಿದಿದ್ದಾರೆ ಎಂದು ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಲಿಮಿಟೆಡ್ ಹೇಳಿಕೆಯಲ್ಲಿ ತಿಳಿಸಿದೆ.

12.50 ಕೋಟಿ ಜನಸಂಖ್ಯೆ ಇರುವ ಜಪಾನ್, ವಿಶ್ವದಲ್ಲಿ ಅತ್ಯಂತ ವೇಗವಾಗಿ ವಯಸ್ಸಾದ ಜನಸಂಖ್ಯೆ ಹೊಂದುತ್ತಿರುವ ರಾಷ್ಟ್ರವಾಗಿದೆ.

ರಷ್ಯಾದ ಪರ್ಮ್ ವಿ.ವಿಯಲ್ಲಿ ಕೃತ್ಯ: ಶಂಕಿತನ ಸೆರೆ

ಕ್ಯಾಂಪಸ್‌ನಲ್ಲಿ ಗುಂಡಿನ ದಾಳಿ: ಎಂಟು ಸಾವು



ಬಂದೂಕುಧಾರಿ ಗುಂಡಿನ ದಾಳಿ ನಡೆಸಿದ ಪರ್ಮ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿನಿಯರು ಭೀತಿಯಿಂದ ಗುಂಪುಗೂಡಿರುವುದು —ಎಪಿ / ಪಿಟಿಐ ಚಿತ್ರ

ಮಾಸ್ಕೊ (ಎ.ಪಿ): ಬಂದೂಕುಧಾರಿಯೊಬ್ಬ ಸೋಮವಾರ ಇಲ್ಲಿನ ಪರ್ಮ್ ರಾಜ್ಯ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಗುಂಡಿನ ದಾಳಿ ನಡೆಸಿದ್ದು, ಎಂಟು ಮಂದಿ ಮೃತಪಟ್ಟಿದ್ದಾರೆ. 28 ಜನ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂದೂಕುಧಾರಿಯ ಮೇಲೆ ಪೊಲೀಸರೂ ಗುಂಡಿನ ದಾಳಿ ನಡೆಸಿದ್ದು, ಗಾಯಗೊಂಡ ಸ್ಥಿತಿಯಲ್ಲಿ ಆತನನ್ನು ಸೆರೆಹಿಡಿಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆತನ ಗುರುತು ಮತ್ತು ದಾಳಿ ಹಿಂದಿನ ಉದ್ದೇಶ ಸದ್ಯಕ್ಕೆ ತಿಳಿದುಬಂದಿಲ್ಲ.

ಗುಂಡಿನ ದಾಳಿ ನಡೆದ ಕೃತ್ಯದ ಹಿಂದೆಯೇ, ಭೀತಿಗೊಂಡ ಅನೇಕ ವಿದ್ಯಾರ್ಥಿಗಳು 2ನೇ ಅಂತಸ್ತಿನಿಂದ ಜೀವ ರಕ್ಷಣೆ ಯತ್ನದಲ್ಲಿ ಕೆಳಗೆ ಜಿಗಿದಿದ್ದಾರೆ. ಈ ಸಂಬಂಧಿತ ದೃಶ್ಯಾವಳಿಗಳನ್ನು ಸ್ಥಳೀಯ ಸುದ್ದಿಸಂಸ್ಥೆಗಳು ಬಿತ್ತರಿಸಿವೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿ ಮತ್ತು ಹೆಚ್ಚಿನ ವಿದ್ಯಾರ್ಥಿಗಳು ಕೊಠಡಿಯಲ್ಲಿ ಸ್ವಯಂ ದಿಗ್ಬಂಧನಕ್ಕೆ ಒಳಗಾಗಿದ್ದರು.

ಕಪ್ಪು ವಸ್ತ್ರ, ಹೆಲ್ಮೆಟ್ ಧರಿಸಿದ್ದ ವ್ಯಕ್ತಿಯೊಬ್ಬರು ಶಸ್ತ್ರಾಸ್ತ್ರ ಹಿಡಿದು ಒಳ ಪ್ರವೇಶಿಸುತ್ತಿರುವುದು ಕೆಲ ದೃಶ್ಯಗಳಲ್ಲಿ ದಾಖಲಾಗಿದೆ. ರಷ್ಯಾದ ತನಿಖಾ ಸಮಿತಿಯು, ಶಂಕಿತನು ಶಾಟ್‌ಗನ್ ಬಳಸಿರುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಮೊದಲಿಗೆ ಸಂಚಾರ ಪೊಲೀಸರು ಬಂದಿದ್ದು, ಶಂಕಿತನು ಅವರ ಮೇಲೂ ಗುಂಡಿನ ದಾಳಿ ನಡೆಸಿದ್ದಾನೆ. ರಷ್ಯಾದಲ್ಲಿ ಶಸ್ತ್ರಾಸ್ತ್ರ ಹೊಂದುವುದು ಸುಲಭವಲ್ಲ. ಆದರೂ, ಅನೇಕ ಜನರು ಬೇಟೆಯಾಡುವ ಶಸ್ತ್ರಾಸ್ತ್ರ ಕುರಿತ ಲೈಸೆನ್ಸ್ ಹೊಂದಿದ್ದಾರೆ. ಶಂಕಿತನು ಪಂಪ್ ಆ್ಯಕ್ಷನ್ ಶಾಟ್‌ಗನ್ ಲೈಸೆನ್ಸ್ ಹೊಂದಿರುವ ಶಂಕೆ ಇದೆ. ಆದರೆ, ಅದನ್ನೇ ಬಳಸಿದ್ದಾನಾ ಎಂಬುದು ದೃಢಪಟ್ಟಿಲ್ಲ.

ಪರ್ಮ್ ರಾಜ್ಯ ವಿಶ್ವವಿದ್ಯಾಲಯದಲ್ಲಿ ಅಂದಾಜು 12 ಸಾವಿರ ವಿದ್ಯಾರ್ಥಿಗಳಿದ್ದಾರೆ. ಗುಂಡಿನ ದಾಳಿ ನಡೆದಾಗ ಸುಮಾರು 3,000 ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಇದ್ದರು. ಪರ್ಮ್ ನಗರವು ಮಾಸ್ಕೊಗೆ 700 ಮೈಲಿ ದೂರದಲ್ಲಿದೆ.

ಘಟನೆಯಲ್ಲಿ 28 ಮಂದಿ ಗಾಯಗೊಂಡಿದ್ದಾರೆ. ಕೆಲವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತನಿಖಾ ಸಮಿತಿ ತಿಳಿಸಿದೆ. ಆದರೆ, ಕೃತ್ಯದ ಬಗ್ಗೆ ಹೆಚ್ಚಿನ ವಿವರ ಬಹಿರಂಗಪಡಿಸಿಲ್ಲ.

ಆರೋಗ್ಯ ಸಚಿವಾಲಯದ ಪ್ರಕಾರ, 19 ಜನರ ಮೇಲೆ ಗುಂಡು ಹಾರಿಸಲಾಗಿದೆ. ಆದರೆ, ಎಷ್ಟು ಮಂದಿ ಗಾಯಗೊಂಡಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಕಳೆದ ಮೇ ತಿಂಗಳಲ್ಲಿಯೂ ಕಜಾನ್‌ನ ಶಾಲೆಯೊಂದರಲ್ಲಿ ಗುಂಡಿನ ದಾಳಿ ನಡೆದಿತ್ತು. ಆಗ ಏಳು ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಮೃತಪಟ್ಟಿದ್ದರು.

ಭಾರತೀಯ ವಿದ್ಯಾರ್ಥಿಗಳು ಸುರಕ್ಷಿತ

ಪರ್ಮ್ ವಿಶ್ವವಿದ್ಯಾಲಯದಲ್ಲಿ ಇರುವ ಎಲ್ಲ ಭಾರತೀಯ ವಿದ್ಯಾರ್ಥಿಗಳು ಸುರಕ್ಷಿತವಾಗಿದ್ದಾರೆ. ಗುಂಡಿನ ದಾಳಿ ಕೃತ್ಯದ ಹಿನ್ನೆಲೆಯಲ್ಲಿ ರಷ್ಯಾದಲ್ಲಿ ಇರುವ ಭಾರತೀಯ ರಾಯಭಾರ ಕಚೇರಿ ಈ ಹೇಳಿಕೆ ನೀಡಿದೆ.

ದುಡ್ಡು ಬೆಳೆಸುವ 'ವ್ಯಾಲ್ಯು ಇನ್ವೆಸ್ಟಿಂಗ್'

ಷೇರು ಮಾತು

ಶರತ್ ಎಂ.ಎಸ್.



ಅಮೆರಿಕದ ಅರ್ಥಶಾಸ್ತ್ರಜ್ಞ ಮತ್ತು ಹೂಡಿಕೆದಾರ ಬೆಂಜಮಿನ್ ಗ್ರಹಾಂ 1920ರ ಸುಮಾರಿನಲ್ಲಿ 'ವ್ಯಾಲ್ಯು ಇನ್ವೆಸ್ಟಿಂಗ್' – ಅಂದರೆ ಕಂಪನಿಯ ಷೇರುಗಳ ಮೌಲ್ಯವನ್ನು ಗಮನಿಸಿ, ಅದರ ಆಧಾರದಲ್ಲಿ ಮಾಡುವ ಹೂಡಿಕೆ – ಎಂಬ ಹೊಸ ವಿಧಾನ ಹುಟ್ಟುಹಾಕಿದರು. ಒಂದು ಶತಮಾನದ ಬಳಿಕವೂ ಬೆಂಜಮಿನ್ ಗ್ರಹಾಂ ತತ್ವಗಳು ಹೂಡಿಕೆದಾರರಿಗೆ ಪ್ರಸ್ತುತವಾಗಿವೆ. ಜಗತ್ತಿನ ಶ್ರೀಮಂತ ಹೂಡಿಕೆದಾರ ವಾರನ್ ಬಫೆಟ್ ಸಂಪತ್ತು ಸೃಷ್ಟಿಸಿದ್ದು ಕೂಡ ಇದೇ 'ವ್ಯಾಲ್ಯು ಇನ್ವೆಸ್ಟಿಂಗ್' ಮೂಲಕ. ಬನ್ನಿ 'ಮೌಲ್ಯಾಧಾರಿತ ಹೂಡಿಕೆ'ಯ ಬಗ್ಗೆ ಹೆಚ್ಚು ಕಲಿತು ಪ್ರಜ್ಞಾವಂತ ಹೂಡಿಕೆದಾರರಾಗೋಣ.

ಏನಿದು ವ್ಯಾಲ್ಯು ಇನ್ವೆಸ್ಟಿಂಗ್?: ಷೇರು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗುತ್ತಿರುವ, ಅತ್ಯುತ್ತಮ ಕಂಪನಿಗಳ ಷೇರುಗಳನ್ನು ಹುಡುಕಿ ಹಣ ತೊಡಗಿಸುವ ಪ್ರಕ್ರಿಯೆಯನ್ನು ವ್ಯಾಲ್ಯು ಇನ್ವೆಸ್ಟಿಂಗ್ ಎನ್ನಬಹುದು. ಅತ್ಯುತ್ತಮ ಕಂಪನಿಯೊಂದರ ಷೇರನ್ನು ಗುರುತಿಸಿ, ಕಡಿಮೆ ಬೆಲೆಗೆ ಅದನ್ನು ಖರೀದಿಸಿದ್ದೀರಿ ಎಂದ ಮೇಲೆ ಮುಂದೊಂದು ದಿನ ಆ ಷೇರಿನ ಮೌಲ್ಯ ಏರಿಕೆಯಾಗಲೇಬೇಕು ಅಲ್ಲವೇ? ಷೇರಿನ ಬೆಲೆ ಜಿಗಿದಾಗ ನೀವು ಹೂಡಿಕೆ ಮಾಡಿದ್ದ ಕಡಿಮೆ ಬಂಡವಾಳಕ್ಕೆ ಹೆಚ್ಚು ಲಾಭ ಸಿಗುತ್ತದಲ್ಲವೇ? ಇದೇ ವ್ಯಾಲ್ಯೂ ಇನ್ವೆಸ್ಟಿಂಗ್ ಅಂತರಂಗ.

ಬಹಳ ಸರಳ ಎಂದು ಅನ್ನಿಸಿದರೂ ಇದು ಅತ್ಯಂತ ಶಕ್ತಿಶಾಲಿ ತತ್ವ ಎಂಬುದನ್ನು ಮರೆಯುವಂತೆ ಇಲ್ಲ. ಉದಾಹರಣೆಗೆ ₹ 500ರಷ್ಟು ಆಂತರಿಕ ಮೌಲ್ಯ (Intrinsic Value) ಹೊಂದಿರುವ ಷೇರಿನ ಬೆಲೆ ಇಂದು ₹ 100 ಇದ್ದು, ಅದನ್ನು ನೀವು ಖರೀದಿಸಿದಿರಿ ಎಂದಿಟ್ಟುಕೊಳ್ಳಿ. ಮುಂದಿನ ದಿನಗಳಲ್ಲಿ ಆ ಷೇರಿನ ಬೆಲೆ ₹ 500 ಆದಾಗ ನಿಮಗೆ ₹ 400 ಲಾಭವಾಗುತ್ತದೆ. ಹೀಗೆ ಕಡಿಮೆ ಬಂಡವಾಳ ಹೂಡಿಕೆ ಮಾಡಿ, ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಗಳಿಸುವ ತತ್ವವೇ ವ್ಯಾಲ್ಯು ಇನ್ವೆಸ್ಟಿಂಗ್.

ಓವರ್ ವ್ಯಾಲ್ಯೂಡ್, ಅಂಡರ್ ವ್ಯಾಲ್ಯೂಡ್ ಎಂದರೇನು?: ವಾಸ್ತವದಲ್ಲಿ ಹೊಂದಿರಬೇಕಾದ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯ ಹೊಂದಿರುವ ಷೇರುಗಳನ್ನು 'ಓವರ್ ವ್ಯಾಲ್ಯೂಡ್' ಷೇರು ಎನ್ನುತ್ತಾರೆ. ವಾಸ್ತವದಲ್ಲಿ ಹೊಂದಿರಬೇಕಾದ ಮೌಲ್ಯಕ್ಕಿಂತ ಕಡಿಮೆ ಮೌಲ್ಯ ಹೊಂದಿರುವ ಷೇರುಗಳು 'ಅಂಡರ್ ವ್ಯಾಲ್ಯೂಡ್' ಎಂದು ಪರಿಗಣಿತ ಆಗುತ್ತವೆ. ಷೇರು ಹೂಡಿಕೆ ಮಾಡುವಾಗ ಅಂಡರ್ ವ್ಯಾಲ್ಯೂಡ್ ಷೇರುಗಳಿಗೆ ಆದ್ಯತೆ ಕೊಡಬೇಕು.

ಕಂಪನಿಗಳನ್ನು ಹುಡುಕುವುದು ಹೇಗೆ?: ಷೇರುಪೇಟೆಯಲ್ಲಿ ಅಂಡರ್ ವ್ಯಾಲ್ಯೂಡ್ ಷೇರುಗಳನ್ನು ಗುರುತಿಸಲು ಹಲವು ಅನುಪಾತಗಳನ್ನು ಬಳಸಲಾಗುತ್ತದೆ. ಪ್ರೈಸ್ ಟು ಅರ್ನಿಂಗ್ಸ್ ರೇಷಿಯೋ, ಪ್ರೈಸ್ ಅರ್ನಿಂಗ್ಸ್ ಟು ಗ್ರೋಥ್ ರೇಷಿಯೋ, ಪ್ರೈಸ್ ಟು ಬುಕ್ ರೇಷಿಯೋ, ಡಿವಿಡೆಂಡ್ ಈಲ್ಡ್ ರೇಷಿಯೋ, ಡೆಟ್ ಟು ಈಕ್ವಿಟಿ ರೇಷಿಯೋ, ರಿಟರ್ನ್ ಆನ್ ಈಕ್ವಿಟಿ ರೇಷಿಯೋ, ಪ್ರೈಸ್ ಟು ಸೇಲ್ಸ್ ಹೀಗೆ ಹಲವು ಅನುಪಾತಗಳು ಇಂತಹ ಷೇರುಗಳನ್ನು ಗುರುತಿಸಲು ನೆರವಿಗೆ ಬರುತ್ತವೆ.

ಪ್ರತಿ ಅನುಪಾತವನ್ನು ಗ್ರಹಿಸಿ, ಅರ್ಥ ಮಾಡಿಕೊಂಡು ಮುಂದುವರಿದಾಗ ನಿರ್ದಿಷ್ಟ ಷೇರಿನ ಭವಿಷ್ಯದ ಬಗ್ಗೆ ನಿಮ್ಮ ಲೆಕ್ಕಾಚಾರ ನಿಖರವಾಗುತ್ತದೆ. ವ್ಯಾಲ್ಯು ಇನ್ವೆಸ್ಟಿಂಗ್‌ಗೆ ಅಗತ್ಯ ಕಂಪನಿಗಳನ್ನು ಗುರುತಿಸಲು ನೆರವಿಗೆ ಬರುವ ಅನುಪಾತಗಳ ಬಗ್ಗೆ ಮತ್ತಷ್ಟು ವಿವರವಾಗಿ ಮುಂದೆ ತಿಳಿಯೋಣ.

ಎನ್‌ಎಂಡಿಸಿಗೆ ಹದಿಮೂರು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ ಪರಿಷತ್ತು (ಪಿಆರ್‌ಸಿಐ) ಈಚೆಗೆ ಗೋವಾದಲ್ಲಿ ಆಯೋಜಿಸಿದ್ದ 'ಗ್ಲೋಬಲ್ ಕಮ್ಯುನಿಕೇಷನ್ ಕಾನ್‌ಕ್ಲೇವ್'ನಲ್ಲಿ ಎನ್‌ಎಂಡಿಸಿ ಕಂಪನಿಯು ಹದಿಮೂರು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ವಾರ್ಷಿಕ ವರದಿ ಸಿದ್ಧಪಡಿಸುವಿಕೆ, ವಾರ್ಷಿಕ ವರದಿಯ ಮುಖಪುಟ, ಸಾಮಾಜಿಕ ಜಾಲತಾಣಗಳ ಬಳಕೆ, ಕೋವಿಡ್ ಸಂದರ್ಭದಲ್ಲಿ ಮಾನವ ಸಂಪನ್ಮೂಲದ ಬಳಕೆ ಸೇರಿದಂತೆ ಹದಿಮೂರು ವಿಭಾಗಗಳಲ್ಲಿ ಪ್ರಶಸ್ತಿಗಳು ಬಂದಿವೆ ಎಂದು ಪ್ರಕಟಣೆ ತಿಳಿಸಿದೆ.

'ಗಣಿಗಾರಿಕೆಯಲ್ಲಿ ತೊಡಗಿರುವ ಕಂಪನಿಯಾಗಿ, ಗಣಿಗಾರಿಕೆಯಿಂದ ಲೋಹ ಸಿದ್ಧವಾಗುವವರೆಗಿನ ಪ್ರಕ್ರಿಯೆಯ ಬಗ್ಗೆ ಜಾಗೃತಿ ಮೂಡಿಸುವುದು ನಮ್ಮ ಜವಾಬ್ದಾರಿ. ನಾವು ಬೇರೆ ಬೇರೆ ಮಾಧ್ಯಮಗಳನ್ನು ಇದಕ್ಕೆ ಬಳಸಿಕೊಳ್ಳುತ್ತೇವೆ' ಎಂದು ಎನ್‌ಎಂಡಿಸಿ ಕಂಪನಿಯ ಕಾರ್ಪೊರೇಟ್ ಕಮ್ಯುನಿಕೇಷನ್ಸ್ ವಿಭಾಗದ ಮುಖ್ಯಸ್ಥ ಪಿ. ಜಯಪ್ರಕಾಶ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-50000
ಹಳತು	42500-51500
ಸಿದ್ದಾಪುರ	
ಬಿಳಿಗೋಟು	37699-41699
ಚಾಲಿ	46869-48699
ಕೋಕ	28899-39399
ಕೆಂಪುಗೋಟು	28869-34499
ರಾಶಿ	49099-52188
ತಟ್ಟಿಬೆಟ್ಟೆ	38012-49199
ಶಿರಸಿ	
ಬೆಟ್ಟೆ	34899-48699
ಬಿಳಿಗೋಟು	34067-44296
ಚಾಲಿ	40009-48699
ರಾಶಿ	45899-52209
ಯಲ್ಲಾಪುರ	
ಬಿಳಿಗೋಟು	38690-49999
ಚಾಲಿ	44009-48699
ಕೋಕ	2612-35312
ಕೆಂಪುಗೋಟು	32099-35899
ರಾಶಿ	49769-53699
ತಟ್ಟಿಬೆಟ್ಟೆ	41000-49179
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	278-480
ದ್ವಿತಳಿ (ಬಿ.ವಿ)	323-541

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	13000	188.15ಸೆಂಟ್ಸ್
ಎಸಿ	---	4800	5150	
ಆರ್‌ಪಿ	---	6100	6300	ಲಂಡನ್
ಆರ್‌ಸಿ	---	3500	3675	2107 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

20-9-2021

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1595)
ಒಂದು ವಾರದ ಡೆಲಿವರಿ	1595 (1590)
ಸೋಯಾ ಕಚ್ಚಾ	1292 (1300)
ಪಾಮ್ ವಾರದ ಡೆಲಿವರಿ	1198 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,100 (46,050)

ಬೆಳ್ಳಿ ಕೆ.ಜಿ 59,750 (60,000)

ಆವರಣದಲ್ಲಿ ಶನಿವಾರದ ಧಾರಣೆ

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

PAY	2	And	GET	1	Free
PAY	3	And	GET	2	Free
PAY	5	And	GET	5	Free

ಚರಣ್‌ಜಿತ್ ಚನ್ನಿ ಪ್ರಮಾಣ: ರಂಧಾವ, ಸೋನಿಗೆ ಉಪಮುಖ್ಯಮಂತ್ರಿ ಸ್ಥಾನ

ಪಂಜಾಬ್: ಮೊದಲ ದಲಿತ ಸಿ.ಎಂ ಅಧಿಕಾರಕ್ಕೆ

ಚಂಡೀಗಡ (ಪಿಟಿಐ): ಕಾಂಗ್ರೆಸ್ ನಾಯಕ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪಂಜಾಬ್‌ನ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಹುದ್ದೆಗೇರಿದ ದಲಿತ ಸಮುದಾಯದ ಮೊದಲ ವ್ಯಕ್ತಿ ಅವರು. ರಾಜ್ಯಪಾಲ ಭನ್ವಾರಿಲಾಲ್ ಪುರೋಹಿತ್ ಅವರು ಪ್ರಮಾಣವಚನ ಬೋಧಿಸಿದರು.

ಸುಖ್‌ಜಿಂದರ್ ಸಿಂಗ್ ರಂಧಾವ ಮತ್ತು ಒ.ಪಿ. ಸೋನಿ ಅವರಿಗೆ ಹೊಸ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ನೀಡಲಾಗಿದೆ. ಅಮರಿಂದರ್ ಸಿಂಗ್ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ಈ ಇಬ್ಬರೂ ಸಚಿವರಾಗಿದ್ದರು.

ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಚನ್ನಿ ಅವರು ಒತ್ತಾಯಿಸಿದ್ದಾರೆ. 'ಕರಾಳ' ಕಾಯ್ದೆಗಳ ವಿರುದ್ಧ ಹೋರಾಡುತ್ತಿರುವ ರೈತರ ಜತೆಗೆ ಕಾಂಗ್ರೆಸ್ ಪಕ್ಷವು ಗಟ್ಟಿಯಾಗಿ ನಿಲ್ಲಲಿದೆ ಎಂದಿದ್ದಾರೆ.

ಸೋಮವಾರ ಬೆಳಿಗ್ಗೆ 11 ಗಂಟೆಗೆ ಪ್ರಮಾಣವಚನ ನಿಗದಿಯಾಗಿತ್ತು. ಆದರೆ, ಸ್ವಲ್ಪ ತಡವಾಗಿ ಕಾರ್ಯಕ್ರಮ ನಡೆಯಿತು. ಸೋನಿ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಿಕೆ ಬಗ್ಗೆ ಸಮಾರಂಭಕ್ಕೆ ಅಲ್ಪ ಮೊದಲು ನಿರ್ಧಾರ ಕೈಗೊಳ್ಳಲಾಯಿತುಎಂದುಹೇಳಲಾಗಿದೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಸಮಾರಂಭದಲ್ಲಿ ಇದ್ದರು. ಆದರೆ, ಭಿನ್ನಮತದ ಕಾರಣಕ್ಕೆ ಮುಖ್ಯಮಂತ್ರಿ ಹುದ್ದೆಗೆ ಶನಿವಾರ ರಾಜೀನಾಮೆ ನೀಡಿದ ಅಮರಿಂದರ್ ಸಿಂಗ್ ಅವರು ಗೈರುಹಾಜರಾಗಿದ್ದರು.



ಪಂಜಾಬ್‌ನ ಹೊಸ ಮುಖ್ಯಮಂತ್ರಿ ಚನ್ನಿ ಅವರೊಂದಿಗೆ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮತ್ತು ರಾಜ್ಯ ಉಸ್ತುವಾರಿ ಹರೀಶ್ ರಾವತ್ ಪಿಟಿಐ ಚಿತ್ರ

ಪಂಜಾಬ್: ಉಚಿತ ನೀರು, ವಿದ್ಯುತ್ ಶುಲ್ಕ ಕಡಿತ

ನವದೆಹಲಿ: ಪಂಜಾಬ್‌ನ ನೂತನ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಸಣ್ಣ ಮನೆಗಳಿಗೆ ಉಚಿತ ನೀರು ಮತ್ತು ವಿದ್ಯುತ್ ಶುಲ್ಕದಲ್ಲಿ ಕಡಿತವನ್ನು ಘೋಷಿಸಿದ್ದಾರೆ.

ರಾಜ್ಯದಲ್ಲಿ ಕೆಲವೇ ತಿಂಗಳಿನಲ್ಲಿ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಪ್ರಬಲ ಸ್ಪರ್ಧೆ ಒಡ್ಡಲಿದೆ ಎಂದು ನಿರೀಕ್ಷಿಸಲಾಗಿರುವ ಎಎಪಿಯ ಚುನಾವಣಾ ಪ್ರಣಾಳಿಕೆಗೆ ಪ್ರತಿಕ್ರಿಯೆಯಾಗಿ ಅವರು ಈ ಜನಪ್ರಿಯ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ ಎನ್ನಲಾಗಿದೆ.

'ನಾನು ಆಮ್ ಆದ್ಮಿ (ಬಡವ). ಈಗ ನಿಜವಾದ ಆಮ್ ಆದ್ಮಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾನೆ. ಇದು ನಿಜವಾದ ಆಮ್ ಆದ್ಮಿಗಳ ಸರ್ಕಾರ' ಎಂದು ಅವರು ಎಎಪಿಗೆ (ಆಮ್ ಆದ್ಮಿ ಪಕ್ಷ) ಚುರುಕು ಮುಟ್ಟಿಸಿದ್ದಾರೆ. 'ನನ್ನ ಅಪ್ಪ ಟೆಂಟ್‌ಹೌಸ್ ನಡೆಸುತ್ತಿದ್ದರು. ನಾನು ಅವರಿಗೆ ನೆರವಾಗುತ್ತಿದ್ದೆ. ಟೆಂಟ್ ಹೌಸ್‌ನ ರಿಕ್ಷಾವನ್ನು ನಾನು ಎಳೆಯುತ್ತಿದ್ದೆ' ಎಂದು ಅವರು ಕಣ್ಣೀರಿಟ್ಟಿದ್ದಾರೆ.

'ನೂತನ ಸಂಪುಟದ ಮೊದಲ ಸಭೆಯಲ್ಲಿಯೇ, ಉಚಿತ ನೀರು ಮತ್ತು ವಿದ್ಯುತ್ ಶುಲ್ಕ ಕಡಿತದ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲಾಗುತ್ತದೆ. 2017ರ ಚುನಾವಣೆಗೂ ಮುನ್ನ ಕಾಂಗ್ರೆಸ್ ನೀಡಿದ್ದ ಎಲ್ಲಾ ಆಶ್ವಾಸನೆಗಳನ್ನು ನಮ್ಮ ಪಕ್ಷ ಈಡೇರಿಸಲಿದೆ' ಎಂದು ಅವರು ಹೇಳಿದ್ದಾರೆ.

'ದಲಿತರು ಎಚ್ಚರಿಕೆಯಿಂದ ಇರಿ'

ಲಖನೌ (ಪಿಟಿಐ): ದಲಿತ ಸಿಖ್ ಸಮುದಾಯದ ಚರಣ್‌ಜಿತ್‌ಸಿಂಗ್ ಚನ್ನಿ ಅವರನ್ನು ಪಂಜಾಬ್‌ನ ಮುಖ್ಯಮಂತ್ರಿಯನ್ನಾಗಿ ಮಾಡಿರುವುದು ಕಾಂಗ್ರೆಸ್‌ನ 'ಚುನಾವಣಾ ತಂತ್ರ' ಎಂದು ಟೀಕಿಸಿರುವ ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ, ಕಾಂಗ್ರೆಸ್‌ನ ಈ ನಡೆ ಬಗ್ಗೆ ದಲಿತರು ಎಚ್ಚರಿಕೆಯಿಂದ ಇರಬೇಕು ಎಂದಿದ್ದಾರೆ.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆ ಪಕ್ಷವು, ಪಂಜಾಬ್‌ನಲ್ಲಿ ಮುಂಬರಲಿರುವ ವಿಧಾನಸಭಾ ಚುನಾವಣೆಯನ್ನು ಚನ್ನಿ ನೇತೃತ್ವದಲ್ಲಿ ಎದುರಿಸುವುದಿಲ್ಲ. ಬದಲಾಗಿ, ದಲಿತೇತರರ ನಾಯಕತ್ವದಲ್ಲಿ ಎದುರಿಸಲಿದೆ ಎಂದು ನನಗೆ ಇಂದು ಮಾಧ್ಯಮಗಳ ಮೂಲಕ ತಿಳಿಯಿತು. ಕಾಂಗ್ರೆಸ್ ಪಕ್ಷಕ್ಕೆ ಈಗಲೂ ದಲಿತ ಸಮುದಾಯವರ ಮೇಲೆ ನಂಬಿಕೆ ಇಲ್ಲ. ಹೀಗಾಗಿ, ಅದರ ದ್ವಿಮುಖ ನೀತಿಯ ಬಗ್ಗೆ ಹುಷಾರಾಗಿರಬೇಕು' ಎಂದು ಹೇಳಿದರು.

'ಪಂಜಾಬ್ ಇರಲಿ, ಉತ್ತರಪ್ರದೇಶ ಇರಲಿ ಅಥವಾ ಬೇರಾವುದೇ ರಾಜ್ಯವಿರಲಿ; 'ಜಾತಿವಾದಿ ಪಕ್ಷಗಳು' ದಲಿತರಿಗೆ, ಹಿಂದುಳಿದವರಿಗೆ ಏನೇ ಸ್ಥಾನ ನೀಡುತ್ತಿವೆ ಎಂದರೂ ಅದು ಸ್ವಾರ್ಥಕ್ಕಾಗಿಯೇ ಹೊರತು ದಲಿತರ ಏಳಿಗೆಗಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ವಿರುದ್ಧವೂ ವಾಗ್ದಾಳಿ ನಡೆಸಿದ ಮಾಯಾವತಿ, ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯುತ್ತಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಹಿಂದುಳಿದವರ ಮೇಲೆ ಏಕಾಏಕಿ ಪ್ರೀತಿ ಹುಟ್ಟಿಕೊಂಡಿದೆ ಎಂದು ಟೀಕಿಸಿದರು.

'ಆ ಪಕ್ಷಕ್ಕೆ ನಿಜವಾಗಿಯೂ ಹಿಂದುಳಿದವರ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದಿದ್ದರೆ ಕೇಂದ್ರದಲ್ಲಿ ಹಾಗೂ ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದರು. ಜಾತಿ ಆಧಾರಿತ ಜನಗಣತಿಯನ್ನೂ ಒಪ್ಪಿಕೊಳ್ಳುತ್ತಿದ್ದರು' ಎಂದರು.

'ದಲಿತರೆಡೆಗಿನ ಹುಸಿ ಪ್ರೀತಿ'

ನವದೆಹಲಿ (ಪಿಟಿಐ): ದಲಿತ ಸಮುದಾಯದ ಮತ ಗಳಿಸುವುದಕ್ಕಾಗಿ, ಕಾಂಗ್ರೆಸ್ ಪಕ್ಷವು ಚರಣ್‌ಜಿತ್ ಸಿಂಗ್ ಅವರನ್ನು ಕೆಲ ತಿಂಗಳುಗಳ ಮಟ್ಟಿಗೆ ಮಾತ್ರ ಮುಖ್ಯಮಂತ್ರಿಯನ್ನಾಗಿ ಮಾಡಿದೆ ಎಂದು ಬಿಜೆಪಿ ಆರೋಪಿಸಿದೆ.

ಆ ಪಕ್ಷವು ಯಾವಾಗಲೂ ದಲಿತರಿಗೆ ಅಲ್ಪಾವಧಿಯ ಅಧಿಕಾರವನ್ನು ಮಾತ್ರ ನೀಡುತ್ತ ಬಂದಿದೆ. ಇದು ದಲಿತ ಮತಗಳಿಗಾಗಿ ನಡೆಸಿದ ಷಡ್ಯಂತ್ರ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ದುಷ್ಯಂತ್ ಕುಮಾರ್ ಗೌತಮ್ ಟೀಕಿಸಿದ್ದಾರೆ. 'ಕಾಂಗ್ರೆಸ್ ತನ್ನ ಈ ನಡೆಯನ್ನು ನಿಜವಾಗಿಯೂ ಗಂಭೀರವಾಗಿ ಪರಿಗಣಿಸಿದ್ದಲ್ಲಿ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಚನ್ನಿ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಹಿರಂಗವಾಗಿ ಘೋಷಿಸುವ ಧೈರ್ಯ ತೋರಲಿ' ಎಂದು ಸವಾಲು ಹಾಕಿದ್ದಾರೆ.

ಆರೋಪ ಮತ್ತೆ ಮುನ್ನೆಲೆಗೆ

ಒಂದನೇ ಪುಟದಿಂದ

ಮಹಿಳೆಯರ ಸುರಕ್ಷತೆಗೇ ಬೆದರಿಕೆ ಆಗಿರುವಂಥ ವ್ಯಕ್ತಿಯ ಕೈಗೆ ರಾಜ್ಯದ ಆಡಳಿತ ಕೊಟ್ಟರೆ, ರಾಜ್ಯದ ಮಹಿಳೆಯರ ಸುರಕ್ಷತೆಯ ಸ್ಥಿತಿ ಏನಾಗಬಹುದು ಎಂದು ನೀವೇ ಊಹಿಸಿ. ಒಬ್ಬ ಐಎಎಸ್ ಅಧಿಕಾರಿಗೇ ನ್ಯಾಯ ಒದಗಿಸಲು ಆಗದ ಕಾಂಗ್ರೆಸ್, ಪಂಜಾಬ್‌ನ ಸಾಮಾನ್ಯ ಮಹಿಳೆಯರಿಗೆ ಹೇಗೆ ನ್ಯಾಯ ದೊರಕಿಸುತ್ತದೆ. ಸ್ವತಃ ಮಹಿಳೆಯೇ ಆಗಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚನ್ನಿ ವಿರುದ್ಧದ ಮೀಟೂ ಆರೋಪವನ್ನು ಗಂಭೀರವಾಗಿ ಪರಿಗಣಿಸದೇ ಹೇಗೆ ಅವರನ್ನು ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಿದರು ಎಂದು ಅವರು ಪ್ರಶ್ನಿಸಿದ್ದಾರೆ.ಚನ್ನಿ ಅವರು ಮಹಿಳಾ ಐಎಎಸ್ ಅಧಿಕಾರಿಗೆ ಅಸಹ್ಯವಾದ ಸಂದೇಶಗಳನ್ನು ರವಾನಿಸುತ್ತಿದ್ದ ಕುರಿತು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪಂಜಾಬ್ ಮಹಿಳಾ ಆಯೋಗದ ಮುಖ್ಯಸ್ಥೆ ಇದೇ ವರ್ಷ ಮೇನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು.

ಇನ್ನೊಂದು ವಾರದಲ್ಲಿ ಈ ಪ್ರಕರಣ ಕುರಿತು ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸದಿದ್ದರೆ ತಾವು ಉಪವಾಸ ಸತ್ಯಾಗ್ರಹ ಮಾಡುವುದಾಗಿ ಅವರು ಹೇಳಿದ್ದರು. ಈ ಘಟನೆ ಬಳಿಕ ಚನ್ನಿ ವಿರುದ್ಧದ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿತ್ತು.

ಮಾಳವೀಯ ಆಕ್ರೋಶ

ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಚನ್ನಿ ವಿರುದ್ಧದ ಆರೋಪದ ಕುರಿತು ಭಾನುವಾರ ಟ್ವೀಟ್ ಮಾಡಿದ್ದರು.

ಮತ್ತೊಂದು ಟ್ವೀಟ್ ಮಾಡಿರುವ ಮಾಳವೀಯ, '2007ರಲ್ಲಿ ಪಂಜಾಬ್ ಪೊಲೀಸರು ಬಿಡುಗಡೆ ಮಾಡಿದ್ದ ಮಾದಕದ್ರವ್ಯ ದಂಧೆಯಲ್ಲಿರುವವರಿಗೆ ಸಹಕಾರ ನೀಡುತ್ತಿದ್ದ ರಾಜಕೀಯ ನಾಯಕರ ಪಟ್ಟಿಯಲ್ಲಿ ಒ.ಪಿ. ಸೋನಿ ಹೆಸರು ಇತ್ತು. ಅವರು ಈಗ ಪಂಜಾಬ್‌ನ ಹೊಸ ಉಪಮುಖ್ಯಮಂತ್ರಿ' ಎಂದು ಬರೆದಿದ್ದಾರೆ.

ಸುಕಾಂತ ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಲೋಕಸಭಾ ಸದಸ್ಯ ಸುಕಾಂತ ಮಜುಂದಾರ್ ಅವರನ್ನು ಸೋಮವಾರ ಪಕ್ಷ ನೇಮಿಸಿದೆ.

ಬಹಳಷ್ಟು ನಾಯಕರು ಪಕ್ಷ ತೊರೆದು ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ನತ್ತ ಹೊರಟಿದ್ದಾರೆ. ಈ ಕಾರಣದಿಂದಾಗಿ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಂಘಟನೆಗೆ ಬಲ ನೀಡುವ ನಿಟ್ಟಿನಲ್ಲಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಗೆ ನಿರ್ಧರಿಸಿತು ಎನ್ನಲಾಗಿದೆ.

ಈವರೆಗೆ ಅಧ್ಯಕ್ಷರಾಗಿದ್ದ ಸಂಸದ ದಿಲೀಪ್ ಘೋಷ್ ಅವರನ್ನು ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಉತ್ತರಾಖಂಡದ ಮಾಜಿ ರಾಜ್ಯಪಾಲರಾದ ಬೇಬಿ ರಾಣಿ ಮೌರ್ಯ ಅವರನ್ನೂ ಪಕ್ಷದ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದಲಿತ ನಾಯಕಿಯಾದ ಮೌರ್ಯ, ತಮ್ಮ ತವರು ರಾಜ್ಯವಾದ ಉತ್ತರ ಪ್ರದೇಶದಲ್ಲಿ ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ ಎನ್ನಲಾಗಿದೆ.

ದೆಹಲಿ ವಿದ್ಯಾರ್ಥಿಯ ಮನವಿ ನಿರಾಕರಿಸಿದ 'ಸುಪ್ರೀಂ'

'ಶಾಲೆ ಪುನರಾರಂಭಿಸಿ ಎನ್ನಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೋವಿಡ್ ಎರಡನೇ ಅಲೆಯಿಂದ ದೇಶವು ಹೊರಬಂದಿದೆಯಾದರೂ, ಮುಂದಿನ ಅಲೆ ಯಾವಾಗ ಅಪ್ಪಳಿಸಲಿದೆ ಎಂಬುದು ಯಾರಿಗೂ ತಿಳಿದಿಲ್ಲ. ಹಾಗಾಗಿ, ರಾಜ್ಯ ಸರ್ಕಾರಗಳಿಗೆ ಶಾಲೆಗಳನ್ನು ಪುನರಾರಂಭಿಸಿ ಎಂದು ಹೇಳಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಶಾಲೆಗಳನ್ನು ತೆರೆದು ಭೌತಿಕವಾಗಿ ತರಗತಿ ಆರಂಭಿಸುವಂತೆ ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೋರಿ ದೆಹಲಿಯ 12ನೇ ತರಗತಿ ವಿದ್ಯಾರ್ಥಿ ಸಲ್ಲಿಸಿದ್ದ ಅರ್ಜಿ ಪರಿಗಣಿಸಲು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಬಿ.ವಿ.ನಾಗರತ್ನ ಅವರನ್ನೊಳಗೊಂಡ ನ್ಯಾಯಪೀಠವು ನಿರಾಕರಿಸಿದೆ.

'ಶಾಲೆಗಳನ್ನು ತೆರೆಯಿರಿ ಎಂದು ನಾವು ರಾಜ್ಯಗಳಿಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ. ಮುಂದಿನ ಅಲೆಯ ದಾಳಿ ಹೇಗಿರುತ್ತದೆ ಎಂಬುದು ನಮಗೆ ತಿಳಿದಿಲ್ಲ. ಮಕ್ಕಳು ಶಾಲೆಗಳಿಗೆ ಹೋಗುವುದಾಗಿ ಒಪ್ಪಿಕೊಂಡರೂ, ಅದನ್ನು ರಾಜ್ಯಗಳೇ ನಿರ್ಧರಿಸಬೇಕು, ನ್ಯಾಯಾಲಯ ಆಡಳಿತಾತ್ಮಕ ವಿಷಯಗಳನ್ನು ನಿರ್ಧರಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ಮಕ್ಕಳಿಗೆ ಫೈಜರ್‌ನ ಕೋವಿಡ್ ಲಸಿಕೆ

ಫ್ರಾಂಕ್‌ಫರ್ಟ್ (ಎಎಫ್‌ಪಿ): ಅಮೆರಿಕದ ಫೈಝರ್ ಮತ್ತು ಜರ್ಮನಿಯ ಬಯೋ ಎನ್ ಟೆಕ್ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆಯನ್ನು ಐದರಿಂದ ಹನ್ನೊಂದು ವರ್ಷದ ಮಕ್ಕಳಿಗೆ ನೀಡಬಹುದು ಎಂಬುದು ಕ್ಲಿನಿಕಲ್ ಟ್ರಯಲ್‌ನಲ್ಲಿ ಸಾಬೀತಾಗಿದೆ ಎಂದು ಕಂಪನಿಗಳು ಹೇಳಿವೆ.

ಅಮೆರಿಕ, ಜರ್ಮನಿ ಮತ್ತು ಐರೋಪ್ಯ ಒಕ್ಕೂಟದ ಹಲವು ದೇಶಗಳ ಮಕ್ಕಳನ್ನು ಈ ಕ್ಲಿನಿಕಲ್ ಟ್ರಯಲ್‌ಗೆ ಒಳಪಡಿಸಲಾಗಿತ್ತು. 12 ವರ್ಷದಿಂದ 18 ವರ್ಷದೊಳಗಿನ ಮಕ್ಕಳಿಗೆ ನೀಡುತ್ತಿರುವುದಕ್ಕಿಂತ ಕಡಿಮೆ ಡೋಸ್ ಅನ್ನು 5-11 ವರ್ಷದ ಮಕ್ಕಳಿಗೆ ನೀಡಿ ಕ್ಲಿನಿಕಲ್ ಟ್ರಯಲ್ ನಡೆಸಲಾಗಿತ್ತು. ಲಸಿಕೆ ಹಾಕಿಸಿಕೊಂಡ ಮಕ್ಕಳಲ್ಲಿ ಕೋವಿಡ್ ಪ್ರತಿರೋಧ ಶಕ್ತಿ ಹೆಚ್ಚಾಗಿದೆ ಎಂದು ಕಂಪನಿಗಳು ಹೇಳಿವೆ.

12 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ಪ್ರತಿ ಡೋಸ್‌ನಲ್ಲಿ 20 ಮಿಲಿಗ್ರಾಂನಷ್ಟು ಲಸಿಕೆ ನೀಡಲಾಗುತ್ತಿದೆ. ಆದರೆ 5-10 ವರ್ಷದ ಮಕ್ಕಳಿಗೆ 10 ಮಿಲಿಗ್ರಾಂನಷ್ಟು ಲಸಿಕೆ ನೀಡಿ ಪರೀಕ್ಷಿಸಲಾಗಿದೆ. ಕಡಿಮೆ ಪ್ರಮಾಣದ ಡೋಸ್ ನೀಡಿದ್ದರೂ, ಫಲಿತಾಂಶ ಒಂದೇ ಸ್ವರೂಪದ್ದಾಗಿದೆ. ಈ ಮಕ್ಕಳಿಗೆ 21 ದಿನಗಳ ಅಂತರದಲ್ಲಿ ಎರಡನೇ ಡೋಸ್ ಹಾಕಲಾಗಿದೆ ಎಂದು ಕಂಪನಿಗಳು ಮಾಹಿತಿ ನೀಡಿವೆ.

ಹೆಚ್ಚುವರಿ ಲಸಿಕೆ ರಫ್ತು– ಕೇಂದ್ರ

ನವದೆಹಲಿ (ಪಿಟಿಐ): 'ಲಸಿಕೆ ಮೈತ್ರಿ' ಯೋಜನೆಯಡಿ ಭಾರತವು ಹೆಚ್ಚುವರಿಯಾಗಿ ಲಭ್ಯವಿರುವ ಕೋವಿಡ್ ಲಸಿಕೆಗಳ ರಫ್ತು ಪ್ರಕ್ರಿಯೆಗೆ ಮುಂದಿನ ತಿಂಗಳು ಚಾಲನೆ ನೀಡಲಿದೆ.

'ಜಗತ್ತಿನ ಲಸಿಕೆ ಬೇಡಿಕೆ ಈಡೇರಿಸಲು ಕೋವ್ಯಾಕ್ಸ್ ಬದ್ಧತೆಯಂತೆ ರಫ್ತು ಮಾಡಲಾಗುತ್ತದೆ. ಆದರೆ, ದೇಶದ ಜನರಿಗೆ ಲಸಿಕೆ ನೀಡುವುದೇ ಮೊದಲ ಆದ್ಯತೆ' ಎಂದು ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದರು.

ಅಂಗವಿಕಲರಿಗೆ ಲಸಿಕೆ: ಪ್ರತಿಕ್ರಿಯೆ ಕೇಳಿದ ಸುಪ್ರೀಂ

ನವದೆಹಲಿ: ಅಶಕ್ತರು ಮತ್ತು ಅಂಗವಿಕಲರ 'ಮನೆ ಮನೆಗೆ ತೆರಳಿ ಕೋವಿಡ್ ಲಸಿಕೆ' ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ವಾರದೊಳಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ಕುರಿತು ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿರುವ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಬಿ.ವಿ. ನಾಗರತ್ನ ಅವರನ್ನೊಳಗೊಂಡ ಪೀಠ, 'ಅಂಗವಿಕಲರಿಗೆ ಲಸಿಕೆ ನೀಡಲು ಈವರೆಗೆ ಕೇಂದ್ರ ಕೈಗೊಂಡಿರುವ ಕ್ರಮಗಳು ಮತ್ತು ಹೊಸ ಕ್ರಮಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುವ ಕುರಿತು ಮಾಹಿತಿ ನೀಡುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೇಳಿದೆ.

ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವ ಇವರಾ ಫೌಂಡೇಷನ್ ಸ್ವಯಂ ಸೇವಾ ಸಂಸ್ಥೆ ಪರ ಹಾಜರಾಗಿದ್ದ ವಕೀಲ ಪಂಕಜ್ ಸಿನ್ಹಾ, 'ಮನೆ ಮನೆಗೆ ತೆರಳಿ ಕೋವಿಡ್ ಲಸಿಕೆ ನೀಡುವುದರಿಂದ, ಹೆಚ್ಚಿನ ಪ್ರಮಾಣದಲ್ಲಿ ಲಸಿಕೆಯನ್ನು ನೀಡಬಹುದು' ಎಂದು ಭಾರತೀಯ ವೈದ್ಯಕೀಯ ಸಂಘ ಸಲ್ಲಿಸಿರುವ ದಾಖಲೆ ಸೇರಿದಂತೆ ಎರಡು ದಾಖಲೆಯನ್ನು ಉಲ್ಲೇಖಿಸಿದರು.

'ನೀಟ್‌ನಲ್ಲಿ ಬದಲಾವಣೆ 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ಮುಂದಿನ ನವೆಂಬರ್‌ನಲ್ಲಿ ನಡೆಯುವ 'ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ – ವಿಶೇಷ ಪರಿಣತಿ (ನೀಟ್-ಎಸ್‌ಎಸ್)' ಪರೀಕ್ಷೆ ಕ್ರಮದಲ್ಲಿನ 'ಕಡೆಗಳಿಗೆಯ ಬದಲಾವಣೆ'ಯನ್ನು ಪ್ರಶ್ನಿಸಿದ್ದ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಬಿ.ವಿ.ನಾಗರತ್ನ ಅವರಿದ್ದ ಪೀಠ ಈ ಬಗ್ಗೆ ಪ್ರತಿಕ್ರಿಯಿಸಲು ಸೂಚಿಸಿ ಕೇಂದ್ರ ಸರ್ಕಾರ, ರಾಷ್ಟ್ರೀಯ ಪರೀಕ್ಷಾ ಮಂಡಳಿ, ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ನೋಟಿಸ್ ನೀಡಿತು. 41 ಮಂದಿ ಸ್ನಾತಕೋತ್ತರ ಪದವೀಧರ ವೈದ್ಯರು ಅರ್ಜಿ ಸಲ್ಲಿಸಿದ್ದರು. ವಿಚಾರಣೆಯನ್ನು ಸೆ. 27ಕ್ಕೆ ನಿಗದಿಪಡಿಸಿದ್ದು, ಲಿಖಿತ ಸ್ವರೂಪದಲ್ಲಿ ದೂರಿನ ವಿವರಣೆ ಸಲ್ಲಿಸಲು ಅರ್ಜಿದಾರರಿಗೆ ಅವಕಾಶ ಕಲ್ಪಿಸಿತು.

ಸ್ನಾತಕೋತ್ತರ ಪದವಿ ವೈದ್ಯರಾದ ಅರ್ಜಿದಾರರು ನೀಟ್–ಎಸ್‌ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸೂಪರ್ ಸ್ಪೆಷಲಿಸ್ಟ್ ಅರ್ಹತೆ ಪಡೆಯುವ ಆಕಾಂಕ್ಷೆ ಹೊಂದಿದ್ದಾರೆ. ಇವರು ಪರೀಕ್ಷಾ ದಿನಾಂಕವನ್ನು ಜುಲೈ 23ರಂದು, ಪರೀಕ್ಷೆ ಸ್ವರೂಪದ ಬದಲಾವಣೆಯನ್ನು ಆ. 31ರಂದು ಪ್ರಕಟಿಸಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಶ್ಯಾಮ್ ದಿವನ್ ಅವರು, ನೀಟ್–ಎಸ್‌ಎಸ್ 2021 ಪರೀಕ್ಷೆಯು ನಿಗದಿಯಂತೆ ನವೆಂಬರ್ 13–14ರಂದು ನಡೆಯಲಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಒಮ್ಮೆ ವೇಳಾಪಟ್ಟಿ ಪ್ರಕಟಿಸಿದ ಬಳಿಕ ಪರೀಕ್ಷಾ ಸ್ವರೂಪದಲ್ಲಿ ಬದಲಾವಣೆ ತರುವಂತಿಲ್ಲ ಎಂದು ವಾದಿಸಿದರು. ಒಂದು ಹಂತದಲ್ಲಿ ನಡೆಯುವ ಸೂಪರ್ ಸ್ಪೆಷಾಲಿಟಿ ಪರೀಕ್ಷೆಗೆ ವಿವಿಧ ಸ್ತರದ ಸ್ನಾತಕೋತ್ತರ ಪದವೀಧರ ವೈದ್ಯರು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಅತ್ಯಾಚಾರ: ವಿಡಿಯೊ ಹರಿಬಿಟ್ಟ ಆರೋಪಿಗಳು

ಮುಜಾಫರ್‌ನಗರ (ಪಿಟಿಐ): 'ಇಲ್ಲಿನ ಭೋಪಾ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ 17 ವರ್ಷದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿರುವ ಇಬ್ಬರು ವ್ಯಕ್ತಿಗಳು, ಅತ್ಯಾಚಾರವನ್ನು ರೆಕಾರ್ಡ್ ಮಾಡಿ ಅದರ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಘಟನೆ ನಡೆದಿದೆ' ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಈ ಸಂಬಂಧ ಆರೋಪಿಗಳಾದ ಶುಭಂ ಮತ್ತು ಆಶಿಶ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಇಬ್ಬರೂ ತಲೆಮರೆಸಿಕೊಂಡಿದ್ದಾರೆ ಎಂದು ಠಾಣಾಧಿಕಾರಿ ಸುಭಾಷ್ ಬಾಬು ತಿಳಿಸಿದ್ದಾರೆ. ಸಂತ್ರಸ್ತೆಯ ತಾಯಿ ನೀಡಿರುವ ದೂರಿನ ಪ್ರಕಾರ, ಆರೋಪಿಗಳು ಬಾಲಕಿಗೆ ಹಣ್ಣು ನೀಡುವ ಆಮಿಷವೊಡ್ಡಿ ತೋಟಕ್ಕೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಈ ಅಪರಾಧದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾದ ನಂತರ ಘಟನೆ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯೇಕ ಘಟನೆಯೊಂದರಲ್ಲಿ, ಕೊತ್ವಾಲಿ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದ ಮೇಲೆ ಬಾಬ್ಬಿ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 'ಹೊಲವೊಂದರಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯ ಮೇಲೆ ಬಾಬ್ಬಿ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಇದೇ ವೇಳೆ ಮಹಿಳೆ ಜೋರಾಗಿ ಕೂಗಾಡಿದಾಗ ಆರೋಪಿ ಅಲ್ಲಿಂದ ಓಡಿಹೋಗಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಜ್ ಕುಂದ್ರಾಗೆ ಜಾಮೀನು

ಮುಂಬೈ: ಅಶ್ಲೀಲ ಚಿತ್ರ ನಿರ್ಮಾಣ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಉದ್ಯಮಿ, ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಪತಿ ರಾಜ್ ಕುಂದ್ರಾಗೆ ಮುಂಬೈ ನ್ಯಾಯಾಲಯವು ಸೋಮವಾರ ಜಾಮೀನು ಮಂಜೂರು ಮಾಡಿದೆ.

ರಾಜ್ ಕುಂದ್ರಾಗೆ ₹50,000 ಶ್ಯೂರಿಟಿಯ ಆಧಾರದ ಮೇಲೆ ಷರತ್ತುಬದ್ಧ ಜಾಮೀನು ನೀಡಲಾಗಿದೆ.

'ಮೂಲ ಎಫ್‌ಐಆರ್‌ನಲ್ಲಿ ನನ್ನ ಹೆಸರಿಲ್ಲದಿದ್ದರೂ ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ' ಎಂದು ರಾಜ್ ಕುಂದ್ರಾ ಅರ್ಜಿಯಲ್ಲಿ ದೂರಿದ್ದಾರೆ.

ವಂಚನೆ: ತೇಜಸ್ವಿ ಯಾದವ್, ಮೀಸಾ ವಿರುದ್ಧ ಎಫ್‌ಐಆರ್

ಪಟ್ನಾ: 2019ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡುವುದಾಗಿ ಭರವಸೆ ನೀಡಿ ವ್ಯಕ್ತಿಯೊಬ್ಬರಿಗೆ ₹ 5 ಕೋಟಿ ವಂಚಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್, ಅವರ ಸಹೋದರಿ ಹಾಗೂ ಸಂಸದೆ ಮೀಸಾ ಭಾರತಿ ಮತ್ತು ಇತರ ರಾಜಕಾರಣಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪಟ್ನಾ ಹೈಕೋರ್ಟ್ ಪೊಲೀಸರಿಗೆ ನಿರ್ದೇಶನ ನೀಡಿದೆ.

ಕಾಂಗ್ರೆಸ್‌ನೊಂದಿಗೆ ಸಂಪರ್ಕವಿರುವ ಮತ್ತು ಭಾಗಲ್ಪುರ ಕ್ಷೇತ್ರದಿಂದ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ಸಂಜೀವ್ ಕುಮಾರ್ ಸಿಂಗ್ ಎಂಬುವರು ತಮಗಾದ ವಂಚನೆಯ ಕುರಿತು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು.

ಪ್ರತಿ ರೂಪಾಯಿ ಜನರ ಸೇವೆಗೇ ಮೀಸಲು: ಸೋನುಸೂದ್

ಮುಂಬೈ (ಪಿಟಿಐ): 'ನನ್ನ ಪ್ರತಿಷ್ಠಾನದಲ್ಲಿ ಇರುವ ಪ್ರತಿಯೊಂದು ರೂಪಾಯಿ ಕೂಡಾ ಜೀವ ಉಳಿಸುವ ತನ್ನ ಸರದಿಗಾಗಿ ಕಾಯುತ್ತಿದೆ. ಅದನ್ನು ಅಗತ್ಯ ಸಂದರ್ಭದಲ್ಲಿ ಜನರ ರಕ್ಷಣೆಗೇ ಬಳಸಲಾಗುವುದು' ಎಂದು ಬಾಲಿವುಡ್ ನಟ, 48 ವರ್ಷದ ಸೋನು ಸೂದ್ ಹೇಳಿದ್ದಾರೆ.

ಸೋನುಸೂದ್ ₹ 20 ಕೋಟಿ ತೆರಿಗೆ ವಂಚಿಸಿದ್ದಾರೆ ಎಂಬ ಆದಾಯ ತೆರಿಗೆ ಇಲಾಖೆಯು ನೀಡಿದ್ದ ಹೇಳಿಕೆಗೆ ಮೊದಲಬಾರಿಗೆ ಪ್ರತಿಕ್ರಿಯಿಸಿರುವ ಅವರು ಈ ಮಾತು ಹೇಳಿದ್ದಾರೆ. 'ಕೆಲ ಅತಿಥಿಗಳನ್ನು ಗಮನಿಸುವುದರಲ್ಲಿ ಹೆಚ್ಚು ನಿರತನಾಗಿದ್ದೆ.' ಎಂದು ಹೇಳಿದ್ದಾರೆ.

ರಾಹುಲ್ ವಿರುದ್ಧದ ಮೊಕದ್ದಮೆ ವಜಾ

ಮುಂಬೈ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 2014ರ ತಮ್ಮ ಭಾಷಣದ ಮುದ್ರಿತ ಪ್ರತಿಯಲ್ಲಿ, ಮಹಾತ್ಮ ಗಾಂಧಿ ಹತ್ಯೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಕಾರಣ ಎಂದು ಹೇಳಿದ್ದು, ಈ ಸಂಬಂಧ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುವಂತೆ ಕೋರಿ ಆರ್‌ಎಸ್‌ಎಸ್ ಕಾರ್ಯಕರ್ತ ರಾಜೇಶ್ ಕುಂಟೆ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ವಜಾಗೊಳಿಸಿದೆ.

ಮ್ಯಾಜಿಸ್ಟ್ರೇಟ್ ಕೋರ್ಟ್ ಮೇಲೆ ವಿಶ್ವಾಸವಿಲ್ಲ: ಕಂಗನಾ

ಮುಂಬೈ (ಪಿಟಿಐ): ಚಿತ್ರ ಸಾಹಿತಿ ಜಾವೇದ್ ಅಖ್ತರ್ ಅವರು ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಬಾಲಿವುಡ್ ನಟಿ ಕಂಗನಾ ರನೌತ್ ಇಲ್ಲಿನ ಕೋರ್ಟ್‌ಗೆ ಸೋಮವಾರ ಹಾಜರಾದರು.

'ನನಗೆ ಮ್ಯಾಜಿಸ್ಟ್ರೇಟ್ ಕೋರ್ಟ್ ಮೇಲೆ ವಿಶ್ವಾಸವಿಲ್ಲ. ಜಾಮೀನು ಪಡೆಯಬಹುದಾದ ಪ್ರಕರಣದಲ್ಲೂ ತನ್ನ ಎದುರು ಹಾಜರಾಗದಿದ್ದರೆ ವಾರಂಟ್ ನೀಡಲಾಗುವುದು ಎಂದು 'ಬೆದರಿಕೆ ಹಾಕಿದೆ' ಎಂದು ನಟಿ ಪ್ರತಿಕ್ರಿಯಿಸಿದರು.

ರಾಜಸ್ಥಾನದಲ್ಲಿ ಗುಂಪುದಾಳಿ: ಗಾಯಾಳು ಯುವಕ ಸಾವು

ಜೈಪುರ (ಪಿಟಿಐ): ಮಹಿಳೆಗೆ ಮೋಟರ್‌ಸೈಕಲ್‌ನಿಂದ ಡಿಕ್ಕಿ ಹೊಡೆದಿದ್ದ ಪ್ರಕರಣದ ನಂತರ ಗುಂಪುದಾಳಿಗೆ ಒಳಗಾಗಿ ತೀವ್ರವಾಗಿ ಗಾಯಗೊಂಡಿದ್ದ ವ್ಯಕ್ತಿಯು ಇಲ್ಲಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ರಾಜಸ್ತಾನದ ಅಲ್ವಾರ್ ಜಿಲ್ಲೆಯಲ್ಲಿ ಕೃತ್ಯ ನಡೆದಿದೆ. ಯೋಗೇಶ್ (19) ಮೃತ ವ್ಯಕ್ತಿ. ಗುಂಪುದಾಳಿ ನಡೆಸಿದ ವ್ಯಕ್ತಿಗಳನ್ನು ಬಂಧಿಸಬೇಕು ಎಂದು ಕುಟುಂಬ ಸದಸ್ಯರು ಒತ್ತಾಯಿಸಿದ್ದಾರೆ.

ಸೆಪ್ಟೆಂಬರ್ 15ರಂದು ಯೋಗೇಶ್ ಮೋಟರ್‌ಸೈಕಲ್‌ನಲ್ಲಿ ಬರುತ್ತಿದ್ದು, ಅಲ್ಲಿನ ಮೀನಾ ಕಾ ಬಾಸ್ ಪ್ರದೇಶದಲ್ಲಿ ಮಹಿಳೆಯೊಬ್ಬರಿಗೆ ಡಿಕ್ಕಿ ಹೊಡೆದಿದ್ದಾನೆ. ಆಕ್ರೋಶಗೊಂಡ ಸ್ಥಳೀಯರು ಗುಂಪುಗೂಡಿ ಯೋಗೇಶ್‌ಗೆ ತೀವ್ರವಾಗಿ ಥಳಿಸಿದ್ದಾರೆ. ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಟೇಬಲ್ ಟೆನಿಸ್: ನಿಹಾರಿಕಾ, ವರುಣ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಟಿಟಿಎ ಪ್ರತಿನಿಧಿಸಿದ್ದ ವರುಣ್ ಕಶ್ಯಪ್ ಮತ್ತು ಎಂಎಸ್‌ಟಿಟಿಎನ ನಿಹಾರಿಕಾ ಅವರು ಸಿ.ವಿ.ಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಸಬ್ ಜೂನಿಯರ್ ವಿಭಾಗದಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ವರುಣ್ 11-7, 11-6, 11-5ರಲ್ಲಿ ಜಿಇಎಂನ ಋಷಿಕೇಶ್ ಶೆಟ್ಲೂರ್ ವಿರುದ್ಧ ಜಯ ಗಳಿಸಿದರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ನಿಹಾರಿಕಾ 11-2, 11-7, 6-11, 11-8ರಲ್ಲಿ ಬಿಟಿಟಿಯ ಸಾನ್ವಿ ಮಂದೇಕರ್ ಎದುರು ಗೆಲುವು ದಾಖಲಿಸಿದರು.



ಸಾನ್ವಿ ಮಂದೇಕರ್, ನಿಹಾರಿಕಾ, ತೇಶುಬ್ ದಿನೇಶ್ ಮತ್ತು ವರುಣ್ ಕಶ್ಯಪ್

ತೇಶುಭ್, ಸಾನ್ವಿ ಜಯಭೇರಿ: ಕೆಡೆಟ್ ವಿಭಾಗದಲ್ಲಿ ಚೆಕ್‌ಮೇಟ್‌ನ ತೇಶುಬ್ ದಿನೇಶ್ ಮತ್ತು ಬಿಟಿಟಿಎನ ಸಾನ್ವಿ ವಿಶಾಲ್ ಮಂದೇಕರ್ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಜಯಭೇರಿ ಮೊಳಗಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ತೇಶುಬ್ 13-11, 9-11, 11-6, 11-8ರಲ್ಲಿ ಚೆಕ್‌ಮೇಟ್‌ನ ಮೋಹನೀಶ್ ನಂದಿ ಎದುರು ಜಯ ಗಳಿಸಿದರು. ಬಾಲಕಿಯರ ವಿಭಾಗದ ಅಂತಿಮ ಹಣಾಹಣಿಯಲ್ಲಿ ಸಾನ್ವಿ, ಬಿಟಿಟಿನ ಆಯುಷಿ ಬಾಲಕೃಷ್ಣ ಗೋಡ್ಸೆ ಎದುರು 9-11, 11-7, 11- 7, 4-11, 11-6ರಲ್ಲಿ ಗೆದ್ದರು.



ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಯೋಜಿಸಿದ್ದ ಎಸ್‌.ರಂಗರಾಜನ್ ಸ್ಮಾರಕ 'ಸಿ' ಡಿವಿಷನ್ ಲೀಗ್‌ನ ಪ್ರಶಸ್ತಿಯನ್ನು ಭಾರತ್ ಎಸ್‌ಯು ತಂಡ ಗೆದ್ದುಕೊಂಡಿತು. ಅಕ್ಷಯ್ ಪ್ರಸಾದ್ (25 ಪಾಯಿಂಟ್ಸ್) ಮತ್ತು ಅರ್ಜುನ್ ಯಾದವ್ (22) ಅವರ ಅಮೋಘ ಆಟದ ನೆರವಿನಿಂದ ಸೋಮವಾರದ ಪಂದ್ಯದಲ್ಲಿ ಭಾರತ್ ತಂಡ ದೇವಾಂಗ ಯೂನಿಯನ್ ವಿರುದ್ಧ 85–82ರಲ್ಲಿ ಜಯ ಗಳಿಸಿತು. ನಿಂತವರು (ಎಡದಿಂದ): ದಿನೇಶ್, ರಾಘವ ಕುಮಾರ್, ಅನಿರುದ್ಧ, ಪಟ್ನಕರ್ (ಮ್ಯಾನೇಜರ್), ಶಿವರಾಮಕೃಷ್ಣನ್ (ಕೋಚ್), ವಿಜಯ್ (ಸಹಾಯಕ ಕೋಚ್), ಪ್ರಣವ್, ನಕುಲ್, ಅರ್ಜುನ್ ಯಾದವ್. ಕುಳಿತವರು: ಶ್ರೀಕಾಂತ್ (ವೈಎಂಎಂಎ ಕಾರ್ಯದರ್ಶಿ), ಶಾಸಕ ಹನುಮಂತ ನಿರಾಣಿ, ಬಿಎಫ್‌ಐ ಅಧ್ಯಕ್ಷ ಕೆ.ಗೋವಿಂದರಾಜ್, ಕೆಎಸ್‌ಬಿಬಿಎ ಅಧ್ಯಕ್ಷ ಬಿ.ದಯಾನಂದ. ಕೆಳಗಿನ ಸಾಲು: ಅರೆನ್ಮ ಡಿ'ಸೋಜಾ, ಅಕ್ಷಯ್ ಪ್ರಸಾದ್, ಶ್ರೇಯಸ್, ಶುಭಂ ಸಿಂಗ್, ಭುವನೇಶ್, ಉಜ್ವಲ್.

ವಿಶ್ವಕಪ್: ಯುಎಇಗೆ ಶುಲ್ಕ ಭರಿಸಿದ ಬಿಸಿಸಿಐ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಆರಂಭವಾಗಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಆಯೋಜನೆಗಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಯುನೈಟೆಡ್ ಅರಬ್ ಎಮಿರೆಟ್ಸ್ ಮಂಡಳಿಗೆ ₹ 11.5 ಕೋಟಿ ಪಾವತಿಸಲಿದೆ.

'ಇಸಿಬಿಗೆ ₹ 11.5 ಕೋಟಿ ನಿರ್ದಿಷ್ಟ ಶುಲ್ಕವನ್ನು ಪಾವತಿಸಲಿದೆ. ಕಾರ್ಯಚಟುವಟಿಕೆ ಶುಲ್ಕ ₹ 40.5 ಕೋಟಿಯನ್ನು ಐಸಿಸಿಯು ಭರಿಸಲಿದೆ. ಒಟ್ಟಾರೆ ₹ 52 ಕೋಟಿ ಶುಲ್ಕವನ್ನು ಪಾವತಿಸಲಾಗುವುದು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಟೂರ್ನಿಯ ಆರು ಪಂದ್ಯಗಳು ಮಾತ್ರ ಓಮನ್‌ನಲ್ಲಿ ನಡೆಯಲಿವೆ. ಉಳಿದೆಲ್ಲ ಪಂದ್ಯಗಳೂ ಯುಎಇಯಲ್ಲಿ ಆಯೋಜನೆಗೊಳ್ಳಲಿವೆ.





ರಸೆಲ್, ವರುಣ್ ದಾಳಿಗೆ ತತ್ತರಿಸಿದ ವಿರಾಟ್ ಬಳಗ; ಗಿಲ್, ವೆಂಕಟೇಶ್ ಮೋಹಕ ಜೊತೆಯಾಟ

ಕಳಪೆ ಬ್ಯಾಟಿಂಗ್‌ಗೆ ದಂಡ ತೆತ್ತ ಆರ್‌ಸಿಬಿ

ಅಬುಧಾಬಿ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ 200ನೇ ಪಂದ್ಯ ವಾಡಿದ ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೋಮವಾರ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಹಣಾಹಣಿಯಲ್ಲಿ ನೂರರ ಗಡಿ ದಾಟಲಿಲ್ಲ.

ಇದರಿಂದಾಗಿ ಟೂರ್ನಿಯ ಎರಡನೇ ಹಂತದ ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು 9 ವಿಕೆಟ್‌ಗಳ ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಆರ್‌ಸಿಬಿ ತಂಡಕ್ಕೆ ಕೋಲ್ಕತ್ತ ತಂಡದ ಸ್ಪಿನ್ನರ್ ವರುಣ್ ಚಕ್ರವರ್ತಿ ಮತ್ತು ವಿಂಡೀಸ್ ದೈತ್ಯ ಆ್ಯಂಡ್ರೆ ರಸೆಲ್ ಬಲವಾದ ಪೆಟ್ಟು ಕೊಟ್ಟರು. ಇಬ್ಬರೂ ತಲಾ ಮೂರು ವಿಕೆಟ್ ಗಳಿಸಿದರು. ಇದರಿಂದಾಗಿ ವಿರಾಟ್ ಬಳಗವು 19 ಓವರ್‌ಗಳಲ್ಲಿ 92 ರನ್ ಗಳಿಸಿತು.

ಈ ಅಲ್ಪಮೊತ್ತ ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 10 ಓವರ್‌ಗಳಲ್ಲಿ 1 ವಿಕೆಟ್‌ಗೆ 94 ರನ್ ಗಳಿಸಿ ಜಯಭೇರಿ ಬಾರಿಸಿತು. ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ (48 ರನ್) ಮತ್ತು ವೆಂಕಟೇಶ್ ಅಯ್ಯರ್ (ಔಟಾಗದೇ 41) ತಂಡವನ್ನು ಗೆಲುವಿನ ದಡ ಸೇರಿಸಿದರು.

ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್, ಎಬಿ ಡಿವಿಲಿಯರ್ಸ್ ಅವರಂತಹ ಅನುಭವಿ ಆಟಗಾರರ ವೈಫಲ್ಯದಿಂದಾಗಿ ಆರ್‌ಸಿಬಿ ಸೋತಿತು.

ವಿರಾಟ್, ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಪ್ರಸಿದ್ಧ ಕೃಷ್ಣ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದರು.

ಈ ಐಪಿಎಲ್ ನಂತರ ಆರ್‌ಸಿಬಿ ನಾಯಕತ್ವವನ್ನು ತೊರೆಯುವುದಾಗಿ ವಿರಾಟ್ ಘೋಷಿಸಿದ್ದಾರೆ. 'ದ್ವಿಶತಕ'ದ ಪಂದ್ಯದಲ್ಲಿ ಅವರಿಂದ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಹುಸಿಯಾಯಿತು.

ದೇವದತ್ತ ಪಡಿಕ್ಕಲ್ (22 ರನ್), ಶ್ರೀಕರ್ ಭರತ್ (16 ರನ್), ಗ್ಲೆನ್ ಮ್ಯಾಕ್ಸ್‌ವೆಲ್ (10) ಮತ್ತು ಕೊನೆಯಲ್ಲಿ ಹರ್ಷಲ್ ಪಟೇಲ್ (12 ರನ್) ಬಿಟ್ಟರೆ ಉಳಿದವರೆಲ್ಲರೂ ಒಂದಂಕಿಯೊಂದಿಗೆ ನಿರ್ಗಮಿಸಿದರು.

ಆಪದ್ಬಾಂಧವ ಎಬಿ ಡಿವಿಲಿಯರ್ಸ್ ಅವರಿಗೆ ಖಾತೆ ತೆರೆಯಲು ರಸೆಲ್ ಬಿಡಲಿಲ್ಲ. ಎದುರಿಸಿದ ಮೊದಲ ಎಸೆತದಲ್ಲಿಯೇ ಅವರು ಬೌಲ್ಡ್ ಆದರು.

ಕೋಲ್ಕತ್ತ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರ ಮೋಡಿಗೆ ಮ್ಯಾಕ್ಸ್‌ವೆಲ್, ಸಚಿನ್ ಬೇಬಿ ಮತ್ತು ಶ್ರೀಲಂಕಾದ ಆಟಗಾರ ವನಿಂದು ಹಸರಂಗಾ ಮರುಳಾದರು.

ದೇವದತ್ತ ಆಟಕ್ಕೆ ಲಾಕಿ ಫರ್ಗ್ಯುಸನ್ ತಡೆಯೊಡ್ಡಿದರು. ಕೊನೆಯ ಓವರ್‌ಗಳಲ್ಲಿ ರನ್ ಗಳಿಸುವ ಯತ್ನದಲ್ಲಿದ್ದ ಹರ್ಷಲ್ ಪಟೇಲ್‌ಗೂ ಅವರೇ ಪೆವಿಲಿಯನ್ ದಾರಿ ತೋರಿದರು.

ಏಯಾನ್ ಮಾರ್ಗನ್ ನಾಯಕತ್ವದ ಬಳಗವು ಯಾವುದೇ ಹಂತದಲ್ಲಿಯೂ ಪಂದ್ಯದ ಮೇಲಿನ ಹಿಡಿತ ಸಡಿಲಿಸಲಿಲ್ಲ. ಬ್ಯಾಟ್ಸ್‌ಮನ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿನಿಲ್ಲದಂತೆನೋಡಿಕೊಂಡರು.

ಇದರಿಂದಾಗಿ ಆರ್‌ಸಿಬಿ ಇನಿಂಗ್ಸ್‌ನಲ್ಲಿ ಒಂದೇ ಒಂದು ಸಿಕ್ಸರ್ ಕೂಡ ದಾಖಲಾಗಲಿಲ್ಲ. ಕೆಕೆಆರ್ ಇನಿಂಗ್ಸ್‌ನಲ್ಲಿ ಎರಡು ಸಿಕ್ಸರ್‌ಗಳು ಸಿಡಿದವು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 92 (19 ಓವರ್)

ವಿರಾಟ್ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 5 (4 ಎ, 4x1), ದೇವದತ್ತ ಸಿ ಕಾರ್ತಿಕ್ ಬಿ ಫರ್ಗ್ಯೂಸನ್ 22 (20 ಎ, 4x3), ಭರತ್ ಸಿ ಗಿಲ್ ಬಿ ರಸೆಲ್ 16 (19 ಎ, 4x1), ಮ್ಯಾಕ್ಸ್‌ವೆಲ್ ಬಿ ವರುಣ್ 10 (17 ಎ), ಡಿವಿಲಿಯರ್ಸ್ ಬಿ ರಸೆಲ್ 0 (1 ಎ), ಸಚಿನ್ ಸಿ ರಾಣಾ ಬಿ ವರುಣ್ 7(17 ಎ), ಹಸರಂಗ ಎಲ್‌ಬಿಡಬ್ಲ್ಯು ಬಿ ವರುಣ್ 0 (1 ಎ), ಜೆಮೀಸನ್ ರನೌಟ್ (ವರುಣ್) 4 (12 ಎ), ಹರ್ಷಲ್ ಬಿ ಫರ್ಗ್ಯುಸನ್ 12 (10 ಎ, 4x2), ಸಿರಾಜ್ ಸಿ ವರುಣ್ ಬಿ ರಸೆಲ್ 8 (10 ಎ, 4x1), ಚಾಹಲ್ ಔಟಾಗದೆ 2 (6 ಎ)

ಇತರೆ (ಲೆಗ್‌ಬೈ 2, ನೋ ಬಾಲ್ 3, ವೈಡ್ 1) 6

ವಿಕೆಟ್ ಪತನ: 1-10 (ವಿರಾಟ್ ಕೊಹ್ಲಿ, 1.4), 2-41 (ದೇವದತ್ತ ಪಡಿಕ್ಕಲ್, 5.6), 3-51 (ಎಸ್.ಭರತ್, 8.1), 4-52 (ಎಬಿ ಡಿವಿಲಿಯರ್ಸ್, 8.4), 5-63 (ಗ್ಲೆನ್ ಮ್ಯಾಕ್ಸ್‌ವೆಲ್, 11.4), 6-63 (ವಾಣಿಂದು ಹಸರಂಗ, 11.5), 7-66 (ಸಚಿನ್ ಬೇಬಿ, 13.4), 8-76 (ಕೈಲ್ ಜೆಮೀಸನ್, 15.3), 9-83 (ಹರ್ಷಲ್ ಪಟೇಲ್, 16.3), 10-92 (ಮೊಹಮ್ಮದ್ ಸಿರಾಜ್, 18.6)

ಬೌಲಿಂಗ್: ವರುಣ್ ಚಕ್ರವರ್ತಿ 4–0–13–3, ಪ್ರಸಿದ್ಧ ಕೃಷ್ಣ 4–0–24–1, ಲಾಕಿ ಫರ್ಗ್ಯುಸನ್ 4–0–24–2, ಸುನಿಲ್ ನಾರಾಯಣ್ 4–0–20–0, ಆ್ಯಂಡ್ರೆ ರಸೆಲ್ 3–0–9–3 .

ಕೋಲ್ಕತ್ತ ನೈಟ್ ರೈಡರ್ಸ್ 1ಕ್ಕೆ 94 (10 ಓವರ್)

ಶುಭಮನ್ ಸಿ ಸಿರಾಜ್ ಬಿ ಚಾಹಲ್ 48 (34 ಎ, 4x6, 6x1), ವೆಂಕಟೇಶ್ ಔಟಾಗದೆ 41 (27 ಎ, 4x7, 6x1), ರಸೆಲ್ ಔಟಾಗದೆ 0 (0 ಎಸೆತ)

ಇತರೆ (ನೋಬಾಲ್ 1, ವೈಡ್ 4) 5

ವಿಕೆಟ್ ಪತನ: 1-82 (ಶುಭಮನ್ ಗಿಲ್, 9.1)

ಬೌಲಿಂಗ್: ಮೊಹಮ್ಮದ್ ಸಿರಾಜ್ 2–0–12–0, ಕೈಲ್ ಜೆಮೀಸನ್ 2–0–26–0, ವಾಣಿಂದು ಹಸರಂಗ 2–0–20–0, ಯಜುವೇಂದ್ರ ಚಾಹಲ್ 2–0–23–1, ಹರ್ಷಲ್ ಪಟೇಲ್ 2–0–13–0

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 9 ವಿಕೆಟ್‌ಗಳ ಜಯ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	380
ಕೆ.ಎಲ್.ರಾಹುಲ್	ಪಂಜಾಬ್	331
ಡುಪ್ಲೆಸಿ	ಚೆನ್ನೈ	320

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	17
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೊರಿಸ್	ರಾಜಸ್ಥಾನ್	14

ಲೈಂಗಿಕ ದೌರ್ಜನ್ಯ ತಡೆ ನಿಯಮ ಜಾರಿಗೆ ಅನುಮೋದನೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪಿಒಎಸ್‌ಎಚ್) ಜಾರಿಗೊಳಿಸಲು ಸೋಮವಾರ ಅಪೆಕ್ಸ್ ಕೌನ್ಸಿಲ್ ಸಭೆ ಅನುಮೋದನೆ ನೀಡಿತು.

ಈ ನಿಯಮದ ವ್ಯಾಪ್ತಿಗೆ ಭಾರತದ ಕ್ರಿಕೆಟಿಗರು ಒಳಪಡಲಿದ್ದಾರೆ.

ಇಲ್ಲಿಯವರೆಗೂ ಲೈಂಗಿಕ ಶೋಷಣೆ ತಡೆಗಾಗಿ ಕಟ್ಟುನಿಟ್ಟಾದ ನಿಯಮ ಮಂಡಳಿಯಲ್ಲಿ ಇರಲಿಲ್ಲ. ಈಗ ಅನುಮೋದನೆಗೊಂಡಿರುವ ನಿಯಮವು 16 ವರ್ಷ ಮೇಲಿನ ಎಲ್ಲ ಕ್ರಿಕೆಟಿಗರು, ಪದಾಧಿಕಾರಿಗಳು, ಅಪೆಕ್ಸ್ ಕೌನ್ಸಿಲ್, ಐಪಿಎಲ್ ಆಡಳಿತ ಸಮಿತಿ ಸದಸ್ಯರು, ಅಧಿಕಾರಿಗಳಿಗೂ ಅನ್ವಯಿಸಲಿದೆ.

ಕೌನ್ಸಿಲ್ ಸಭೆಯಲ್ಲಿ ಒಂಬತ್ತು ಪುಟಗಳ ನಿಯಮಾವಳಿಯನ್ನು ಅಂಗೀಕರಿಸಲಾಗಿದೆ. ಅದರಲ್ಲಿ ಕರ್ತವ್ಯ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳ ವಿಚಾರಣೆ ಮತ್ತು ನಿರ್ವಹಣೆಗೆ ಸೂಚನೆ ನೀಡಲಾಗಿವೆ.


- ದೂರುಗಳ ವಿಚಾರಣೆಗೆ ನಾಲ್ವರು ಸದಸ್ಯರ ಆಂತರಿಕ ಸಮಿತಿ ರಚನೆ.
- ಸಮಿತಿಯ ಮುಖ್ಯಸ್ಥರಾಗಿ ಕಾರ್ಯಸ್ಥಾನದಲ್ಲಿರುವ ಮಹಿಳಾ ಅಧಿಕಾರಿ ನೇಮಕ
- ಕಾನೂನು ಜ್ಞಾನ, ಸಮಾಜ ಸೇವೆಯ ಅನುಭವ ಇರುವ ಇಬ್ಬರು ಉದ್ಯೋಗಿಗಳು ಸಮಿತಿಯಲ್ಲಿರಬೇಕು.
- ಸರ್ಕಾರೇತರ ಸಂಸ್ಥೆ ಅಥವಾ ಮಹಿಳಾಪರ ಸಂಘಟನೆ ಮತ್ತು ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಒಬ್ಬರು ಸಮಿತಿಯಲ್ಲಿರಬೇಕು.
- ಸಮಿತಿಯಲ್ಲಿ ಕನಿಷ್ಠ ಶೇ 50ರಷ್ಟು ಸದಸ್ಯರು ಮಹಿಳೆಯರೇ ಆಗಿರಬೇಕು.
- ದೂರುದಾರರು ಘಟನೆ ನಡೆದ ಮೂರು ತಿಂಗಳೊಳಗೆ ದೂರು ದಾಖಲಿಸಬೇಕು.
- ಸಮಿತಿಯು ವಿಚಾರಣೆಯನ್ನು 90 ದಿನಗಳೊಳಗೆ ಮುಗಿಸಿ ಬಿಸಿಸಿಐಗೆ ವರದಿ ಮತ್ತು ಶಿಫಾರಸು ಸಲ್ಲಿಸಬೇಕು
- ಆರೋಪಿಗೆ ತನ್ನ ಮೇಲಿನ ಆರೋಪಗಳ ಕುರಿತು ಹೇಳಿಕೆ ನೀಡಲು ಸಮಿತಿ 7 ದಿನಗಳ ಗಡುವು ನೀಡುತ್ತದೆ.
- ವರದಿ ಕೈಸೇರಿದ 60 ದಿನಗಳೊಳಗೆ ಬಿಸಿಸಿಐ ಕ್ರಮದ ಕುರಿತು ಪ್ರಕಟಿಸಬೇಕು
- ತಪ್ಪಿತಸ್ಥರೆಂದು ಸಾಬೀತಾದರೆ ಅಪರಾಧದ ಗಂಭೀರತೆಯನ್ನು ಪರಿಗಣಿಸಿ ಶಿಕ್ಷೆ ಜಾರಿಗೊಳಿಸಲಾಗುತ್ತದೆ.
- ನಿಷೇಧ, ಆಪ್ತ ಸಮಾಲೋಚನೆ, ಸಮುದಾಯ ಸೇವೆ, ಎಚ್ಚರಿಕೆ, ಸಂಬಳ ಕಡಿತ, ಸೇವಾ ಹಿರಿತನ ಕಡಿತ, ಕೆಲಸದಿಂದ ವಜಾ ಶಿಕ್ಷೆಗಳನ್ನು ವಿಧಿಸಲಾಗುವುದು.

200ನೇ ಪಂದ್ಯ ಆಡಿದ ಕೊಹ್ಲಿ

ವಿರಾಟ್ ಕೊಹ್ಲಿಯವರಿಗೆ ಇದು 200ನೇ ಪಂದ್ಯ. ಟೂರ್ನಿಯಲ್ಲಿ ಒಂದೇ ತಂಡದ ಪರವಾಗಿ ಇನ್ನೂರು ಪಂದ್ಯಗಳಲ್ಲಿ ಆಡಿದ ಏಕೈಕ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

2008ರಲ್ಲಿ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಎದುರು ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದರು.

ಆರ್‌ಸಿಬಿ ತಂಡದ ಆಟಗಾರರು ಈ ಪಂದ್ಯದಲ್ಲಿ ತಿಳಿನೀಲಿ ಬಣ್ಣದ ಪೋಷಾಕು ಧರಿಸಿ ಆಡಿದರು.



ವಿರಾಟ್ ಕೊಹ್ಲಿ

ಭಾರತ ಆಸ್ಟ್ರೇಲಿಯಾ ಹಣಾಹಣಿ ಇಂದು

ಮಕಾಯ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡಗಳ ನಡುವಣ ಏಕದಿನ ಸರಣಿಯ ಮೊದಲ ಪಂದ್ಯ ಮಂಗಳವಾರ ನಡೆಯಲಿದೆ.

ಭಾರತ ತಂಡದ ಹರ್ಮನ್‌ಪ್ರೀತ್ ಕೌರ್ ಅವರ ಹೆಬ್ಬೆರಳಿಗೆ ಗಾಯವಾಗಿರುವುದರಿಂದ ಅವರು ಕಣಕ್ಕಿಳಿಯುತ್ತಿಲ್ಲ.

ಪಂದ್ಯ ಆರಂಭ: ಬೆಳಿಗ್ಗೆ 5.35

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	8	6	2	00	00	12
ಡೆಲ್ಲಿ ಕ್ಯಾಪಿಟಲ್ಸ್	8	6	2	00	00	12
ಬೆಂಗಳೂರು	8	5	3	00	00	10
ಮುಂಬೈ ಇಂಡಿಯನ್ಸ್	8	4	4	00	00	8
ಕೋಲ್ಕತ್ತ ನೈಟ್‌ರೈಡರ್ಸ್	8	3	5	00	00	6
ರಾಜಸ್ಥಾನ್ ರಾಯಲ್ಸ್	7	3	4	00	00	6
ಪಂಜಾಬ್	8	3	5	00	00	6
ಹೈದರಾಬಾದ್	7	1	6	00	00	2

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket



ಬಲಾಬಲ

ಪಂದ್ಯ 22
ರಾಜಸ್ಥಾನ್ ಜಯ 12
ಪಂಜಾಬ್ ಜಯ 10

ಹೆಚ್ಚು ರನ್ ಗಳಿಸಿದವರು

ಕೆ.ಎಲ್. ರಾಹುಲ್ (ಪಂಜಾಬ್)
ರನ್ 331
ಪಂದ್ಯ 7

ಸಂಜು ಸ್ಯಾಮ್ಸನ್ (ರಾಜಸ್ಥಾನ್)
ಪಂದ್ಯ 7
ರನ್ 277

ಹೆಚ್ಚು ವಿಕೆಟ್

ಮೊಹಮ್ಮದ್ ಶಮಿ (ಪಂಜಾಬ್)
ಪಂದ್ಯ– 8
ವಿಕೆಟ್– 8

ಮುಸ್ತಫಿಜುರ್ ರೆಹಮಾನ್ (ರಾಜಸ್ಥಾನ್)
ಪಂದ್ಯ– 7
ವಿಕೆಟ್– 8

ಕೆ.ಎಲ್. ರಾಹುಲ್

ಪಂಜಾಬ್–ರಾಜಸ್ಥಾನ್ ಪಂದ್ಯ ಇಂದು; ಸಂಜು ಸ್ಯಾಮ್ಸನ್ ಮೇಲೆ ಒತ್ತಡ

ರಾಹುಲ್ ಬಳಗಕ್ಕೆ ರಾಯಲ್ಸ್ ಸವಾಲು

ದುಬೈ (ಪಿಟಿಐ): ಕನ್ನಡನಾಡಿನ ಕ್ರಿಕೆಟ್ ತಾರೆಗಳ ತಂಡ ಪಂಜಾಬ್ ಕಿಂಗ್ಸ್ ಮಂಗಳವಾರ ರಾಜಸ್ಥಾನ್ ರಾಯಲ್ಸ್ ತಂಡದ ಸವಾಲು ಎದುರಿಸಲಿದೆ. ಎರಡೂ ತಂಡಗಳಲ್ಲಿ ಸಿಡಿಲಬ್ಬರದ ಬ್ಯಾಟ್ಸ್‌ಮನ್‌ಗಳು ಇರುವುದರಿಂದ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಮೂಡಿದೆ.

ಕಿಂಗ್ಸ್‌ನಲ್ಲಿ ಕ್ರಿಸ್ ಗೇಲ್, ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್ ಟೂರ್ನಿಯ ಮೊದಲ ಹಂತದಲ್ಲಿ ಅಮೋಘ ಲಯದಲ್ಲಿದ್ದರು. ರನ್‌ಗಳನ್ನು ಪೇರಿಸಿದ್ದರು. ರಾಯಲ್ಸ್ ತಂಡದಲ್ಲಿರುವ ಲಿಯಾಮ್ ಲಿವಿಂಗ್‌ಸ್ಟೋನ್, ಎವಿನ್ ಲೂಯಿಸ್ ಕೂಡ ಬಲಾಢ್ಯ ಬ್ಯಾಟ್ಸ್‌ಮನ್‌ಗಳೇ ಆಗಿದ್ದಾರೆ.

ರಾಹುಲ್ ನಾಯಕತ್ವದ ಪಂಜಾಬ್ ತಂಡ ಮತ್ತು ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡಗಳು ಪಾಯಿಂಟ್ ಪಟ್ಟಿಯಲ್ಲಿ ಕ್ರಮವಾಗಿ ಐದು ಹಾಗೂ ಆರನೇ ಸ್ಥಾನದಲ್ಲಿವೆ. ಉಭಯ ತಂಡಗಳೂ ತಲಾ ಆರು ಅಂಕ ಗಳಿಸಿವೆ. ಈ ಹಂತದಲ್ಲಿ ಉತ್ತಮ ರನ್ ಸರಾಸರಿಯೊಂದಿಗೆ ಹೆಚ್ಚು ಪಂದ್ಯಗಳನ್ನು ಜಯಿಸುವ ಒತ್ತಡ ಎರಡೂ ತಂಡಗಳಿಗೆ ಇದೆ. ಪಂಜಾಬ್ ತಂಡದ ಮುಖ್ಯ ಕೋಚ್ ಅನಿಲ್ ಕುಂಬ್ಳೆ ತಮ್ಮ ತಂಡದ ಯುವ ಪ್ರತಿಭೆಗಳು ಮತ್ತು ಅನುಭವಿ ಆಟಗಾರರನ್ನು ಸಮರ್ಥವಾಗಿ ದುಡಿಸಿಕೊಳ್ಳುವತ್ತ ಯೋಜನೆ ರೂಪಿಸಿದ್ದಾರೆ. ಬ್ಯಾಟಿಂಗ್‌ನಲ್ಲಿ ಹೆಚ್ಚು ಯೋಚನೆಯಿಲ್ಲ. ಆದರೆ ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿಯೊಂದಿಗೆ ಉತ್ತಮ ಜೊತೆ ನೀಡುವಲ್ಲಿ ಉಳಿದ ಮಧ್ಯಮವೇಗಿಗಳು ಯಶಸ್ವಿಯಾದರೆ ತಂಡದ ಜಯಕ್ಕೆ ಹೆಚ್ಚು ಅವಕಾಶ ಇದೆ.

ರಾಯಲ್ಸ್ ತಂಡದಲ್ಲಿ ಆಲ್‌ರೌಂಡರ್ ಕ್ರಿಸ್ ಮೊರಿಸ್, ಡೇವಿಡ್ ಮಿಲ್ಲರ್ ಅವರಿಂದ ನಿರೀಕ್ಷಿತ ಆಟ ಮೂಡಿಬಂದರೆ ಹೆಚ್ಚು ಬಲ ಬರುತ್ತದೆ. ನಾಯಕ ಸಂಜು ತಮ್ಮ ಲಯಕ್ಕೆ ಮರಳುವ ಸವಾಲು ಇದೆ. ಯುವ ಬೌಲರ್ ಚೇತನ್ ಸಕಾರಿಯಾ, ಅನುಭವಿ ಜಯದೇವ್ ಉನದ್ಕತ್, ಕನ್ನಡಿಗ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಮೇಲೆಯೇ ಹೆಚ್ಚು ಹೊಣೆ ಬೀಳುವುದು ಖಚಿತ. ಪಂಜಾಬ್ ತಂಡದ ಆರಂಭಿಕ ಜೋಡಿ ರಾಹುಲ್ ಮತ್ತು ಮಯಂಕ್ ಅಗರವಾಲ್ ಅವರನ್ನು ನಿಯಂತ್ರಿಸುವುದು ರಾಜಸ್ಥಾನ್ ಬೌಲರ್‌ಗಳ ಮುಂದಿರುವ ಪ್ರಮುಖ ಹಾಗೂ ಕಠಿಣ ಸವಾಲು.



ಸಂಜು ಸ್ಯಾಮ್ಸನ್

ತಂಡಗಳು

ಪಂಜಾಬ್ ಕಿಂಗ್ಸ್: ಕೆ.ಎಲ್. ರಾಹುಲ್ (ನಾಯಕ), ಮಯಂಕ್ ಅಗರವಾಲ್, ಆರ್ಷದೀಪ್ ಸಿಂಗ್, ಇಶಾನ್ ಪೊರೆಲ್, ಶಾರೂಖ್ ಖಾನ್, ಮೊಹಮ್ಮದ್ ಶಮಿ, ನೇಥನ್ ಎಲ್ಲಿಸ್, ಆದಿಲ್ ರಶೀದ್, ಮುರುಗನ್ ಅಶ್ವಿನ್, ಹರಪ್ರೀತ್ ಬ್ರಾರ್, ಮೊಯಿಸೆಸ್ ಹೆನ್ರಿಕ್ಸ್, ಕ್ರಿಸ್ ಜೋರ್ಡಾನ್, ಏಡನ್ ಮಾರ್ಕರಮ್, ಮನದೀಪ್ ಸಿಂಗ್, ದರ್ಶನ್ ನಾಲ್ಕಂಡೆ, ಪ್ರಭಸಿಮ್ರನ್ ಸಿಂಗ್, ರವಿ ಬಿಷ್ಣೋಯಿ, ಉತ್ಕರ್ಷ್ ಸಿಂಗ್, ಫ್ಯಾಬಿಯನ್ ಅಲೆನ್, ಸೌರಭ್ ಕುಮಾರ್, ಜಲಜ್ ಸಕ್ಸೆನಾ.

ರಾಜಸ್ಥಾನ ರಾಯಲ್ಸ್: ಸಂಜು ಸ್ಯಾಮ್ಸನ್ (ನಾಯಕ), ಲಿಯಾಮ್ ಲಿವಿಂಗ್‌ಸ್ಟೋನ್, ಎವಿನ್ ಲೂಯಿಸ್, ಡೇವಿಡ್ ಮಿಲ್ಲರ್, ಕ್ರಿಸ್ ಮೊರಿಸ್, ಒಶಾನ್ ಥಾಮಸ್, ಮುಸ್ತಫಿಜುರ್ ರೆಹಮಾನ್, ಶ್ರೇಯಸ್ ಗೋಪಾಲ್, ತಬ್ರೇಜ್ ಶಮ್ಸಿ, ಗ್ಲೆನ್ ಫಿಲಿಪ್ಸ್, ಚೇತನ್ ಸಕಾರಿಯಾ, ರಿಯಾನ್ ಪರಾಗ್, ರಾಹುಲ್ ತೆವಾಟಿಯಾ, ಆಕಾಶ್ ಸಿಂಗ್, ಅನುಜ್ ರಾವತ್, ಕೆ.ಸಿ. ಕಾರ್ಯಪ್ಪ, ಯಶಸ್ವಿ ಜೈಸ್ವಾಲ್, ಶಿವಂ ದುಬೆ, ಜಯದೇವ್ ಉನದ್ಕತ್, ಮಯಂಕ್ ಮಾರ್ಕಂಡೆ, ಕಾರ್ತಿಕ್ ತ್ಯಾಗಿ, ಕುಲದೀಪ್ ಯಾದವ್.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಬೆಂಗಳೂರಿನಲ್ಲಿ ಲಂಕಾ ಎದುರಿನ ಟೆಸ್ಟ್

ಭಾರತ ಕ್ರಿಕೆಟ್ ತಂಡದ ತವರಿನ ಪಂದ್ಯಗಳ ವೇಳಾಪಟ್ಟಿ

ನವದೆಹಲಿ (ಪಿಟಿಐ): ಭಾರತ ಮತ್ತು ಶ್ರೀಲಂಕಾ ನಡುವಿನ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೆ ಮುಂದಿನ ವರ್ಷ ಬೆಂಗಳೂರು ಆತಿಥ್ಯ ವಹಿಸಲಿದೆ.

ಪಂದ್ಯ ಫೆಬ್ರುವರಿ 25ರಿಂದ ನಡೆಯಲಿದೆ. ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯ ಪಂದ್ಯ ಕೂಡ ಬೆಂಗಳೂರಿನಲ್ಲಿ ನಡೆಯಲಿದೆ.

ಭಾರತ ತಂಡ ಮುಂದಿನ ಋತುವಿನಲ್ಲಿ ತವರಿನಲ್ಲಿ ಆಡುವ ಪಂದ್ಯಗಳ ವೇಳಾಪಟ್ಟಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಬಿಡುಗಡೆ ಮಾಡಿದೆ. ಒಟ್ಟು 14 ಟಿ20, ನಾಲ್ಕು ಟೆಸ್ಟ್ ಹಾಗೂ ಮೂರು ಏಕದಿನ ಪಂದ್ಯಗಳು ನಡೆಯಲಿವೆ.

ನ್ಯೂಜಿಲೆಂಡ್ ವಿರುದ್ಧ ಎರಡು ಟೆಸ್ಟ್ ಮತ್ತು ಮೂರು ಟಿ20 ಪಂದ್ಯಗಳನ್ನು ಭಾರತ ಆಡಲಿದ್ದು ವೆಸ್ಟ್ ಇಂಡೀಸ್ ವಿರುದ್ಧ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳ ಸರಣಿಗಳನ್ನು ಆಡಲಿದೆ. ಶ್ರೀಲಂಕಾ ತಂಡ ಭಾರತದಲ್ಲಿ ಎರಡು ಟೆಸ್ಟ್ ಮತ್ತು ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಪಾಲ್ಗೊಳ್ಳಲಿದ್ದು ದಕ್ಷಿಣ ಆಫ್ರಿಕಾ 10 ದಿನಗಳ ಪ್ರವಾಸದಲ್ಲಿ ಐದು ಟಿ20 ಪಂದ್ಯಗಳನ್ನು ಆಡಲಿದೆ.

'ಆಸ್ಟ್ರೇಲಿಯಾದಲ್ಲಿ ಮುಂದಿನ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಅದಕ್ಕೂ ಮೊದಲು ಭಾರತಕ್ಕೆ ಸಾಕಷ್ಟು ಪಂದ್ಯಗಳು ಸಿಗಬೇಕಿದೆ. ಹೀಗಾಗಿ 14 ಪಂದ್ಯಗಳಿಗೆ ಆತಿಥ್ಯ ವಹಿಸಲು ಒಪ್ಪಿಕೊಳ್ಳಲಾಗಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಭಾರತದಲ್ಲಿ ನಡೆಯಲಿರುವ ಸರಣಿಗಳು

ಪ್ರವಾಸಿ ತಂಡ: ನ್ಯೂಜಿಲೆಂಡ್

ದಿನಾಂಕ	ಪಂದ್ಯ	ಆತಿಥ್ಯ
ನ.17	ಮೊದಲ ಟಿ20	ಜೈಪುರ
ನ.19	2ನೇ ಟಿ20	ರಾಂಚಿ
ನ.21	3ನೇ ಟಿ20	ಕೋಲ್ಕತ್ತ
ನ.25ರಿಂದ	ಮೊದಲ ಟೆಸ್ಟ್	ಕಾನ್ಪುರ
ಡಿ.3ರಿಂದ	2ನೇ ಟೆಸ್ಟ್	ಮುಂಬೈ

ಪ್ರವಾಸಿ ತಂಡ: ವೆಸ್ಟ್ ಇಂಡೀಸ್

ಫೆ.6	ಮೊದಲ ಏಕದಿನ	ಅಹಮದಾಬಾದ್
ಫೆ.9	2ನೇ ಏಕದಿನ	ಜೈಪುರ
ಫೆ.12	3ನೇ ಏಕದಿನ	ಕೋಲ್ಕತ್ತ
ಫೆ.15	ಮೊದಲ ಟಿ20	ಕಟಕ್
ಫೆ.18	2ನೇ ಟಿ20	ವಿಶಾಖಪಟ್ಟಣ
ಫೆ.20	3ನೇ ಟಿ20	ತಿರುವನಂತಪುರ

ಪ್ರವಾಸಿ ತಂಡ: ಶ್ರೀಲಂಕಾ

ಫೆ.25ರಿಂದ	ಮೊದಲ ಟೆಸ್ಟ್	ಬೆಂಗಳೂರು
ಮಾ.5ರಿಂದ	2ನೇ ಟೆಸ್ಟ್	ಮೊಹಾಲಿ
ಮಾ.13	ಮೊದಲನೇ ಟಿ20	ಮೊಹಾಲಿ
ಮಾ.15	2ನೇ ಟಿ20	ಧರ್ಮಶಾಲ
ಮಾ.18	3ನೇ ಟಿ20	ಲಖನೌ

ಪ್ರವಾಸಿ ತಂಡ: ದಕ್ಷಿಣ ಆಫ್ರಿಕಾ

ಜೂ.9	ಮೊದಲ ಟಿ20	ಚೆನ್ನೈ
ಜೂ.12	2ನೇ ಟಿ20	ಬೆಂಗಳೂರು
ಜೂ.14	3ನೇ ಟಿ20	ನಾಗ್ಪುರ
ಜೂ.17	4ನೇ ಟಿ20	ರಾಜ್‌ಕೋಟ್
ಜೂ.19	5ನೇ ಟಿ20	ದೆಹಲಿ

ತಡವಾಗಿ ಬಂದದ್ದಕ್ಕೆ ಮುಂಗೈ ಮುರಿತ

ಗೋಣಿಕೊಪ್ಪಲು: ಪೊನ್ನಂಪೇಟೆ ಸಾಯಿ (ಕ್ರೀಡಾ ವಸತಿ ಶಾಲೆ) ಶಾಲೆಯ ವಿದ್ಯಾರ್ಥಿ ವಿಪುಲ್ ಉತ್ತಪ್ಪ ಅವರಿಗೆ ತರಬೇತುದಾರ ಬುಟ್ಟಿಯಂಡ ಚಂಗಪ್ಪ ಥಳಿಸಿದ್ದು, ವಿದ್ಯಾರ್ಥಿಯ ಮುಂಗೈಗೆ ಬಲವಾದ ಪೆಟ್ಟು ಬಿದ್ದಿದೆ ಎಂದು ಪೋಷಕರು ದೂರಿದ್ದಾರೆ.

ಕ್ರೀಡಾ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿಪುಲ್ (13) ಹಾಕಿ ತರಬೇತಿ ಸಮಯಕ್ಕೆ ಹಾಜರಾಗುತ್ತಿರಲಿಲ್ಲ ಎಂಬ ಕಾರಣಕ್ಕೆ ಕುಪಿತಗೊಂಡ ತರಬೇತುದಾರ ಚಂಗಪ್ಪ ಹಾಕಿ ಸ್ಟಿಕ್ ನಿಂದ ವಿದ್ಯಾರ್ಥಿಗೆ ಥಳಿಸಿದ್ದಾರೆ.

'ಆತನ ಬಲಗೈಗೆ ತೀವ್ರ ಪೆಟ್ಟು ಬಿದ್ದಿದ್ದು ಮುಂಗೈ ಮೂಳೆ ಮುರಿದಿರುವುದು ಎಕ್ಸರೇಯಿಂದ ಪತ್ತೆಯಾಗಿದೆ ಎಂದು ಪೋಷಕ ಉತ್ತಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತರಬೇತುದಾರರ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ತರಬೇತುದಾರ ಬುಟ್ಟಿಯಂಡ ಚಂಗಪ್ಪ, 'ಉದ್ದೇಶ ಪೂರ್ವಕವಾಗಿ ವಿದ್ಯಾರ್ಥಿಯನ್ನು ಥಳಿಸಿಲ್ಲ. ಆಕಸ್ಮಿವಾಗಿ ನಡೆದ ಘಟನೆ ಇದಾಗಿದೆ' ಎಂದು ತಿಳಿಸಿದರು.

ವಸತಿ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬೀಳಗಿ ಭೇಟಿ ನೀಡಿ ಪರಿಶೀಲಿಸಿದರು. ಘಟನೆ ಬಗ್ಗೆ ವರದಿ ತರಿಸಿಕೊಂಡು ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರಶಸ್ತಿಗೆ ಮಾಡರ್ನ್, ರೂಟ್ಸ್ ಸೆಣಸು

ಬೆಂಗಳೂರು: ಮಾಡರ್ನ್ ಗರ್ಲ್ಸ್ ಎಫ್‌ಸಿ ಮತ್ತು ರೂಟ್ಸ್ ಫುಟ್‌ಬಾಲ್ ಕ್ಲಬ್ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಮಹಿಳೆಯರ 'ಎ' ಡಿವಿಷನ್ ಲೀಗ್‌ನ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿಗಾಗಿ ಬುಧವಾರ ಸೆಣಸಲಿವೆ.

ಈ ತಂಡಗಳು ಕ್ರಮವಾಗಿ ಮೊದಲ ಮತ್ತು ಎರಡನೇ ಗುಂಪಿನಲ್ಲಿ ಅಗ್ರ ಸ್ಥಾನ ಗಳಿಸಿವೆ.

ದೇಶಿ ಕ್ರಿಕೆಟಿಗರಿಗೆ ಪರಿಹಾರ: ಎಲ್ಲ ವಿಭಾಗದ ಆಟಗಾರರ ಸಂಭಾವನೆ ಹೆಚ್ಚಳ

ನವದೆಹಲಿ (ಪಿಟಿಐ): ಕಳೆದ ಋತುವಿನಲ್ಲಿ ಕೋವಿಡ್–19ರಿಂದಾಗಿ ತೊಂದರೆಗೆ ಒಳಗಾಗಿದ್ದ ದೇಶಿ ಕ್ರಿಕೆಟ್ ಆಟಗಾರರಿಗೆ ಪರಿಹಾರದ ರೂಪದಲ್ಲಿ ಪಂದ್ಯದ ಸಂಭಾವನೆಯ 50 ಶೇಕಡಾ ಮೊತ್ತವನ್ನು ಹೆಚ್ಚುವರಿಯಾಗಿ ನೀಡಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ತಿಳಿಸಿದೆ. ಮುಂದಿನ ಋತುವಿನಲ್ಲಿ ಸಂಭಾವನೆಯನ್ನು ಹೆಚ್ಚಿಸುವುದಕ್ಕೂ ನಿರ್ಧರಿಸಲಾಗಿದೆ.

ಕಳೆದ ವರ್ಷ ರಣಜಿ ಟೂರ್ನಿ ನಡೆಯದೇ ಇದ್ದುದರಿಂದ ಅನೇಕ ಕ್ರಿಕೆಟಿಗರು ತೊಂದರೆಗೆ ಒಳಗಾಗಿದ್ದರು. ಅವರು ಬಿಸಿಸಿಐ ನೀಡಬೇಕಾಗಿದ್ದ ಸಂಭಾವನೆಗಾಗಿ ಕಾಯುತ್ತಿದ್ದರು.

'2019–20ರ ಋತುವಿನಲ್ಲಿ ರಣಜಿ ಪಂದ್ಯಗಳನ್ನು ಆಡಿದವರಿಗೆ 2020–21ನೇ ಸಾಲಿನ ಸಂಭಾವನೆಯಾಗಿ ಹೆಚ್ಚುವರಿ ಹಣ ನೀಡಲು ನಿರ್ಧರಿಸಲಾಗಿದೆ' ಎಂದು ಮಂಡಳಿಯ ಪ್ರಧಾನ ಕಾರ್ಯದರ್ಶಿ ಜಯ್ ಶಾ ಟ್ವೀಟ್ ಮಾಡಿದ್ದಾರೆ. ಸೋಮವಾರ ನಡೆದ ಮಂಡಳಿಯ ಅಪೆಕ್ಸ್ ಸಮಿತಿ ಸಭೆಯಲ್ಲಿ, ಪರಿಹಾರ ನೀಡಲು ಮತ್ತು ಪಂದ್ಯದ ಸಂಭಾವನೆ ಹೆಚ್ಚಿಸಲು ನಿರ್ಧರಿಸಲಾಯಿತು.

40ಕ್ಕೂ ಹೆಚ್ಚು ರಣಜಿ ಪಂದ್ಯಗಳನ್ನು ಆಡಿರುವವರು ಇನ್ನು ಮುಂದೆ ಪ್ರತಿ ಪ್ರಥಮ ದರ್ಜೆ ಪಂದ್ಯಕ್ಕೆ ₹ 2.40 ಲಕ್ಷದಷ್ಟು ಗಳಿಸಲಿದ್ದಾರೆ. 21ರಿಂದ 40 ಪಂದ್ಯಗಳನ್ನು ಆಡಿರುವವರಿಗೆ ದಿನವೊಂದಕ್ಕೆ ₹ 50 ಸಾವಿರದಷ್ಟು ಸಿಗಲಿದ್ದು ಉಳಿದ ಆಟಗಾರರಿಗೆ ದಿನವೊಂದಕ್ಕೆ ₹ 40 ಸಾವಿರ ಸಿಗಲಿದೆ. 16 ವರ್ಷದೊಳಗಿನವರ ವಿಭಾಗದಿಂದ ಸೀನಿಯರ್ ವರೆಗಿನ ಸುಮಾರು ಎರಡು ಸಾವಿರ ಆಟಗಾರರು ಇದರ ಲಾಭ ಪಡೆದುಕೊಳ್ಳಲಿದ್ದಾರೆ. ಪ್ರಥಮ ದರ್ಜೆ, ಏಕದಿನ ಮತ್ತು ಟಿ20 ಪಂದ್ಯಗಳನ್ನು ಒಳಗೊಂಡ ಋತುವಿನ ಎಲ್ಲ ಪಂದ್ಯಗಳನ್ನು ಆಡಿದರೆ ಪ್ರತಿ ಆಟಗಾರ ₹ 20 ಲಕ್ಷದಷ್ಟು ಗಳಿಸಲಿದ್ದಾರೆ.

23 ಮತ್ತು 19 ವರ್ಷದೊಳಗಿನ ವಿಭಾಗದ ಆಟಗಾರರು ಪಂದ್ಯವೊಂದರ ಪ್ರತಿ ದಿನ ಕ್ರಮವಾಗಿ ₹ 25 ಸಾವಿರ ಮತ್ತು ₹ 20 ಸಾವಿರ ಗಳಿಸಲಿದ್ದಾರೆ. 16 ವರ್ಷದೊಳಗಿನವರು ₹ 3500ರ ಬದಲು ₹ 7 ಸಾವಿರ ಗಳಿಸಲಿದ್ದಾರೆ.

ಮಹಿಳಾ ಕ್ರಿಕೆಟಿಗರ ಸಂಭಾವನೆಯನ್ನು ಪಂದ್ಯವೊಂದಕ್ಕೆ ₹ 12 ಸಾವಿರದಿಂದ ₹ 20 ಸಾವಿರಕ್ಕೆ ಏರಿಸಲಾಗಿದೆ. 23 ಮತ್ತು 19 ವರ್ಷದೊಳಗಿನ ಬಾಲಕಿಯರು ₹ 10 ಸಾವಿರ ಗಳಿಸಲಿದ್ದಾರೆ.